ಸಂಕಲನ

೩ನೇ ವರ್ಷ ೧೪ ಜುಲಾಯಿ ೨೦೦೪

೧೬

ಸಂಪಾದಕರು
ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು. ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ೧೪ ರ ದಿನಾಂಕ ಹೊತ್ತು ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

೯. ಸಂಕಲನದ ವಾರ್ಷಿಕ ಚಂದಾ ರೂ. ೧೫೦/-

ಸಂಕಲನ

೧೬

೧೪ ಜುಲಾಯಿ ೨೦೦೪

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :
A Kannada Literary Magazine
Volume 3, Issue 4 : 14 July 2004
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004

Yearly subscription : Rs. 150/-

Printed by Saraswati Offset Printers, Shivaji Road, Dharwad - 580 001

•
•
•

ಸಂಕಲನ - ೧೬ : ಸಂಪುಟ ೩, ಸಂಚಿಕೆ ೪ : ೧೪ ಜುಲಾಯಿ ೨೦೦೪
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೭೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವರ್ಷ ೨೦೦೪ ರಲ್ಲಿ ಪ್ರಕಟವಾಗುವ ಸಂಕಲನದ
ಆರು ಸಂಚಿಕೆಗಳ ಒಟ್ಟು ೪೯೨ ಪುಟಗಳ ಬೆಲೆ ರೂ. ೧೫೦/-
ಚಂದಾ ಹಣವನ್ನು ಮನಿಆರ್ಡರ್ ಇಲ್ಲವೆ ಕ್ರಾಸ್ ಮಾಡಿದ ಡಿ. ಡಿ. ಮೂಲಕ
ಸಂಕಲನ ಅಥವಾ ಸಂಪಾದಕರ ಹೆಸರಿಗೆ ಕಳಿಸುವುದು.
ಚೆಕ್ ಕಳಿಸುವುದಾದಲ್ಲಿ ಬ್ಯಾಂಕ್ ಕಮೀಶನ್ ರೂ. ೨೦/- ಹೆಚ್ಚಿಗೆ ಸೇರಿಸುವುದು.

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಮೇನ್, ವಿಜಯನಗರ, ಧಾರವಾಡ - ೫೮೦ ೦೦೩

ಸಂಪಾದಕರ ಮಾತು

ಈಗ ತನ್ನ ಎರಡೂವರೆ ವರ್ಷ ಮುಗಿಸಿದ ಸಂಕಲನ ಇನ್ನು ೩ ಸಂಚಿಕೆಗಳನ್ನು ಪ್ರಕಟಿಸಿದರೆ ಯಶಸ್ವೀ ಮೂರನೇ ವರ್ಷವನ್ನು ಪೂರಯಿಸುತ್ತದೆ. ೨೦೦೨ ರ ಜನೆವರಿಯಲ್ಲಿ ಬಂದ ಮೊದಲ ಸಂಚಿಕೆಯಲ್ಲಿ ವ್ಯಕ್ತಪಡಿಸಿದ್ದ ಎಲ್ಲ ಆಶ್ವಾಸನೆ, ಇಚ್ಛೆಗಳನ್ನು ಇನ್ನೂ ಹೆಚ್ಚು ಪ್ರಮಾಣದಲ್ಲಿ ಈಡೇರಿಸುತ್ತ ಬಂದಿದ್ದೇವೆ. ಪ್ರದೇಶ, ಕಾಲ, ವಯಸ್ಸು, ಜಾತಿ ಧರ್ಮ, ಪಂಗಡ ಗುಂಪು ಮುಂತಾದುವನ್ನು ಮೀರಿ ನಿಂತು ಸಾಹಿತ್ಯದ, ನಮ್ಮ ದೃಷ್ಟಿಯಲ್ಲಿ ಉತ್ತಮವೆನಿಸಿದ, ಎಲ್ಲ ಬಗೆಯ ಬರೆಹಗಳನ್ನು, ಲೇಖಕರನ್ನು, 'ನನ್ನ ಅವ್ವ ನನ್ನ ಅಪ್ಪ', 'ಕಡೀಪುಟ', ಆತ್ಮಕಥೆಗಳು, ಏಕಕೃತಿ ಕುರಿತು ವಿವಿಧ ಲೇಖಕರು ಬರೆಯುವ ವಿಮರ್ಶೆಗಳು ಮುಂತಾದ ಹಲವಾರು ಹೊಸ ಬಗೆಯ, ಐತಿಹಾಸಿಕ ದಾಖಲೆಗೆ ನೆರವಾಗುವಂಥ ಅಂಕಣ ಲೇಖನಗಳನ್ನು ಪ್ರಕಟಿಸುತ್ತ ಬಂದಿದ್ದೇವೆ.

ಇಷ್ಟು ಅಲ್ಪಾವಧಿಯಲ್ಲಿ ಹೆಸರಾದ ಸಂಕಲನವನ್ನು ಅನೇಕ ಪ್ರತಿಷ್ಠಿತ ಲೇಖಕರು ಆತ್ಮೀಯರು ಮುಕ್ತ ಭಾವದಿಂದ ಪ್ರಶಂಸಿಸಿದ್ದಾರೆ.

ಆದರೆ ವಾರ್ಷಿಕ ಚಂದಾದಾರರ ಅಸಹಕಾರ, ಸಕಾಲದಲ್ಲಿ ಚಂದಾ ಕೊಡದಿರುವಿಕೆಯಿಂದ ಸಂಕಲನಕ್ಕೆ ಆತಂಕ, ತೊಂದರೆಯಾಗಿದೆ. ಸಂಕಲನವನ್ನು ೨೦೦೫ ರಿಂದ ಮುಂದುವರಿಸಬೇಕೋ ಬೇಡವೋ ಎಂಬುದನ್ನು ಈಗ ನಿರ್ಧರಿಸಬೇಕಾಗಿದೆ. ನಿಲ್ಲಿಸಬಾರದೆಂಬ ಒತ್ತಾಸೆ ಒತ್ತಡಗಳೂ ಇವೆ. ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ನಾವು ಯೋಚಿಸಿ ನಿರ್ಧರಿಸಿರುವುದು ಇಷ್ಟು :

ಈಗಾಗಲೇ ೩ ವರ್ಷ ನಡೆಸಿದಂತೆ ಇನ್ನು ಮುಂದಿನ ೩ ವರ್ಷಗಳ ವರೆಗೆ ಸಂಕಲನ ನಡೆಸುವುದು. ಈಗಿನ ವೆಚ್ಚಗಳ ಅಂದಾಜಿನಂತೆ ಈ ಮೂರೂ ವರ್ಷಗಳ ಚಂದಾ ಹಣ ರೂ. ೫೦೦/- ನ್ನು ಒಟ್ಟಾಗಿ ಒಮ್ಮೆಗೇ ಒಂದೇ ಕಂತಿನಲ್ಲಿ ಕೊಡುವವರ ಸಲುವಾಗಿ ಮಾತ್ರ ಪ್ರಕಟಿಸುವುದು. ಇಂಥ ಚಂದಾದಾರರ ಸಂಖ್ಯೆಯಷ್ಟೇ ಪ್ರತಿಗಳನ್ನು ಪ್ರಕಟಿಸುವುದರಿಂದ ಆ ಮೂರು ವರ್ಷಗಳ ಮಧ್ಯದಲ್ಲಿ ಯಾವ ಹೊಸಬರಿಗೂ ಸಂಚಿಕೆಗಳು ಲಭ್ಯವಾಗುವುದಿಲ್ಲ. ವಾರ್ಷಿಕ ಚಂದಾದಾರಿಕೆ ಇಲ್ಲವೇ ಇಲ್ಲ. ರೂ. ೫೦೦/- ನ್ನು ನಕದಾಗಿ / ಎಂ.ಓ. / ಡಿ.ಡಿ. ಮೂಲಕ ಕಳಿಸಬಹುದು. ಚೆಕ್ ಕಳಿಸುವುದಾದಲ್ಲಿ ಕ್ರಾಸ್ ಮಾಡಿ ರೂ. ೫೫೦/- ಕ್ಕೆ ಕಳಿಸಬೇಕು. ಚಂದಾ ಕಳಿಸುವವರು ಈ ವರ್ಷದ ಅಂದರೆ, ೨೦೦೪ ರ ಡಿಸೆಂಬರ್ ೨೫ ರ ಒಳಗಾಗಿ ತಲುಪುವಂತೆ ಕಳಿಸಬೇಕು. ಇಂಥವರ ಸಂಖ್ಯೆ ಕನಿಷ್ಠ ೬೦೦ ಆದರೆ ಮಾತ್ರ ಸಂಕಲನವನ್ನು ಮುಂದುವರಿಸಲಾಗುವುದು. ಆ ದಿನಾಂಕದೊಳಗಾಗಿ ಅಷ್ಟು ಜನ ಚಂದಾದಾರರಾಗದಿದ್ದರೆ ೨೦೦೫ ಜನೆವರಿ ೧೪ ರ ಸಂಚಿಕೆ ಪ್ರಕಟವಾಗುವುದಿಲ್ಲ ಮತ್ತು ಜನೆವರಿ ೨೫ ರ ಒಳಗಾಗಿ ಚಂದಾ ಕಳಿಸಿದವರೆಲ್ಲರ ಹಣವನ್ನು ಅವರು ಕಳಿಸಿದ ರೀತಿಯಲ್ಲಿಯೇ ಕೃತಜ್ಞತಾಪೂರ್ವಕ ಮರಳಿಸಲಾಗುವುದು.

ದಯವಿಟ್ಟು ಸಹಕರಿಸಿರಿ.

೧ ಜುಲಾಯಿ ೨೦೦೪
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಪರಿವಿಡಿ

೧. ನನ್ನಪ್ಪ ನನ್ನವ್ವ : **ಗೀತಾ ನಾಗಭೂಷಣ** ೫ - ೧೨

೨. ನನ್ನ ಅಪ್ಪ : **ಕಾರ್‍ಯಾನಂದ** ೧೩ - ೧೭

೩. ಮಳೆ ಬಂದ ಮಾರನೆಯ ದಿನ : **ಗುಂಡಣ್ಣಾ ಕಲಬುರ್ಗಿ** ೧೭ - ೧೮

೪. ಕಾನೂನು : **ಶಂಕರಗೌಡ ಸಾತ್ಮಾರ** ೧೮

೫. ಒಂದು ಜೀವನಾನುಭವಗಾಥೆ : **ಎಚ್. ಡಿ. ಚಂದ್ರಪ್ಪಗೌಡ** ೧೯ - ೨೨

೬. ಅಯ್ದು ಕವಿತೆಗಳು : **ಬಸವರಾಜ ವಕ್ಕುಂದ** ೨೨ - ೨೬

೭. ಮಹೆಜಬೀನ್‌ರ ಎರಡು ತೆಲುಗು ಕವಿತೆಗಳು : **ಚಿದಾನಂದ ಸಾಲಿ** ೨೭ - ೨೮

೮. ಮೂರು ಟಿಪ್ಪಣಿಗಳು : **ಸುಮತೀಂದ್ರ ನಾಡಿಗ** ೨೯ - ೩೩

೯. ಶತಮಾನದ ಸಾಹಿತಿ ಹಾವರ್ಡ್ ಫಾಸ್ಟ್ : **ಜಿ. ಭಾಸ್ಕರ ಮಯ್ಯ** ೩೪ - ೩೭

೧೦. ಸ್ವರ್ಗಕಾಮ : **ಸಂತೋಷ ಚೊಕ್ಕಾಡಿ** ೩೮ - ೪೧

೧೧. ಭಗವದ್ಗೀತೆಯಲ್ಲಿ ಯಜ್ಞ ಮತ್ತು ಅದರ ಅರ್ಥ : **ಸಿ. ಸೋಮಶೇಖರಯ್ಯ** ೪೨ - ೪೬

೧೨. ತುಂಟ ಮಂಗನ ಕತೆ.... : **ಚಂದ್ರಗೌಡ ಕುಲಕರ್ಣಿ** ೪೬ - ೪೯

೧೩. ಫ್ಯಾಷನ್ : ಕೆಲವು ಅನ್ನಿಸಿಕೆಗಳು : **ಪ್ರಸನ್ನ** ೪೯ - ೫೨

೧೪. ಕೇಶವಿನ್ಯಾಸ : **ಶೈಲಾ ಛಬ್ಬಿ** ೫೨ - ೫೮

೧೫. ಹೇ! ರಕ್ಷಕ : ನಾಟಕ : **ನಾರಾಯಣ ಕಂಗಿಲ** ೫೮ - ೬೨

೧೬. ಪುಸ್ತಕ ಪರಿಶೀಲನೆ : ೬೨ - ೭೬

೧) ನೆನಪು ಗರಿಬಿಚ್ಚಿದಾಗ : ಎಲ್. ವಿ. ಶಾಂತಕುಮಾರಿ—**ಶ್ರೀಪತಿ ಮಂಜನಬೈಲು**; ೨) ಮೌನ ಮೆರವಣಿಗೆ : ಶಂಕರ ತಲ್ಲೂರ; ೩) ದೇವಬಾಗ : ಚಂದ್ರಶೇಖರ ಪಾಟೀಲ—**ದೇಶಪಾಂಡೆ ಸುಬ್ಬರಾಯ**; ೪) ಪುಷ್ಪಮಾಲೆ : ಹಜರತ್ ಜನಾಬಪೀರ ಶ್ರೀಗುರು ಸೈಯದಗೌಸಮದ್ನಿ; ೫) ಮಂದಹಾಸದ ಹಿಂದೆ : ನರಸಿಂಹ ಪರಾಂಜಪೆ; ೬) ದಾರೀಗೆ ಜತೆಯಿಲ್ಲ : ಜಿ. ಎಸ್. ಉಜ್ಜನಪ್ಪ—**ಬ. ಸೋ. ಗೊರವರ**; ೭) ಸಂಸ್ಕೃತಿ ಶೋಧ : ರಾಜಶೇಖರ ಇಚ್ಚಂಗಿ —**ಚಂದ್ರಗೌಡ ಕುಲಕರ್ಣಿ**; ೮) ಬಗೆದಷ್ಟು ಬಾನು : ಅರುಂಧತಿ ರಮೇಶ್; ೯) ಸೂರ್ಯ-ಪ್ರೀತಿ : ಬಂದಗದ್ದೆ ರಾಧಾಕೃಷ್ಣ; ೧೦) ಬರಡು ಭೂಮಿಯ ಸತ್ಯಗಳು : ಡಿ. ಸಿ. ರಾಜಪ್ಪ; ೧೧) ನಾಕು ಸಾಲುಗಳ ನಡುವೆ : ಮಲ್ಲಿಕಾರ್ಜುನ ಬನ್ನಿ—**ಅಶೋಕ ಶೆಟ್ಟರ್**;-೧೨) ಕುನಾಲ : ಶರಣಗೌಡ ಎರಡೆತ್ತಿನ —**ಎಂ. ಡಿ. ಗೋಗೇರಿ**; ೧೩) ಈ ಮಣ್ಣು ಅಪ್ಪಿಕೊಳ್ಳುವ ಮುನ್ನ : ಗವಿಸಿದ್ಧ ಎನ್. ಬಳ್ಳಾರಿ—**ಎಚ್. ಎಸ್. ಪಾಟೀಲ**; ೧೪) ಕಥನ ಕುತೂಹಲ : ಸಂ. ಮೋಹನ ನಾಗಮ್ಮನವರ; ೧೫) ಮಾರಿ : ಡಿ. ಸಿ. ರಾಜಪ್ಪ; ೧೬) ವೀರಶೈವ ವಿಚಾರಧಾರೆ : ಸಿ. ಸೋಮಶೇಖರಯ್ಯ —**ಶಿವಶಂಕರ ಹಿರೇಮಠ**; ೧೭) ವನ್ ಡೇ ಮಾತರಂ : ಎಚ್. ವಿ. ವೆಂಕಟಸುಬ್ಬಯ್ಯ; ೧೮) ರತ್ನಕಂಕಣ : ಮ. ಸು. ಕೃಷ್ಣಮೂರ್ತಿ—**ದುಷ್ಯಂತ ನಾಡಗೌಡ**; ೧೯) ಚುಟುಕು ಚಿಲುಮೆ : ಸಂ. ಬೆಟ್ಟದೂರು, ಪಾಟೀಲ, ಬಳ್ಳಾರಿ, ಮದರಿ—**ಪಾರ್ವತಿ ಪೂಜಾರ**

೧೭. ಸಂಕಲನ : ಅನಿಸಿಕೆ **:** ೭೬ - ೭೯

೧೮. ಕಡೀ ಪುಟ : **ಸಿದ್ಧಲಿಂಗ ಪಟ್ಟಣಶೆಟ್ಟಿ :** ೮೦ + ಆವರಣ ಪುಟ ೩

ನನ್ನಪ್ಪ ನನ್ನವ್ವ

ಗೀತಾ ನಾಗಭೂಷಣ

ಆವಾಗ ನಾನಿನ್ನೂ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದೆ. ನನಗೆ ಚೆನ್ನಾಗಿ ನೆನಪಿದೆ. ನನ್ನ ಅಪ್ಪ ಆಗ ಕಲಬುರ್ಗಿಯ ಬಟ್ಟೆ ಗಿರಣಿಯೊಂದರಲ್ಲಿ ಕಾರ್ಮಿಕನಾಗಿದ್ದ. ಅವ್ವ ಮನೆಯಲ್ಲೇ ಇದ್ದರೂ ಒಂದೆಮ್ಮೆ ಕಟ್ಟಿಕೊಂಡು ಅದರ ಹಾಲು ಮಾರಿ ಒಂದಿಷ್ಟು ಚಿಲ್ಲರೆ ಹಣ ಗಳಿಸುತ್ತಿದ್ದಳು. ಅಪ್ಪನಿಗೆ ತಿಂಗಳಿಗೆ ಐವತ್ತು ರೂಪಾಯಿ ಪಗಾರ. ನನ್ನವ್ವ ಅಪ್ಪನಿಗೆ ನಾವು ಮೂವರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ– ಒಟ್ಟು ನಾಲ್ಕು ಮಂದಿ ಮಕ್ಕಳು. ಅಪ್ಪನ ಐವತ್ತು ರೂಪಾಯಿಯ ಪಗಾರ ನಮ್ಮ ಕುಟುಂಬಕ್ಕೆ ಸಾಕಾಗುತ್ತಿರಲಿಲ್ಲ. ಅವ್ವನ ಎಮ್ಮಿಯ ಹಾಲಿನ ಮಾರಾಟದ ಪುಡಿಗಾಸಿನಿಂದಲೂ ನಮಗೆ ಎರಡು ಹೊತ್ತು ಊಟಕ್ಕೆ, ಅದೂ ಬ್ಯಾಳಿ ರೊಟ್ಟಿಗೆ ಹೇಗೋ ಸಾಕಾಗುತ್ತಿತ್ತೇ ಹೊರತು ತಿಂಗಳ ಕೊನೆಯಲ್ಲಿ ಕೈ ಖಾಲಿಯೇ. ಅಂಥದ್ದರಲ್ಲಿ ನನ್ನ ಓದಿಗೆ ಅಂತ ಪಾಟಿ, ಬಳಪ, ಕಾಪಿ, ಪೆನ್ನು, ಪೆನ್ಸಿಲ್ಲು ಅಂತ ಒಂದೀಟು ಖರ್ಚು ಬೇರೆ. ಆದರೂ ಹೇಗೋ ಮಾಡಿ ನನ್ನಪ್ಪ ನನ್ನನ್ನು ಶಾಲೆಗೆ ಕಳಿಸುತ್ತಿದ್ದ. 'ನನ್ ಮಗಳು ಭಾಳ ಓದ್ಬೇಕು. ಬಿ.ಎ., ಎಂ.ಎ. ಮಾಡ್ಬೇಕು. ತಾಲುಕದಾರೋ ತಸೀಲ್ದಾರೋ ಆಗ್ಬೇಕು' ಅಂತ ಮನಸ್ಸಿನಲ್ಲಿಯೇ ಕನಸಿನ ಚಿತ್ತಾರ ಬಿಡಿಸುತ್ತ ಅವುಗಳಿಗೆ ಚೆಂದದ ಬಣ್ಣ ತುಂಬುತ್ತಿದ್ದ!

ನನ್ನ ಅಪ್ಪ ನೋಡಲು ಬಹಳ ಚೆಲುವಾಗಿದ್ದ. ಪೈಲ್ವಾನನಂಥ ಮೈಕಟ್ಟು, ಸರ್ದಾರಜಿಗಳಂಥ ಎತ್ತರದ ಧೀರ ಗಂಭೀರ ನಿಲುವು. ದೊಡ್ಡ ದೊಡ್ಡ ಕಡಗಪ್ಪು ಕಣ್ಣುಗಳು. ಗರುಡ ಮೂಗಿನಡಿಯಲ್ಲಿ ತಲವಾರ ಮೀಸೆ, ತುಂಬು ಮುಖ. ಬಿಳಿ ಧೋತರ, ಬಿಳಿಯದೇ ನೆಹರೂ ಶರ್ಟು, ತಲೆಗೊಂದು ಬಿಳಿ ರುಮಾಲು ಸುತ್ತಿಕೊಂಡು ಅವನು ರಸ್ತೆಯ ಮೇಲೆ ಹೊರಟರೆ ಒಮ್ಮೆ ನೋಡಿದವರು ಮತ್ತೊಮ್ಮೆ ನೋಡಬೇಕು. ಹಾಗಿದ್ದನು ನನ್ನಪ್ಪ. ಆದರೆ ಅವನು ಅಕ್ಷರಸ್ಥನಾಗಿರಲಿಲ್ಲ. ಹೆಬ್ಬೆಟ್ಟಿನ ಒಡೆಯನೇ. ಖರೇ. ಕಾರ್ಮಿಕ ಬೇರೆ. ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ್ದ ದೇಶಪ್ರೇಮಿ. ನಮ್ಮ ಕೇರಿಯ ಫೋಟೋ ಹಣಮಂತರಾವ ಅನ್ನುವ ಸ್ವಾತಂತ್ರ್ಯ ಹೋರಾಟಗಾರರ ಮುಖಂಡರೊಬ್ಬರು ನನ್ನಪ್ಪನಂಥ ಎಷ್ಟೋ ಮಂದಿಯನ್ನು ಕರೆದು, ಗಂಟೆಗಟ್ಟಲೆ ಅವರಿಗೆ ತಿಳಿಸಿ ಹೇಳಿ, ಭಾಷಣ ಬಿಗಿದು ಚಳುವಳಿಯಲ್ಲಿ ಸೇರುವಂತೆ ಮಾಡಿದ್ದರು. ಹೀಗಾಗಿ ನನ್ನಪ್ಪ ಅನಕ್ಷರಸ್ಥನಾಗಿದ್ದರೂ ಸ್ವಾತಂತ್ರ್ಯ ಚಳಿವಳಿಯಲ್ಲಿ ಧುಮುಕಿದ್ದ. ಗಿರಣಿಯ ಕೆಲಸ ಬಿಟ್ಟು 'ವಂದೇ ಮಾತರಂ' ಮಂತ್ರ ಪಠಿಸಿ ಜೈಲು ಸೇರಿದ್ದ. ಆಗ ನನ್ನವ್ವ ಹದಿನಾರರ ಹರೆಯದ ಹೆಣ್ಣು. ಬಸುರಿ ಬೇರೆ. ತುಂಬಿದ ಗರ್ಭಿಣಿಯನ್ನು ಬಿಟ್ಟು ಅಪ್ಪಯ್ಯ ಸೆರೆಮನೆ ಸೇರಿದಾಗ ಪಾಪ ಅವ್ವ ಕಂಗಾಲಾದಳು. ಹೇಳಿ ಕೇಳಿ ಅವರದ್ದು ಬಾಲ್ಯವಿವಾಹ. ಅವ್ವ ಮೈನೆರೆಯುವ ಮೊದಲೇ ಮದುವೆಯಾದದ್ದು. ಸುಮಾರು ಹದಿಮೂರರಲ್ಲಿ ಮೈನೆರೆದು ಹದಿನಾರರಲ್ಲಿ ಬಸಿರು ಹೊತ್ತಾಗಲೇ ಅಪ್ಪ ಸೆರೆಮನೆ ಸೇರಿದ್ದು. ಅವ್ವ ಹಳ್ಳಿ ಹೆಂಗಸು. ಅನಕ್ಷರಸ್ಥಳಾದ ಮುಗ್ಧೆ. ಚಳುವಳಿ ಪಳುವಳಿ ಅಂತ

ಏನನ್ನೂ ಅರಿಯದ ಭೋಲಾ ಭಾಲಾ ಹೆಣ್ಣುಮಗಳು. ಗಂಡನನ್ನು ಪೋಲೀಸರು ಹಿಡಿದುಕೊಂಡೊಯ್ದು ಕಲಬುರ್ಗಿಯ ಜೈಲಿನಲ್ಲಿ ಹಾಕಿದರು ಅನ್ನುವ ಸುದ್ದಿ ಕೇಳಿ ತತ್ತರಿಸಿ ಹೋದಳು. ಉಸ್ಸಂತ ಉದ್ದನೆಯ ಉಸಿರೆಳೆದು ನೆಲಕ್ಕೆ ಕುಸಿದು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಸುದ್ದಿ ತಿಳಿದ ಅವಳಪ್ಪ ಬಂದು ತವರೂರಾದ ಭೀಮಳ್ಳಿಗೆ ಕರೆದುಕೊಂಡು ಹೋದ. ಅವರಿಗೂ ಗಾಬರಿ. ತಮ್ಮ ಅಳಿಯ ಜೈಲು ಸೇರಿದ್ದಾನೆ ಅಂದರೆಯೇ ಮಹಾಪರಾಧ ಮಾಡಿ ಕಳಂಕ ಹೊತ್ತಂತೆಯೇ ಹಳ್ಳಿಗರ ಲೆಕ್ಕ. ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಅವರಿಗೂ ಏನೂ ಗೊತ್ತಿರಲಿಲ್ಲ.

ಅಪ್ಪಯ್ಯ ಜೈಲಿನಿಂದ ವಾಪಸ್ಸು ಬಂದಾಗ ಸಂಪೂರ್ಣ ಬದಲಾಯಿಸಿದ್ದ. ದೇಶಪ್ರೇಮಿಯಾದ ಅವನಿಗೆ ಕೆಂಪು ಮೂತಿಯ ಅಂಗ್ರೇಜಿಗರ ಮೇಲೆ ಎಲ್ಲಿಲ್ಲದ ಸಿಟ್ಟು. ದೇಶದ ದಾಸ್ಯತ್ವದ ಬಗ್ಗೆ ಎದೆ ತುಂಬ ದುಃಖ. ಸ್ವಾತಂತ್ರ್ಯ ಹೋರಾಟಗಾರರ ಟೋಳಿಯಲ್ಲಿ, ಸಂಜೆ ಮುಂದೆ ಎಲ್ಲರೂ ಸೇರಿ ಚಿಂತನ, ಭಾಷಣ, ಲಾಠಿ ತಿರುಗಿಸುವುದು, ವ್ಯಾಯಾಮ ಮೊದಲಾದ ತಾಲೀಮು ಮಾಡುತ್ತಿದ್ದ. ದೇಶದ ಪರಿಸ್ಥಿತಿಯ ಬಗ್ಗೆ, ಸ್ವಾತಂತ್ರ್ಯದ ಬಗ್ಗೆ ನಿರರ್ಗಳವಾಗಿ ಮಾತಾಡುತ್ತಿದ್ದ. ಎದುರಿಗೆ ಯಾರೇ ಸಿಗಲಿ 'ನಮಸ್ತೆ' ಅಂತನ್ನುತ್ತಿದ್ದದ್ದು ಕಡಿಮೆ. 'ವಂದೇ ಮಾತರಂ' ಅನ್ನುತ್ತಿದ್ದದ್ದೇ ಜಾಸ್ತಿ.

ಬುದ್ಧಿಜೀವಿಗಳ ಸಂಗದಲ್ಲಿ ಜೈಲಿನಲ್ಲಿದ್ದಾಗಲೇ ಅವನಿಗೆ ರಾಮಾಯಣ, ಮಹಾಭಾರತ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಮೊದಲಾದವರ ಕಥೆಗಳು ಗೊತ್ತಾದದ್ದು. ಭಗತ್‌ಸಿಂಗ್, ಸುಭಾಸಚಂದ್ರ ಬೋಸ, ಗಾಂಧೀ, ನೆಹರೂ, ವಲ್ಲಭಭಾಯಿ ಪಟೇಲ ಮೊದಲಾದ ಸ್ವಾತಂತ್ರ್ಯ ಚಳುವಳಿಯ ನೇತಾರರ ಬಗ್ಗೆ ತಿಳಿದುಕೊಂಡನು. ನೇತಾಜಿ ಸುಭಾಸಚಂದ್ರ ಬೋಸರ 'ಆಜಾದ್ ಹಿಂದ್' ಸೇನಾದ ಮಹಿಳಾ ಘಟಕದ ಮುಂದಾಳಾಗಿದ್ದ ಲಕ್ಷ್ಮೀ ಸೆಹಗಲ್ ಬಗ್ಗೆಯೂ ಅವನಿಗೆ ಗೊತ್ತಿತ್ತು. ಆಗಲೇ ಅವನಿಗೆ ವಿದ್ಯೆಯ ಬಗ್ಗೆ ತಿಳಿವಳಿಕೆ ಬಂದು ಮುಂದೆ ನನ್ನನ್ನು ಶಾಲೆಗೆ ಕಳಿಸಿದನು.

ನಾನು ಸಣ್ಣವಳಿರುವಾಗ ಅಪ್ಪಯ್ಯ ತನ್ನ ಜೈಲುವಾಸದ ಬಗ್ಗೆ, ಚಳುವಳಿಯ ಬಗ್ಗೆ, ಸ್ವಾತಂತ್ರ್ಯ ಹೋರಾಟದ ನೇತಾರರ ಬಗ್ಗೆ ಕಥೆಯಾಗಿಸಿ ಮನ ಮಿಡಿಯುವಂತೆ ಹೇಳುತ್ತಿದ್ದನು. ತಮ್ಮ ಭೂಗತ ಚಟುವಟಿಕೆಗಳ ಬಗ್ಗೆ ಅನುಭವಗಳನ್ನು ಸ್ವಾರಸ್ಯಕರವಾಗಿ ಬಣ್ಣಿಸುತ್ತಿದ್ದ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಾನಿನ್ನೂ ಐದು ವರ್ಷದವಳಾಗಿದ್ದೆ. ಪ್ರೈಮರಿ ಶಾಲೆಗೆ ಹೋಗುತ್ತಿದ್ದೆ. ಮುಂದೆ ನಾನು ಎಂಟ್ಹತ್ತು ವರ್ಷದವಳಾದಾಗ ಅಪ್ಪ ಹೇಳುವ ಕಥೆ ಕೇಳಿ ನಾನೂ ಲಕ್ಷ್ಮೀ ಸೆಹಗಲ್‌ಳಂತೆಯೋ, ಸರೋಜಿನಿ ನಾಯ್ಡುನಂತೆಯೋ ಆಗಬೇಕೆಂದು ಕನಸು ಕಾಣುತ್ತಿದ್ದೆ. ಹಾಗೆಂದು ಅಪ್ಪನಿಗೆ ಹೇಳಿದಾಗ ಅವ್ವ ಹೇಳುತ್ತಿದ್ದ, "ಹೊಯಿಂದು ಮಗಾ... ಅವರ್ಹ್ಂಗ ಆಗ್ಬೇಕಾದ್ರ ಮದಲ ನೀ ವಿದ್ಯಾವಂತಿ ಆಗ್ಬೇಕು, ಭಾಳೋಟು ಸಾಲಿ ಕಲ್ತು ಬಿ.ಎ., ಎಂ.ಎ. ಪಾಸು ಮಾಡ್ಬೇಕವ್ವ..." ನನಗೂ ಅದು ಖರೇ ಅನ್ನಿಸುತ್ತಿತ್ತು. ಶಾಲೆಗೆ ಹೋಗುವ, ಓದುವ ಬರೆಯುವ ಆಸಕ್ತಿ ಬೆಳೆಯುತ್ತಿತ್ತು. ಸಂಜೆ ಮುಂದೆ, ಅಂಗಳದಲ್ಲಿ ಸಿಂದಿ ಚಾಪೆ ಹಾಕ್ಕೊಂಡು ಕುಂತು, ಅಪ್ಪ ಮಗಳು ಇವೇ ಮಾತಾಡುತ್ತಿರುವಾಗ ಮನೆಯೊಳಗಿಂದ ಅವ್ವನ ದನಿ ಕೇಳಿಬರುತ್ತಿತ್ತು:

“ಆಯ್ತು, ನೀ ಹಿಂಗೇ ಏನೇನರೆ ಹೇಳಿ ಅಕಿನ ತೆಲಿ ಕೆಡ್ಸಿ ಬಿಟ್ಟಿ ಮಾರಾಯಾ. ಅಕಿಯೇನು ಗಂಡಸ ಮಗಾನಾ ಹಾಂಗೆಲ್ಲಾ ಆಗ್ಲಕ್ಕ. ನಮ್ಮಂದ್ಯಾಗ ಗಂಡಸರೇ ಸಾಲಿ ಕಲೆಂಗಿಲ್ಲ, ಇನ್ನ ಹೆಣ್ಣ ಮಗಳಾದ ಇಕಿಗಿ ನೀ ಸಾಲಿಗಿ ಹಾಕಿದ್ದೀ... ನಾ ಏಟು ಬ್ಯಾಡಂದರನೂ ಕೇಳ್ಲಿಲ್ಲ. ನೋಡ್ದ ಮಂದೆಲ್ಲಾ ನಗಲಕತ್ತಾರ. ಹಾರ್ರ ಹೆಂಗಸರು ಅಣಕದ ಮಾತಾಡ್ತಾರ. ಇಕಿ ಸಾಲಿ ಕಲ್ತು ಮಡ್ಡಂ ಆದರ ಇಕಿಗಿ ಯಾರು ಮದಿ ಮಾಡ್ಕೋತಾರಂತೀನೀ... ಮುಂದಿಂದು ಒಂದೀಟು ಇಚಾರ ಮಾಡು. ಹ್ಞೂ... ಬರ್ರಿನ್ನ ಒಳಗ. ಅಡಗಿ ಆಗ್ಯಾದ. ಉಣಾಕೆಂತ್ರೀ...” ಅನ್ನುತ್ತಿದ್ದಳು.

“ಯಾರೂ ಮದಿ ಆಗಲಿಲ್ಲಂದ್ರ ಇಲ್ಲ ಬಿಡೇ ನಿನ್ನವ್ವನಾ. ನನ್ನ ಮಗಳು ಬಿ.ಎ. ಓದಿ ಗೋರಮೆಂಟ ನೋಕರಿ ಮಾಡ್ತಾಳ. ಮಕ್ಕಳು ಈಗೆಲ್ಲಾ ಆಡ್ಕೊಂಡು ನಗವರು, ಮುಂದ ಅಕೀಗಿ ಸಲಾಂ ಹೊಡೀತಾರ ನೋಡಾಕೆಂತ ನೀ...” ಅಂತ ಅಪ್ಪ ನಗುದನಿ ಹಾಕುತ್ತಿದ್ದದ್ದು ನನಗಿನ್ನೂ ನೆನಪಿದೆ.

ಆದರೆ ಅಪ್ಪ ನನಗೆ ಸಾಲಿ ಕಲಿಸುವುದು ಅಷ್ಟು ಸುಲಭವಾಗಲಿಲ್ಲ. ಅವನು ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ್ದಾಗಲೇ ಅವನ ಗಿರಣಿಯ ನೋಕರಿ ಕಳೆದು ಹೋಗಿತ್ತು. ಅವನು ದಿನಗೂಲಿಯ ಮೇಲೆ ಒಂದು ಫರಸಿ (ಹಾಸುಗಲ್ಲುಗಳು) ಅಡ್ಡೆಯಲ್ಲಿ ಕೆಲಸಕ್ಕೆ ತೊಡಗಿದ್ದ. ಒಂದೆಂಟು ದಿನಗಳಾಗಿರಬೇಕು ಆ ಕೆಲಸದಲ್ಲಿದ್ದು. ದೊಡ್ಡ ದೊಡ್ಡ ಚೌಕಾಕಾರದ ನಾಲ್ಕಿಂಚು ದಪ್ಪದ ಕಲ್ಲು ಫರಸಿಗಳನ್ನು ಲಾರಿಯಿಂದ ಕೆಳಗಿಳಿಸುವ ಹಿಕ್ಮತ್ತು ಅವನಿಗಿನ್ನೂ ಕರಗತವಾಗಿರಲಿಲ್ಲ. ಅಂದು ಸಂಜೆ ಶಾಬಾದಿನಿಂದ ಫರಸಿ ತುಂಬಿಕೊಂಡು ಬಂದ ಲಾರಿಯೊಂದು ಅಡ್ಡೆಯಲ್ಲಿ ನಿಂತಿತ್ತು. ಇಬ್ಬರು ಕೆಲಸದಾಳುಗಳು ಲಾರಿಯಿಂದ ಫರಸಿಗಳನ್ನು ಒಂದೊಂದಾಗಿ ಕೆಳಗಿಳಿಸಿ ನೆಲದ ಮೇಲೆ ನಡೆಸುತ್ತ ದೂರದ ಸಾಲುಗಲ್ಲಿನಲ್ಲಿ ಹೊಂದಿಸಿಡುತ್ತಿದ್ದರು. ಅದರಲ್ಲಿ ನನ್ನಪ್ಪನೂ ಒಬ್ಬ ಆಳು. ಅರ್ಧ ಲಾರಿ ಫರಸಿ ಇಳಿಸಿಯಾಗಿತ್ತು. ಮೇಲಿನಿಂದ ಒಬ್ಬ ಫರಸಿ ಸರಿಸುತ್ತಿದ್ದ. ಕೆಳಗೆ ನಿಂತಿದ್ದ ನನ್ನಪ್ಪ ಅದನ್ನು ನಿಧಾನವಾಗಿ ನೆಲಕ್ಕೆ ಜಾರಿಸಿಕೊಂಡು ಎತ್ತಿಡುತ್ತ ಕಲ್ಲಿನ ಸಾಲಿಗೆ ಸೇರಿಸಬೇಕು. ಜಾರಿಸಿದ ಕಲ್ಲು ಲಾರಿಯಿಂದ ನೆಲಕ್ಕೆ ಅಪ್ಪಳಿಸುವಾಗ ಆಯ ತಪ್ಪಿ ನನ್ನಪ್ಪನ ಬಲ ಪಾದದ ಮೇಲೆ ಗಚ್ಚಂತ ಬಿದ್ದುಬಿಟ್ಟಿತು! ‘ಯಪ್ಪೋ... ಸತ್ನೆಪೋ...’ ಅಂತ ಕಿರುಚಿ ನನ್ನಪ್ಪ ನೆಲಕ್ಕೆ ಕುಸಿದುಬಿದ್ದ.

ಆಯ್ತು ಆ ಕೆಲಸವೂ ತಪ್ಪಿತು. ಅಪ್ಪ ಸರಕಾರಿ ದವಾಖಾನೆ ಸೇರಿಬಿಟ್ಟ. ಅವ್ವ ಏನು ಮಾಡಬೇಕು? ಕಷ್ಟಕ್ಕೆಲ್ಲ ಎದೆಗುಂದದ ಹಳ್ಳಿಯ ಹೆಣ್ಣುಮಗಳು ಆಕೆ. ಕಲಬುರ್ಗಿಗೆ ಮೂರು ಹರದಾರಿ ಹತ್ತಿರದ ಭೀಮಳ್ಳಿಯೇ ಅವಳ ತವರೂರು. ವಾರಕ್ಕೊಮ್ಮೆ ನೆರೆಯುವ ಕಲಬುರ್ಗಿಯ ಶನಿವಾರ ಸಂತೆಯಲ್ಲಿ ಆ ಹಳ್ಳಿಯಿಂದ ಜನರು ಬಂದೇ ಬರುತ್ತಿದ್ದರು. ಅವತ್ತು ಅವಳಪ್ಪನೇ ಬಂದಿದ್ದ. ಅವ್ವ ಸಂತೆಗೆ ಹೋಗಿ ಅವನ ಮುಂದೆ ಅಳುತ್ತಲೇ ಎಲ್ಲ ಹೇಳಿದಳು. ಅವಳಪ್ಪನೂ ದವುಳ್ಳವನೇನಲ್ಲ. ಐದೆಕರೆ ಮಡ್ಡಿ ಹೊಲ, ಎರಡಂಕಣದ ಒಂದು ಖೊಲ್ಲಿ, ಮುಂದೊಂದು ಅಡಿಗೆ ಮಾಡಲು ಸಿಂದಿ ಬಚ್ಚು ನೆಟ್ಟು, ಸಿಂದಿ ಪೊರಕೆಯ ಛಾವಣಿಯ ಗುಡಿಸಲು, ಬಾಜು ಒಂದು ದನದ ಕೊಟ್ಟಿಗೆಯಿರುವ ಗರೀಬ ಮನಶ್ಯಾ. “ನೀ ಈಗ ಮನೀಗಿ

ಹೋಗು ಮಗಳೇ... ನಂಬಲ್ಲಿ ಎಮ್ಮಿ ಈದಾದ. ಎಂಟು ದಿನ ಆಗ್ಯಾದ ಆಟೇ... ನಾಳಿಗಿ ಅದಕ್ಕ ಹೊಡ್ಕೊಂಡು ಬರ್ತಿನೆಂತ" ಅಂತಂದು, ಮನೆಗೂ ಬಾರದೆ ಹಂಗೇ ಹಳ್ಳಿಗೆ ಹೋಗಿ ಮರುದಿನ ಎತ್ತಿನ ಬಂಡಿ ತುಂಬ ಜೋಳದ ಕಣಕಿ ಮತ್ತು ಎಮ್ಮೆ, ಕರು ಹೊಡ್ಕೊಂಡು ಬಂದೇ ಬಿಟ್ಟ ತನ್ನ ಮಗನೊಂದಿಗೆ. ನಮ್ಮ ಮನೆಯ ಮುಂದೆ ದೊಡ್ಡ ಬಯಲಿತ್ತು. ಒಂದು ಕಡೆಗೆ ಎಮ್ಮೆ ಕಟ್ಟಲು ಸಣ್ಣ ಚಪ್ಪರ ಹಾಕಿಕೊಟ್ಟು, ಮನೆಯ ಮಾಳಿಗೆಯ ಮೇಲೆ ಕಣಕಿಯ ಹೊರೆಗಳನ್ನು ಒಟ್ಟಿದರು. ದವಾಖಾನೆಗೆ ಹೋಗಿ ನನ್ನಪ್ಪನಿಗೆ ಧೈರ್ಯ ಹೇಳಿ ಅವರು ಹಳ್ಳಿಗೆ ಹೊರಟುಹೋದರು.

ಹೀಗೆ ಶುರುವಾಯಿತು ನನ್ನವ್ವನ ಎಮ್ಮೆ ಹಾಲಿನ ಮಾರಾಟ. ನಾಲ್ಕು ಮನೆಗಳಿಗೆ ಒರತೆ ಹಾಲು ಹಾಕುತ್ತಿದ್ದಳು. ನನಗೂ ಅದರ ಬಿಸಿ ತಟ್ಟಿತು. ಬೆಳಗಾ ಮುಂಜಾನೆದ್ದು ನಾನೂ ಎರಡು ಬಾಂಬ್ರ ಮನೆಗಳಿಗೆ ಎರಡು ಕಿಲೋಮೀಟರ ದೂರ ಹೋಗಿ ಹಾಲು ಕೊಟ್ಟು ಬರುತ್ತಿದ್ದೆ. ನಾವಿದ್ದದ್ದು ಹಾರುವರ ಗಲ್ಲಿಯೇ. ಅಲ್ಲಿಯೂ ಚಿಲ್ಲರೆ ಹಾಲು ಮಾರುತ್ತಿದ್ದಳು ಅವ್ವ. ನಮಗೆ ಮಾತ್ರ ನಾಲ್ಕೇ ನಾಲ್ಕು ಹನಿ ಹಾಲು ಹಾಕಿದ ಕರಿ ಚಹಾವೇ ಗತಿ! ದನ ಕಾಯುವ ಮರೆಪ್ಪನಿಗೆ ತಿಂಗಳಿಗೆ ಎಂಟಾಣೆ ಕೊಟ್ಟು ನಮ್ಮ ಎಮ್ಮೆಯನ್ನು ಕಾಯಲು ಕಳಿಸುತ್ತಿದ್ದಳು.

ಮುಂಜಾನೆದ್ದು ಹೆಂಡಿ ಕಸ ಮಾಡಿ, ಎಮ್ಮೆಗೆ ಚುನ್ನಿ, ಹಿಂಡಿ ತಿನ್ನಲು ಇಟ್ಟು ಕರು ಬಿಟ್ಟು ಹಾಲು ಹಿಂಡಿಕೊಳ್ಳುವುದು, ನಂತರ ಅದರಲ್ಲಿ ಒಂದೀಸು ನೀರು ಕಲೆಸಿ ಪಾತ್ರೆಗಳಿಗೆ ಅಳೆದು ಹಾಕುವುದು ಅವ್ವನ ಕೆಲಸ. ಹತ್ತಿರದ ಮನೆಗಳಿಗೆ ನನ್ನ ತಂಗಿ, ಮತ್ತು ದೂರದ ಮನೆಗಳಿಗೆ ಹಾಲು ಒಯ್ದು ಕೊಡುವುದು ನನ್ನ ಕೆಲಸವಾಗಿತ್ತು. ಆಮೇಲೆ ಬಂದು ಸ್ನಾನ ಮಾಡಿ, ಅವ್ವ ಸುಟ್ಟುಕೊಟ್ಟ ಬಿಸಿ ಬಿಸಿ ರೊಟ್ಟಿ ಕಾರಬ್ಯಾಳಿ ಕಲೆಸಿಕೊಂಡು ಉಂಡು, ಒಂದು ರೊಟ್ಟಿ ಒಂದೀಟು ಗಟ್ಟಿ ಬ್ಯಾಳಿಯನ್ನೇ ಸಿಲಾವರ ಡಬ್ಬಿಯಲ್ಲಿಟ್ಟುಕೊಂಡು, ಪಾಟಿ ಚೀಲ ಹೆಗಲಿಗೆ ಹಾಕಿಕೊಂಡು ಮೈಲಿ ದೂರದ ಶಾಲೆಗೆ ನಡೆದುಕೊಂಡು ಹೋಗುತ್ತಿದ್ದೆ.

ನನ್ನ ಅಪ್ಪ ಅವ್ವನ ಬದುಕೇ ಒಂದು ಸಂಘರ್ಷ. ಅವರ ಬೊಗಸೆಗೆ ಬಿದ್ದದ್ದು ಬೆಲ್ಲದ ವಾಸನೆಯೂ ಇಲ್ಲದ ಬರೀ ಬೇವೇ. ಫರಸಿ ದುಕಾನದ ಕೆಲಸ ಬಿಟ್ಟು ಅಪ್ಪ, ಗಂಜಿನಲ್ಲಿ ಎತ್ತಿನ ಬಂಡಿಯ ಹಮಾಲನಾದದ್ದು; ಹಾಗೆ ಕಲಬುರ್ಗಿಯ ಅಡತಿ ಬಾಜಾರಿನಿಂದ ಬಂಡಿಯಲ್ಲಿ ಅನಾಜಿನ (ದವಸಧಾನ್ಯ) ಚೀಲಗಳನ್ನು ಪೇರಿಸಿಕೊಂಡು ಎಂಟ್ಹತ್ತು ಬಂಡಿಗಳೊಂದಿಗೆ ಮಹಾರಾಷ್ಟ್ರದ ಅಕ್ಕಲಕೋಟ ವರೆಗೆ ಒಯ್ದು ಕೊಟ್ಟು ಬರುವುದು ನಡೆಯುತ್ತಿತ್ತು. ಹೀಗೊಮ್ಮೆ ಹೋಗುವಾಗ ಎದುರಾದ ತುಂಬಿದ ಹೊಳೆ ದಾಟುವಾಗ ಎತ್ತುಗಳು ನೀರಲ್ಲಿ ಹೆದರಿ ತತ್ತರಿಸಿದಾಗ ಬಂಡಿ ಒಗ್ಗಾಲಾಗಿ ನೀರಲ್ಲಿ ಬಿದ್ದ ನನ್ನಪ್ಪ ಈಜು ಬಾರದೆ ಮುಳುಗುತ್ತ ಕೈ ಮೇಲೆತ್ತಿದಾಗ ಈಜು ಬರುತ್ತಿದ್ದ ಗೆಳೆಯರಿಬ್ಬರು ನೀರಿಗೆ ಹಾರಿ ಅವನನ್ನು ಉಳಿಸಿಕೊಂಡದ್ದನ್ನು ಕತೆ ಮಾಡಿ ನನ್ನವ್ವ ಕಣ್ಣೊರೆಸಿಕೊಳ್ಳುತ್ತಲೇ ಹೇಳುತ್ತಿದ್ದಳು.

ನಾನು ನಾಲ್ಕು ತಿಂಗಳ ಕೂಸಾಗಿದ್ದಾಗ ಒಂದು ರಾತ್ರಿ ಹೊರಸಿನ ಮೇಲೆ ಅವ್ವನ ಮಗ್ಗುಲಲ್ಲಿ ಮಲಗಿದ್ದೆನಂತೆ. ಆಗಿನ್ನೂ ಅಪ್ಪ ಬಟ್ಟೆ ಗಿರಣಿಯಲ್ಲಿ ಕಾರ್ಮಿಕನಾಗಿದ್ದ. ಅವತ್ತು ರಾತ್ರಿ ಪಾಳಿಯ ಡ್ಯೂಟಿ ಇತ್ತು. ರಾತ್ರಿ ಹನ್ನೆರಡು ಗಂಟೆಗೆ ಗಿರಣಿ ಬಿಟ್ಟಾಗ ಹರದಾರಿ

ದೂರದಿಂದ ಕಾಲ್ನಡಿಗೆಯಲ್ಲಿ ಮನೆಗೆ ಬರಬೇಕಾದರೆ ರಾತ್ರಿಯ ಎರಡು ಗಂಟೆಯಾಗುತ್ತಿತ್ತು. ಹಾಗೆ ಅಂದು ಬಂದು ನೀರು ಕುಡಿದು, ಅಂಗಿ, ರುಮಾಲು ಕಳಚಿ ಗೂಟಕ್ಕೆ ಸಿಕ್ಕಿಸಿದ. ಬೇಸಿಗೆಯ ದಿನಗಳವು. ಬಾಗಿಲು ತೆರೆದಿಟ್ಟು ಹೊಸ್ತಿಲಿಗೆ ತಲೆಕೊಟ್ಟು ಮಕ್ಕೊಂಡನು. ತಾಸೊತ್ತು ಕಳೆದಿರಬೇಕು. ಹಗಲೆಲ್ಲ ದುಡಿದು, ಹರದಾರಿ ನಡೆದು ಹೈರಾಣಾಗಿ ಬಂದಿದ್ದವನಿಗೆ ಗಾಢ ನಿದ್ದೆ. ಒಳಗೆ ಒಲೆಯ ಹತ್ತಿರ ಅವ್ವನ ಹೊರಸು. ಒಂದೇ ಖೊಲ್ಲಿಯ ಮನೆ ಅದು. ರಾತ್ರಿಯ ಒಂದು ಹೊತ್ತಿನಲ್ಲಿ ಎಲ್ಲಿದ್ದುವೋ ಏನೋ ಕರಿಮಾರಿ ಹೆಗ್ಗಣಗಳು ಕಚ್ಚಾಡುತ್ತ ಬಂದು ಅಪ್ಪನ ಹಣೆಗೆ ಕಚ್ಚಿ ಓಡಿ ಹೋದುವು. ಅಪ್ಪ ಧಡಕ್ಕನೆ ಎದ್ದು ಕುಂತು ಚುರು ಚುರು ಅಂತ ಉರಿಯುತ್ತಿದ್ದ ಹಣೆಗೆ ಕೈ ಹಚ್ಚಿದರೆ ರಕ್ತ ಒಸರುತ್ತಿತ್ತು. ಅವ್ವ; ಮಾಡದಲ್ಲಿ ಉರಿಯುತ್ತಿದ್ದ ಘಾಸಲೆಟ ಎಣ್ಣೆಯ ಚಿಮಣಿಯ ಬತ್ತಿ ಏರಿಸಿ ತಗೊಂಡು ಬಂದು ನೋಡುತ್ತಾಳೆ ಅಪ್ಪನ ಹಣೆಯ ಗಾಯದಿಂದ ದಳದಳನೆ ರಕ್ತ ಸೋರುತ್ತಿದೆ! ಸೆರಗಿನಿಂದ ಅದನ್ನು ಒರೆಸಿ, ಗಾಯಕ್ಕೆ ಅರಿಶಿಣಪುಡಿ ತುಂಬಿ ಬಟ್ಟೆ ಕಟ್ಟಿದಳು. ಅಪ್ಪ ಸಣ್ಣಗೆ ನರಳುತ್ತ ಹಂಗೇ ನೆಲಕ್ಕೆ ಮೈ ನೀಡಿದ. ಅವ್ವ ಕೂಸಿನ ಬಳಿ ಹೊರಸಿನ ಮೇಲೆ ಮಕ್ಕೊಂಡಳು. ಆದರೆ ಇದಿಮಾಯಿ ಅಷ್ಟಕ್ಕೇ ಬಿಡಲಿಲ್ಲ. ಅವ್ವ ಮಕ್ಕೊಂಡು ಅದೇ ಒಂದೀಟು ಜಂಪು ಹತ್ತಿರಬೇಕು. ಅವಳ ಎಡಗಾಲ ಕಿರುಬೆರಳಿಗೆ ಏನೋ ಚುಚ್ಚಿದಂಗಾಗಿ ಭಗಭಗನೆ ಉರಿಯತೊಡಗಿತು. ದೀಪದ ಬತ್ತಿಯೇರಿಸಿ ನೋಡಿದರೆ ಕಿರಿಬೆರಳ ತುದಿಯಲ್ಲಿ ಸಾಲುಗಟ್ಟಿ ನಿಂತ ಹನಿಹನಿ ಬೆವರು. ಅವಳಿಗೆ ತಟ್ಟನೆ ತಿಳಿಯಿತು, ಇದು ಚೇಳಿನ ಕಡಿತ ಅಂತ. ದೀಪ ಹಿಡಿದು ಹುಡುಕುತ್ತ ಹೊರಟರೆ ಹೊರಸಿನ ಕಾಲಿನ ಮೇಲೆ ದುರುದುರನೆ, ಕೊಂಡಿಯೆತ್ತಿಕೊಂಡು ಓಡುತ್ತಿರುವ ಮೂರು ಬೆರಳಗಲದ ಕೆಂಪು ಚೇಳು! ಅವ್ವ ಬಲು ಧೈರ್ಯದ ಹೆಂಗಸು. ತಟ್ಟನೆ ಬಾಗಿ ಹೊರಸಿನ ಕೆಳಗಿದ್ದ ತನ್ನ ಚಪ್ಪಲಿ ತೊಗೊಂಡು ಅದರ ಮೇಲೆ ರಪ್ಪನೆ ಬಡಿದು ಒತ್ತಿಹಿಡಿದಳು. ತುಸು ಹೊತ್ತಿನ ನಂತರ ತೆಗೆದರೆ ಚೇಳು ಸತ್ತು ಅಪ್ಪಚ್ಚಿಯಾಗಿತ್ತು. ಎಚ್ಚರವೇ ಇದ್ದ ಅಪ್ಪ ಎದ್ದು ಕುಂತು ಎಲ್ಲ ಕೇಳಿ ಎದ್ದು ಬಂದು ಸತ್ತ ಚೇಳನ್ನು ಹೊರಗೊಯ್ದು ಅಂಗಳದ ತುದಿಯಲ್ಲಿದ್ದ ತಿಪ್ಪೆಗೆಸೆದು ಚಪ್ಪಲಿ ಹೊರಗೆ ಗೋಡೆಗಾನಿಸಿಟ್ಟ. ಒಳಬಂದು ಹಸಿಬಟ್ಟೆಯಿಂದ ಹೊರಸಿನ ಕಾಲಿನ ಚೇಳು ಸತ್ತಿದ್ದ ಜಾಗ ಒರೆಸಿದ. ಅವ್ವನ ಕಿರುಬೆರಳಿನ ಹೊಡೆತದ ಸಹಿಸಲಸಾಧ್ಯದ ನೋವು ಕಾಲಿಗೆ ಮೇಲಮೇಲಕ್ಕೆ ಏರುತ್ತ ಟೊಂಕದ ವರೆಗೂ ಬಂದಿತ್ತು. ಚೇಳಿನ ಕಡಿತದ ಉರಿ ಒಂದು ಕಡೆ, ತಾಸು ಮೊದಲು ಗಂಡನ ಹಣೆಗೆ ಹೆಗ್ಗಣ ಕಡಿದ ಸಂಕಟವೊಂದು ಕಡೆ. ಅವ್ವ ಬಿಕ್ಕಿ ಬಿಕ್ಕಿ ಅಳತೊಡಗಿದಳು.

"ಹೆಂತಾ ಹಣೇಬರಾ ನಮ್ದು... ಆ ಇದಿಮಾಯಿ ನಮಗೇ ಯಾಕೀಟು ಕಾಡ್ತಕತ್ತಾಳೋ ಶಿವನೇ... ನಾವೇನು ಪಾಪ ಮಾಡಿ ಈ ಭೂಮಿ ಮ್ಯಾಲೆ ಹುಟ್ಟಿದ್ದೇವೋ ದೇವರೇ..." ಅಂತನ್ನುತ್ತ ಅವ್ವ ಸಣ್ಣಗೆ ದನಿ ತೆಗೆದು ಅಳುತ್ತಿದ್ದರೆ ಅಪ್ಪ ಮೂಕನಾಗಿದ್ದನು. ಅವಳ ಬೆರಳಿಗೆ ಘಾಸಲೆಟ ಎಣ್ಣೆ ಹಚ್ಚಿ, ಹುಣಚಿ ಬೀಜ ತೇದು ಲೇಪಿಸಿದ.

"ಮನಸ್ಯಾ ಅಂದ ಮ್ಯಾಲ ಹಿಂತಾವೆಲ್ಲಾ ಇದ್ದಿದ್ದೇ ಶಾಣೀ... ಮನಸ್ಯಾರಿಗಿ ಕಾಡ್ಲಿಲ್ಲಂದ್ರೇನು ಮರಕ್ಕ ಕಾಡ್ತದಾ? ಅಳಬ್ಯಾಡ ಸುಮ್ನಿರು. ಕೂಸು ಎದ್ದೇತ್ತು ಪಾಪ..." ಅಂತಂದು ಸಂತೈಸಿದನು.

ನನ್ನವ್ವನ ಹೆಸರು ಶರಣಮ್ಮ. ಅಪ್ಪ ಶಾಂತಪ್ಪ.

ಕಷ್ಟಗಳು ಬಂದರೆ ಒಂದೊಂದೇ ಬರುವುದಿಲ್ಲ. ಅವು ಸಾಲುಗಟ್ಟಿಕೊಂಡೇ ಬರುತ್ತವೆ. ಮರುದಿನ ಅವ್ವ ಅದೇ ಗಲ್ಲಿಯಲ್ಲಿದ್ದ ವಿಠ್ಠಲ ಭಡಜಿಯ ಹತ್ತಿರ ಹೋಗಿ ಸವಾ ರುಪೈ ಕೊಟ್ಟು ಪಂಚಾಂಗ ತಗಸಿ ನೋಡಿದಳು.

"ಶಾಣಮ್ಮ... ನಿಮಗೀಗ ಶನಿಕಾಟ ನಡದಾದವ್ವ... ಪ್ರತಿ ಶನಿವಾರ ಹಣಮಂದೇವರ ಗುಡಿಗಿ ಹೋಗಿ ಎಳ್ಳೆಣ್ಣೆ ದೀಪ ಹಚ್ಚಿಡು..." ಅಂತ ಹೇಳಿದನಂತೆ. ಸತತ ಮೂರು ವರ್ಷದ ವರೆಗೂ ಅವ್ವ ಹಣಮಪ್ಪನ ಗುಡಿಗೆ ಎಡತಾಕಿದರೂ ಆ ವಂಕು ಮಾರಿಯ ದೇವರು ಮಾರಿ ತಿರಗಿಸಿ ಇವಳ ಮೇಲೆ ತನ್ನ ಕರುಣೆಯ ಕಣ್ಣು ತೆರೆಯಲಿಲ್ಲ!

ಇದಾದ ಎರಡೇ ತಿಂಗಳಿಗೆ ಒಂದು ಅಮವಾಸ್ಯೆಯ ಬೆಳಗಿನಲ್ಲಿ ನಾನು ಮಲಗಿದ್ದ ತೊಟ್ಟಿಲ ಮೇಲೆ ಛತ್ತಿನ ತೊಲೆಯಿಂದ ಹಗ್ಗದ ಗುಂಟ ಇಳಿದು ಬಂದ ಆಳುದ್ದದ ಗೋಧಿನಾಗರವೊಂದು ಹೆಡೆ ಬಿಚ್ಚಿ ಆಡತೊಡಗಿತ್ತು. ಎಲ್ಲರೂ ಗಾಬರಿಯಿಂದ ದೂರವೇ ನಿಂತಾಗ ಅಪ್ಪ ಅವ್ವ ಕೂಸನ್ನು ತೆಗೆದುಕೊಳ್ಳಲು ಹೋದರೆ ಅದು ಭುಸ್ಸಂತ ಕಣ್ಣು ಕಿಸಿಯುತ್ತ ಸೀಳುನಾಲಿಗೆ ಚಾಚುತ್ತಿತ್ತು. ಅವ್ವ ಅಪ್ಪ ಕೈ ಜೋಡಿಸಿಕೊಂಡು ನಿಂತು ಅಳುತ್ತಿದ್ದರೆ ಅದಕ್ಕೇನೆನ್ನಿಸಿತೋ ಸೊಲುಪೊತ್ತು ಸತಾಯಿಸಿ ನಂತರ ಹೆಡೆ ಮುದುಡಿಕೊಂಡು ಸರಸರನೆ ಮೇಲೇರತೊಡಗಿತ್ತು. ಅವ್ವ ತಟ್ಟನೆ ಕೂಸೆತ್ತಿಕೊಂಡಳು. ಹಾವು ಬಂದ ದಾರಿಗೆ ಹಿಂತಿರುಗಿತ್ತು ಖರೇ. ಆದರೂ ನೆರೆಮನೆಯ ಬಂಡಪ್ಪ ಹಮಾಲನು ಭರ್ಚಿಯಿಂದ ಅದಕ್ಕೆ ಚುಚ್ಚಿ ಚುಚ್ಚಿ ಸಾಯಿಸಿ, ಅದರ ಬಾಯಲ್ಲೊಂದು ಹಾಲಿ ದುಡ್ಡಿಟ್ಟು ಸುಟ್ಟುಬಿಟ್ಟನು! ಮುಂದೆ ಮೂರು ವರ್ಷದ ವರೆಗೂ 'ಆ ಕೂಸು' ಜಡ್ಡು ಜಾಪತ್ತಿನಿಂದ ಸದಾ ಬಳಲುತ್ತ ಅದು ಬದುಕಿ ಉಳಿದದ್ದೇ ಹೆಚ್ಚು. "ಆ ನಾಗಪ್ಪ ನಿನ ಮ್ಯಾಲ ಹೆಡಿ ಬಿಚ್ಚಿ ಆಡಿತ್ತು ಖರೇ. ಆದರ ನಿನಗೇನೂ ಘಾತ ಮಾಡಿರಲಿಲ್ಲ. ಅದಕ್ಕ ಕೊಲ್ಲಬಾರ್ದಿತ್ತು ನೋಡು. ಅದರ ಪಾಪ ನಿನಗ ಸುತಗೊಂಡಾದವ್ವ... ಇಲ್ಲಂದ್ರ ನೀ ದೇಶಾ ಆಳೋ ಭಾಗ್ಯವಂತಿ ಆಗ್ತಿದ್ದಿ..." ಅಂತ ನನ್ನ ಅವ್ವ ಈಗಲೂ ಆಗಾಗ ಹೇಳುವುದನ್ನು ಕೇಳಿದ ನನ್ನ ಮಗಳು, "ಅಮ್ಮ..., ಹಾವಿನ ಚಿನ್ಹೆ ಇಟ್ಟುಕೊಂಡು ನೀ ಎಲೆಕ್ಷನ್‌ಕ್ಕ ನಿಂದ್ರು. ಅಜ್ಜಿ ಹೇಳಿಧಾಂಗ ಗೆದ್ದು ಬಂದು ರಾಜ್ಯ ಆಳ್ತೀ..." ಅಂತಂದು ನಗುತ್ತಾಳೆ.

● ● ●

ಹೀಗೆ ಅವ್ವ ಅಪ್ಪನ ಬದುಕು ಬರೀ ಬಡತನ, ಬವಣೆ, ನನ್ನ ತಂಗಿಯೊಬ್ಬಳ ಸಾವು-ನೋವುಗಳಲ್ಲೇ ಕಳೆಯಿತು. ಮುಂದೊಂದು ದಿನ ಬಟ್ಟೆಗಿರಣಿ ಶಾಶ್ವತವಾಗಿ ಲಾಕ್‌ಔಟ್ ಆದಾಗ (ಸ್ವಾತಂತ್ರ್ಯದ ನಂತರ ಅಪ್ಪ ಮತ್ತೆ ಅದೇ ಗಿರಣಿಯ ಕೆಲಸಕ್ಕೆ ಹೋಗುತ್ತಿದ್ದ.) ಎಲ್ಲ ಕಾರ್ಮಿಕರಂತೆ ನನ್ನಪ್ಪನೂ ಕೆಲಸವಿಲ್ಲದೆ ಮನೆ ಹಿಡಿದ. ಅಷ್ಟು ಹೊತ್ತಿಗೆ ಅವನು ಹರೆಯ ಕಳೆದುಕೊಂಡು ಮುಪ್ಪಿನ ಹಾದಿ ಹಿಡಿದಿದ್ದನಲ್ಲ. ಗರಡಿಯಾಳಿನಂಥ ಮೈ ಸೊರಗಿತ್ತು. ಅವನಿಗೆ ದಿನವೂ ಎರಡು ಬಾಟಲಿ ಸೇಂದಿ ಕುಡಿಯುವ ಚಟವಿತ್ತಲ್ಲ. ಹಳ್ಳಿಯಲ್ಲಿಯ ಬನವ ಸೇಂದಿಯಂತಲ್ಲ ಕಲಬುರ್ಗಿಯ ಸೇಂದಿ. ಏನೇನೆಲ್ಲ ಮಿಲಾವಟದಿಂದಾಗಿ ಅದು ಅವನ ಮೈಗೆ ಬಲು ಬೇಗ ಮುಪ್ಪನ್ನು ಎಳೆದು ತಂದಿತ್ತು.

ಈಗ ಕೆಲಸವಿಲ್ಲದೆ ಮನೆ ಹಿಡಿದಾಗ ಮಡದಿ ಮಕ್ಕಳ ಗತಿಯೇನು? ನಾವು ನಾಲ್ಕು ಮಕ್ಕಳು... ನಾನಿನ್ನೂ ಆಗ ಮ್ಯಾಟ್ರಿಕ್ ಓದುತ್ತಿದ್ದೆ. ಪರೀಕ್ಷೆಗೆ ಫೀಸು ಕಟ್ಟಲು ಹಣವಿಲ್ಲದೆ ನಾನು ಅಳುತ್ತ ಕುಂತಾಗ ನೆರೆಮನೆಯ ಈರಣ್ಣ ಮಾಮ ತಾನು ಭಜಿ ಮಾರಿ ಜಮಾಯಿಸಿಟ್ಟಿದ್ದ ರೊಕ್ಕ ತಂದು ಕೊಟ್ಟಿದ್ದ. ಹೆಂಡತಿ ಮಕ್ಕಳಿಲ್ಲದ ಆ ಮುದುಕನಿಗೆ ನಾನೆಂದರೆ ಅದೇನೋ ವಾತ್ಸಲ್ಯ. ನನ್ನ ಓದಿಗೆ ಅವನು ಆಗಾಗ ಹಿಂಗೇ ಸಹಾಯ ಮಾಡುತ್ತಿದ್ದ. ನಾನೇ ದೊಡ್ಡವಳು. ಉಳಿದವರು ನನಗಿಂತ ಚಿಕ್ಕವರು. ಗಿರಣಿಯ ಕೆಲಸ ಬಿಟ್ಟರೆ ಅಪ್ಪನಿಗೆ ಬೇರ್ಯಾವ ಕೆಲಸವೂ ಬರುತ್ತಿರಲಿಲ್ಲ. ಕೂಲಿ ಕಬಟಿ ಮಾಡಲು ಮೈಯಲ್ಲಿ ತಾಕತ್ತಿರಲಿಲ್ಲ. ಆಗ ನಮ್ಮವ್ವನೇ ಗಟ್ಟಿ ಧೈರ್ಯ ಮಾಡಿದಳು. ಆಗ ಮನೆಯಲ್ಲಿ ಎಮ್ಮೆಯೂ ಇರಲಿಲ್ಲ. ಹಾಲಿನ ಮಾರಾಟ ಬಿಟ್ಟು ಬಹಳ ಕಾಲವಾಗಿತ್ತು. ಆಗಾಗ ಎದುರಿನ ಮನೆಯ ಬಾಂಬ್ರ ಚಂಪಾಬಾಯಿಯ ಬಾಣಂತಿ ಮಗಳಿಗೆ ದಿನವೂ ನೀರು ಹಾಕಿ, ಅಗ್ಗಿಷ್ಟಿಕೆ ಕೊಟ್ಟು ಬರುತ್ತಿದ್ದಳು. ಅವರು ಒಂದೀಸು ರೂಪಾಯಿ ಕೊಡುತ್ತಿದ್ದರು. ಮನಸಬದಾರರ ಮನೆಯಲ್ಲಿ ಕರೆದಾಗೆಲ್ಲ ಹೋಗಿ ದವಸ ಧಾನ್ಯ ಹಸನು ಮಾಡಿ ಕೊಡುವುದು, ಆ ಮನೆಯ ಹೆಂಗಸರಿಗೆ ತಿಂಗಳಿಗೊಮ್ಮೆ ಮೈಯೆಲ್ಲ ಎಣ್ಣೆ ಸವರಿ ಮಾಲಿಶ್ ಮಾಡಿ ಎರೆಯುವುದೂ ಮಾಡುತ್ತಿದ್ದಳು. ಅವರಿಂದ ಒಂದೆರಡು ಸೇರು ಜೋಳ, ಅಕ್ಕಿ ಸಿಗುತ್ತಿತ್ತು ಖರೇ, ಆದರೆ ಅಷ್ಟರಿಂದ ನಮ್ಮೆಲ್ಲರ ಹೊಟ್ಟೆ ತುಂಬುತ್ತದೆಯೇ?

ಅವ್ವ ನೆರೆಮನೆಯ ಕಾಯಿಪಲ್ಯ ಮಾರುವ ಈರವ್ವನೊಂದಿಗೆ ತರಕಾರಿ ಮಾರಲು ತಯಾರಾದಳು. ಮೊದಲ ದಿನ ತುಂಬಿದ ಬಾಜಾರಿನಲ್ಲಿ ತರಕಾರಿ ಬುಟ್ಟಿ ಮುಂದಿಟ್ಟುಕೊಂಡು ಕುಂತಾಗ ಅವಳಿಗೆ ಅಳುವೊಂದು ಕಡೆ. ತಕ್ಕಡಿ ಹಿಡಿದು ತೂಗಲು ಬಾರದ ಸಂಕಟವೊಂದು ಕಡೆ. ರೊಕ್ಕ ರೂಪಾಯಿಗಳನ್ನು ಸರಿಯಾಗಿ ಎಣಿಸಲು ಬಾರದ ಹೆದರಿಕೆ. ಅಪಮಾನಗಳು ಇನ್ನೊಂದು ಕಡೆ. ಹಿಂಗಾಗಿ ಅವ್ವ ಕಂಗಾಲಾದಳು. ಆದರೆ ಕ್ರಮೇಣ ಅವ್ವ ಅಪ್ಪ ಇಬ್ಬರೂ ಕೂಡಿ ತರಕಾರಿ ಮಾರುವುದನ್ನು ಕಲಿತರು. ಹರಾಜಿನಲ್ಲಿ ಅವ್ವ ಕಾಯಿಪಲ್ಯ ಖರೀದಿ ಮಾಡಿಕೊಂಡು ಬರುವ ವರೆಗೆ ಅಪ್ಪ ನಿನ್ನೆಯ ತಂಗಳು ಮಾಲನ್ನು ಬಿಕರಿ ಮಾಡುತ್ತಿದ್ದ. ನಂತರ ಅವ್ವ ಮಾರಾಟಕ್ಕೆ ಕೂಡುತ್ತಿದ್ದಳು. ಅಪ್ಪ ಮನೆಗೆ ಬರುತ್ತಿದ್ದ. ಅಂತೂ ಇಂತೂ ಅವ್ವನ ಈ ತರಕಾರಿ ಮಾರುವ ದಂಧೆಯಿಂದ ಮನೆಯವರಿಗೆಲ್ಲ ಎರಡು ಹೊತ್ತಿನ ಕೂಳು ಸಿಗುವಂತಾಯಿತು.

ಮುಂದೆ ಅಪ್ಪನಿಗೆ ಸ್ವಾತಂತ್ರ್ಯ ಹೋರಾಟಗಾರರ ಪೆನ್‌ಶನ್ ಅಂತ ತಿಂಗಳಿಗೆ ಎಂಭತ್ತು ರೂಪಾಯಿ ಸರಕಾರದಿಂದ ಬರತೊಡಗಿತು. ಜೊತೆಗೆ ಅವನ ಆರೋಗ್ಯವೂ ಕೆಡತೊಡಗಿತು.

ನಾನು ಮ್ಯಾಟ್ರಿಕ್ ಪಾಸಾದೆ. ಕಲೆಕ್ಟರ್ ಆಫೀಸಿನಲ್ಲಿ ನಾನು ಕ್ಲರ್ಕ ಅಂತ ಕೆಲಸಕ್ಕೆ ಸೇರಿ ಗಂಡಸರ ನಡುವೆ ನಿಂತಾಗ ಎಲ್ಲರ ಕಣ್ಣು ನನ್ನ ಮೇಲೆಯೇ. ಕಾರಣ ಆ ದಿನಗಳಲ್ಲಿ ನಾನು ಮೊಟ್ಟಮೊದಲ (ಜಿಲ್ಲೆಗೇ) ಏಕೈಕ ಮಹಿಳಾ ಗುಮಾಸ್ತೆ! ಮಾಡಬಾರದ್ದನ್ನು ನಾನು ಮಾಡಿದ್ದೇನೆ ಎಂಬಂತೆ ಎಲ್ಲರೂ ನನ್ನನ್ನು ನೋಡುತ್ತಿದ್ದರು. ಆದರೆ ನನ್ನ ಓದಿಗೆ, ಬದುಕಿಗೆ ಆಗ ನಾನು ನೌಕರಿ ಮಾಡುವುದು ತೀರ ಅನಿವಾರ್ಯವಾಗಿತ್ತು. ಬೆಳಗಿನ ಕಾಲೇಜಿನಲ್ಲಿ

ಓದು ಮುಂದುವರಿಸಿದೆ. ಹರದಾರಿ ದೂರದ ಕಾಲೇಜಿಗೆ ನಡೆದುಕೊಂಡೇ ಹೋಗಿ ಅಲ್ಲಿಯ ಮೂರೇ ಮೂರು ಪಿರಿಯಡ್‌ಗಳನ್ನು ಮುಗಿಸಿಕೊಂಡು ಹತ್ತು ಗಂಟೆಗೆ ಆಫೀಸಿಗೆ ಬಂದು ಕೆಲಸಕ್ಕೆ ಹಾಜರಾಗುತ್ತಿದ್ದೆ. ಆಗ ನನ್ನ ತಿಂಗಳ ಪಗಾರ ಬರೀ ಎಂಭತ್ತು ರೂಪಾಯಿ.

ಅಪ್ಪ ಸತ್ತ ಮೇಲೂ ಅವ್ವ ತರಕಾರಿ ಮಾರುತ್ತಲೇ ನನ್ನ ತಂಗಿ, ತಮ್ಮಂದಿರನ್ನು ಓದಿಸಿದಳು. ಈಗ ತಂಗಿ ಶಿಕ್ಷಕಿ. ತಮ್ಮ ಎಕ್ಸೈಜ್ ಆಫೀಸರ್. ಎಪ್ಪತ್ತೈದರ ಅಂಚಿನಲ್ಲಿರುವ ಅವ್ವ ಈಗ ಬೀದರನಲ್ಲಿ ತನ್ನ ಮಗನ ಮನೆಯಲ್ಲಿದ್ದಾಳೆ. ಮಗ ಕಟ್ಟಿಸಿದ ಮೂರಂತಸ್ತಿನ ಭವ್ಯ ಬಂಗಲೆಯಲ್ಲಿದ್ದು, ಕಾರಿನಲ್ಲಿ ಓಡಾಡುತ್ತಾಳೆ. ಒಂದು ಕಾಲದಲ್ಲಿ ಹರಿದ ಸೀರೆಗೆ ಟ್ಯಾಪಿ ಹಾಕಿ ಉಡುತ್ತಿದ್ದ ಅವ್ವ ಇವತ್ತು ರೇಶಿಮೆಯ ಇಲಕಲ್ ಸೀರೆ, ತೇರಿನ ಕುಪ್ಪಸ, ಬಂಗಾರದ ಬಳೆಗಳು, ಸಿಂಗಾರ ಕರಿಮಣಿಯಲ್ಲಿ ಲಕಲಕ ಅಂತ ಲಕ್ಷಣವಾಗಿ ಕಾಣುತ್ತಿದ್ದರೆ ನಮಗೆಲ್ಲ ಖುಶಿಯಾಗುತ್ತದೆ. ಆದರೆ ನಮ್ಮನ್ನೆಲ್ಲ ಓದಿಸಲು ತನ್ನ ಬದುಕನ್ನೇ ಸವೆಯಿಸಿದ್ದ ಅಪ್ಪನ ಕಣ್ಣು ಮಕ್ಕಳ ಈ ಸೌಭಾಗ್ಯ ಕಾಣಲಿಲ್ಲವೆಂಬ ಕೊರಗು ನನ್ನೊಳಗಿದ್ದೇ ಇದೆ.

ಇವತ್ತು ನಾನು ಏನನ್ನಾದರೂ ಸಾಧಿಸಿದ್ದು ಇದ್ದರೆ ಇದೆಲ್ಲದರ ಶ್ರೇಯಸ್ಸು ಆ ನನ್ನ ಸೀದಾ ಸಾದಾ, ಭೋಲಾ ಭಾಲಾ, ಅನಪಢ (ಅನಕ್ಷರಸ್ಥ) ಅಪ್ಪನಿಗೇ ಸಲ್ಲುತ್ತದೆ. ತನ್ನ ತೋಟದಲ್ಲಿ ತಾನೇ ನೆಟ್ಟ ನಾಲ್ಕು ಸಸಿಗಳಿಗೆ ನೀರು ಗೊಬ್ಬರ ಉಣಿಸಿ, ಮಾಲಿಯಾಗಿ ಅವುಗಳನ್ನು ಬೆಳೆಸಿ ಹೋದ ಆ ನನ್ನಪ್ಪ ಈಗ ಅವು ಹೆಮ್ಮರಗಳಾಗಿ ಬೆಳೆದು ನಿಂತಿರುವುದನ್ನು ಅಜ್ಞಾತ ಲೋಕದಿಂದಲೇ ನೋಡಿ ಖುಶಿಪಡುತ್ತಿರಬಹುದೆ? ಗೊತ್ತಿಲ್ಲ! ಮನುಷ್ಯ ಸತ್ತ ಮೇಲೆ ಏನಾಗುತ್ತಾನೆ, ಎಲ್ಲಿಗೆ ಹೋಗುತ್ತಾನೆ, ಏನು ಮಾಡುತ್ತಾನೆ ಅಂತ ನೋಡಿದವರ್‍ಯಾರು?

ಅದೇನೇ ಇದ್ದರೂ ಈ ನನ್ನ ಅಪ್ಪನ ಋಣ ನನ್ನ ಮೇಲೆ ಎಲ್ಲರಿಗಿಂತ ಜಾಸ್ತಿಯಿದೆ. ಆ ನನ್ನಪ್ಪ ಅಂದು ನನಗೆ ವಿದ್ಯೆ ಕಲಿಸಿರದಿದ್ದರೆ ಇವತ್ತು ನಾನು ಯಾವ ಗಿಡದ ತಪ್ಪಲಾಗಿ ಎಲ್ಲಿ ಬಿದ್ದು ಯಾರ ಕಾಲ ತುಳಿತಕ್ಕೋ ಸಿಕ್ಕು ನಿತ್ಯ ನರಳುತ್ತಿದ್ದೆನೋ ಯಾರಿಗೆ ಗೊತ್ತು?

ಗಂಡನೆಂಬ ಮನುಷ್ಯ ನನ್ನನ್ನು ನನ್ನೆರಡು ಮಕ್ಕಳೊಂದಿಗೆ ಬೀದಿಗೆ ತಳ್ಳಿ ಒಮ್ಮೆಯೂ ಹಿಂತಿರುಗಿ ನೋಡದೆ ಓಡಿ ಹೋದಾಗ ನಾನು ಬದುಕಿದ್ದು ಅಪ್ಪ ಕಲಿಸಿದ ವಿದ್ಯೆಯಿಂದ ದೊರೆತ ಕಾಲೇಜಿನ ನೌಕರಿಯಿಂದ! ಇವತ್ತು ನನ್ನ ಮನೆಯಲ್ಲಿ ನಾನು ಹಚ್ಚುವ ದೀಪ ಅಪ್ಪನ ಹೆಸರು ಹೇಳಿಕೊಂಡೇ. ನಾವು ಉಣ್ಣುವ ಪ್ರತಿಯೊಂದು ತುತ್ತೂ ಆ ನನ್ನಪ್ಪನ ಹೆಸರು ಹೇಳಿಕೊಂಡೇ. ಇಂಥ ಅಪರೂಪದ ಅಪ್ಪ ಈಗ ನಮ್ಮೊಂದಿಗಿಲ್ಲ. ನನ್ನ ತಮ್ಮನಿಗೆ ಕೆಲಸ ಸಿಗುವ ಮುಂಚೆಯೇ ಅವನು ಈ ಲೋಕ ಬಿಟ್ಟಿದ್ದ. ಈಗ ವರ್ಷಕ್ಕೊಮ್ಮೆ ಅಪ್ಪನ ಫೋಟೋಕ್ಕೆ ಪೂಜೆ ಮಾಡಿ ಪುಣ್ಯತಿಥಿ ಮಾಡುತ್ತಾನೆ ನನ್ನ ತಮ್ಮ. ನಾಲ್ಕು ಮಂದಿಗೆ ಅವತ್ತು ಊಟ ಹಾಕುತ್ತಾನೆ. ಆದರೆ ಇದೆಲ್ಲ ಆ ನನ್ನಪ್ಪನಿಗೆ ಗೊತ್ತಾಗುತ್ತದೆಯೇ? ಆಕಾಶದಲ್ಲಿ ಚಿಕ್ಕಿಯಾಗಿಯೋ, ವಾತಾವರಣದಲ್ಲಿ ಗಾಳಿಯಾಗಿಯೋ ಸುಳಿದಾಡುತ್ತಿರಬಹುದಾದ ಅಪ್ಪಯ್ಯನಿಗೆ ನಮ್ಮ ನೆನಪಾದರೂ ಇದ್ದಿರಬಹುದೇ? ಗೊತ್ತಿಲ್ಲ. ಆದರೆ ಅವನ ನೆನಪು ಮಾತ್ರ ನನ್ನೆದೆಯಲ್ಲಿ ಹಸಿರಾಗಿಯೇ ಇದೆ. ನನ್ನ ಕೊನೆಯ ಉಸಿರಿನ ವರೆಗೂ ಇದು ಹಸಿರಾಗಿಯೇ ಇರುತ್ತದೆ.

● ●

ಗೀತಾ ನಾಗಭೂಷಣ : ಕಾವ್ಯಶ್ರೀ, ೧೮, ಸ್ವಸ್ತಿಕ ಕಾಲೊನಿ, ಸೇಡಂ ರಸ್ತೆ, ಬಿಲಗುಂದಿ ತೋಟ, ರಿಂಗ್ ರಸ್ತೆ, ಗುಲಬರ್ಗಾ - ೫೮೫ ೧೦೫

ನನ್ನ ಅಪ್ಪ

ಕಾರ್ಯಾನಂದ

೧೯೩೪ ನೆಯ ಇಸವಿಯಲ್ಲಿ [illegible] ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದೆ. ಮೂರನೆಯ [illegible] ವಿದ್ಯಾರ್ಥಿಯೆಂದು ಹೆಸರು ಮಾಡಿದ್ದೆ. ನನ್ನ ತಂದೆಯು [illegible] ಜನವರಿ ೧೯೨೮ ರಂದು. ಆದರೆ ೧೯೨೮ [illegible]. ಕಾರಣ? ಮಗ ಹೇಗೂ ಕಲೆಕ್ಟರನಾಗುವಷ್ಟು ಬುದ್ಧಿವಂತ [illegible] ವರ್ಷಕ್ಕೇ ನಿವೃತ್ತನಾಗದೇ ಒಂದು ವರ್ಷ ಹೆಚ್ಚಿಗೆ ಆಫೀಸರಿಕೆ ಮಾಡಬೇಕು– ಇದು ಅವನ ಅಪೇಕ್ಷೆ.

ಮಗ ಕಲಿಯುವಿಕೆಯಲ್ಲಿ ಮುಂದಿರಬೇಕು– ಎನ್ನುವ ಬಗ್ಗೆ ಅವನಿಗೆ ಅತೀವ ಕಳವಳ. ಕಳಕಳಿ ಅಥವಾ ಕಾಳಜಿ ಅಲ್ಲ. ನನ್ನ ತಂದೆ ನಾನು ಸದಾ ಅಭ್ಯಾಸ ಮಾಡಬೇಕು ಎನ್ನುತ್ತಿದ್ದನಲ್ಲದೆ ಒಂದು ದಿನವೂ ವಿಷಯ ತಿಳಿಸಿ ಕೊಟ್ಟಿದ್ದಿಲ್ಲ. "ಓದೋದು ಬರಿಯೋದು ಬಿಟ್ಟು ಎಲ್ಲಿ ಹೋಗಿದ್ದಿ" ಎಂದು ಗದರಿಸುವುದಷ್ಟೇ ಮಾಡ್ತಿದ್ದ. ಅದು ಒಮ್ಮೊಮ್ಮೆ ಉಗ್ರ ಸ್ವರೂಪ ತಾಳುತ್ತಿತ್ತು. ಒಮ್ಮೆ ನನ್ನ ಮೂರನೇ ಇಯತ್ತೆಯ ವಾರ್ಷಿಕ ಪರೀಕ್ಷೆಯ ದಿನ ಹತ್ತಿರ ಬಂತು. ಈಗಿನಂತೆ ಪರೀಕ್ಷೆಗಳಿಗೆ ಪೇಪರ್ ಬರೆಯುವ ಕ್ರಮವಿರಲಿಲ್ಲ. ಆ ಆ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ಖಾಸ ಬಂದು ಪರೀಕ್ಷೆ ತೆಗೆದುಕೊಳ್ಳುತ್ತಿದ್ದರು. ಆ ದಿನ ನನ್ನನ್ನು ಮುಂದಿನ ಸಾಲಿನ ಮಧ್ಯದಲ್ಲಿ ಕೂರಿಸಿದ್ದರು. ನಾನು ಥಟ್ಟನೆ ಉತ್ತರ ಹೇಳುವವನೆಂಬ ಗ್ರಹಿಕೆ ಇದ್ದಿತು– ಹೆಡ್ ಮಾಸ್ತರರದು. ವಿದ್ಯಾರ್ಥಿಗಳು ಹಾಗೆ ಉತ್ತರಿಸಿದಷ್ಟೂ ಮಾಸ್ತರ ಜನರ ಶಾಬಾಸ್‌ಗಿರಿ ನಡೆಯುತ್ತಿತ್ತು.

ಬಂದರು ಇನ್‌ಸ್ಪೆಕ್ಟರ್ ಸಾಹೇಬರು. ಅದು, ಇದು ಕಾಗದಪತ್ರ, ಹಾಜರಿ ಪುಸ್ತಕ ನೋಡಿದರು. ಅನಂತರ ಪ್ರಶ್ನೆಗಳನ್ನು ಕೇಳತೊಡಗಿದರು. ಉತ್ತರ ಗೊತ್ತಿದ್ದ ನಾವುಗಳು ಕೈ ಎತ್ತಬೇಕು. ಸಾಹೇಬರ ನಜರಿಗೆ ಬಿದ್ದವರನ್ನು ಎಬ್ಬಿಸಿ, ಉತ್ತರಿಸ ಹೇಳುತ್ತಿದ್ದರು. ಒಮ್ಮೊಮ್ಮೆ ಅವರೇ ನೇರವಾಗಿ ಯಾರೊಬ್ಬ ವಿದ್ಯಾರ್ಥಿಯ ಕಡೆಗೆ ಬೊಟ್ಟು ಮಾಡಿ ಪ್ರಶ್ನೆ ಕೇಳುತ್ತಿದ್ದುದೂ ಕ್ರಮವಿತ್ತು. ಹಾಗೆ ನನ್ನನ್ನೇ ಕೇಳಿದರು :

"ಏನಪಾ ತಮ್ಮಾ ನಿನ್ನ ಹೆಸರು?"

"ಶೀನೂರಿ"

ಅರ್ಥವಾಗಲಿಲ್ಲ ಸಾಹೇಬರಿಗೆ. ಹೆಡ್‌ಮಾಸ್ತರರು ಪೂರ್ಣ ಹೆಸರು ಹೇಳಿ, "ಇಂಥವರ ಮಗ" ಎಂದು ಅಲ್ಲಿಯೇ ಇದ್ದ ನನ್ನ ತಂದೆಯನ್ನು ಪರಿಚಯಿಸಿದರು. "ಓಂಗೇನು?" ಎನ್ನುತ್ತ ಒಂದಿಷ್ಟು ಬಾಯಿಲೆಕ್ಕದ ಪ್ರಶ್ನೆ ಕೇಳಿದರು. ಉತ್ತರ ಕೊಟ್ಟೆ. ಸರಿ ಇದ್ದಿರಬೇಕು. ಆಮೇಲೆ–

"ಅಂದ್ಹಂಗ ನೀ ಗುಲಾಬಿ ಗಿಡಾ ನೋಡೀಯೇನು?"

"ನೋಡೇನ್ರಿ." ನಮ್ಮ ಹಿತ್ತಿಲದಲ್ಲಿಯೆ ಒಂದೆರಡು ಬಳ್ಳಿಗಳಿದ್ದವು.

"ಅದರ ಹೂವು ನೋಡೀಯೇನು?"

“ಹ್ಞೂನ್ರಿ”

“ಹೂ ಆದಮ್ಯಾಲೆ ಕಾಯಿ ಆಗಬೇಕಲ್ಲ? ನೋಡೀಯೇನು?”

“ನೋಡೇನ್ರಿ.” ನಾನೇನೂ ನೋಡಿರಲಿಲ್ಲ. ಸಾಹೇಬರೇ ಹಾಗೆ ಹೇಳಿದ ಮೇಲೆ ಕಾಯಿ ಇರಲೇಬೇಕು.

“ಸಾಧಾರಣ ಎಷ್ಟು ದೊಡ್ಡದಿರತsದ?”

ನಾನು ಕೈಬೆರಳು ಮಡಿಸಿ, ಹೂವಿನ ಸೈಜನ್ನು ಗಮನಿಸಿ ತೋರಿಸಿದೆ. ಅದನ್ನು ನೋಡಿ ಕುಡಿಮೀಸೆಯಲ್ಲೇ ನಕ್ಕರು. ಹೆಡ್ ಮಾಸ್ತರರ ಮುಖ ಹುಣಿಸೇಹಣ್ಣು ತಿಂದವರಂತಿತ್ತು. ನಾನೇನೋ ತಪ್ಪು ಉತ್ತರ ಹೇಳಿದೆ ಎಂದೆನಿಸಿತು. ಮನೆಗೆ ಬಂದು ಹಿತ್ತಿಲಕ್ಕೆ ಹೋಗಿ ನೋಡಿದೆ. ಅಲ್ಲಿಯ ಗುಲಾಬಿಯ ಗಿಡವೊಂದಕ್ಕೂ ಕಾಯಿ ಇರಲಿಲ್ಲ. ತಾಯಿಯನ್ನು ಕೇಳಿದೆ. ಆಮೇಲೆ ಶಾಲೆಯಲ್ಲಿ ನಡೆದ ವಿಷಯ ತಿಳಿಸಿದೆ. ಗಣಿತದ ಪ್ರಶ್ನೆಗೆ ಸರೀ ಉತ್ತರ ಕೊಟ್ಟೆನೆಂಬ ಸಂತೋಷದಲ್ಲಿ ಈ ತಪ್ಪಿನ ಗಂಭೀರ ಸ್ವರೂಪ ನನಗೆ ಹೊಳೆದಿರಲಿಲ್ಲ.

ಶಾಲೆ ಬಿಟ್ಟ ಮೇಲೆ ಅಪ್ಪ ಬೇರೆಲ್ಲಿಯೋ ಹೋಗಿದ್ದ. ತಡವಾಗಿ ಬಂದ. ಅವನ ಮುಖವನ್ನು ನೋಡಿದ ಮೇಲೆ, ಹಿತ್ತಿಲಿನ ಕಡೆ ಹೋದದ್ದನ್ನು ಕಂಡು ಅಮ್ಮ ತುಸು ಧಾವಿಸಿ ಬಂದು “ಅನಕಾ ನೀ ಅವರ ಕಣ್ಣಿಗೆ ಬೀಳದ್ಹಂಗ ಎಲ್ಲಿಯಾದರೂ ಹೋಗಿರು” ಎಂದು ಸಣ್ಣ ದನಿಯಲ್ಲಿ ಹೇಳಿ ಅಡುಗೆಯ ಮನೆಗೆ ತಿರುಗಿದಳು.

ನಾನು ಅದಕ್ಕೆ ಅಷ್ಟು ಗಮನ ಕೊಟ್ಟಿರಲಿಲ್ಲ. ನನ್ನ ಕೋಣೆಯಲ್ಲಿ ಪುಸ್ತಕಗಳನ್ನು ಜೋಡಿಸುತ್ತಿದ್ದಾಗ, ಛಪ್ ಛಪ್ ಎಂದು ಬೆನ್ನ ಮೇಲೆ ರಪರಪನೆ ಏಟುಗಳು ಬೀಳತೊಡಗಿದವು. ತೆಳ್ಳನೆಯ ಹುಣಿಸೆಯ ಕೋಲು! ಚಿಟ್ಟನೆ ಚೀರಿದೆ. ಕಣ್ಣಿಗೆ ಬವಳಿ ಬಂದಿತು. ನಾನು ಏಟು ತಿಂದದ್ದು ಮೊದಲ ಬಾರಿ. ತುಸು ಅಂತರದಲ್ಲಿ ನನ್ನ ಅವ್ವ ಅಸಹಾಯಕಳಾಗಿ ನಿಂತಿದ್ದಳು. ದುಗುಡ ತುಂಬಿದ ಮುಖ. ಆ ಹೊಡೆತದಿಂದ ಬಿಡಿಸಹೋಗುವುದು ಸಾಧ್ಯವಾಗದ ಮಾತಾಗಿತ್ತು. ಆಗ ಅನುಭವಿಸಿದ ನೋವು ಮುಂದೆ ಹಲವಾರು ವರ್ಷ ನೆನೆಯುವಂತಿದ್ದಿತು.

ಆಗೆಲ್ಲ ನನಗಾದ ಆಶ್ಚರ್ಯವೆಂದರೆ, ಹೊಡೆದದ್ದರ ಕಾರಣವನ್ನು ಆಗ ಹೇಳದೇ ಇದ್ದದ್ದು. ಮಾತೇನೂ ಇಲ್ಲದೆ ಸಿಟ್ಟನ್ನು ವ್ಯಕ್ತಪಡಿಸುವ ರೀತಿಯೂ ಇರುತ್ತದೆಯೆ?

ನನ್ನ ಶಿಕ್ಷಣದ ಬಗ್ಗೆ ನನ್ನ ತಂದೆಯ ಇನ್ನೊಂದು ಬಗೆಯ ಕಾಳಜಿಯನ್ನು ಹೇಳುವೆ. ನಾನು ಮೂರನೆಯ ಇಯತ್ತೆಯನ್ನೇನೊ ಪಾಸಾದೆ. ರ್‍ಯಾಂಕು, ನಂಬರು ಇತ್ಯಾದಿ ಆಗ ಕಾಣಿಸುತ್ತಿರಲಿಲ್ಲ. ‘ಮೇಲ್ದರ್ಜೆ’ ಎಂಬುದಷ್ಟೇ ಕಾಣಿಸಲಾಗಿದ್ದಿತು. ನಾಲ್ಕನೆಯ ಇಯತ್ತೆಗೆ ಹೋಗಬೇಕು, ಇಲ್ಲ, ಅದು ಹೇಗೊ ನಾಲ್ಕನೆಯ ಇಯತ್ತೆಯನ್ನೇ ಪಾಸಾಗಿದ್ದೆ. ಮೂರನ್ನು ‘ನಾಲ್ಕು’ ಮಾಡಿ, ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ತಯಾರಿಸಿದ್ದ— ನನ್ನ ಪಿತಾಜಿ. ಪರಿಣಾಮ? ನಾನು ಇಂಗ್ಲಿಶ್ ಒಂದನೆಯ ಇಯತ್ತೆಗಾಗಿ ಅರ್ಹತೆ ಪಡೆದು ಬಿಟ್ಟೆ. ತಡವೇಕೆ? ನನ್ನನ್ನು ಕರೆದುಕೊಂಡು ಹೋಗಿ ಅಪ್ಪ ಹಾವೇರಿಯ ಮುನಿಸಿಪಲ್ ಇಂಗ್ಲಿಶ್ ಶಾಲೆಗೆ ಹೆಸರು ಹಚ್ಚಿ ಬಂದ. (ಈಗ ಆ ಶಾಲಾ ಕಟ್ಟಡ ಜಿಲ್ಹಾ ಕಚೇರಿಯಾಗಿ ಮಾರ್ಪಟ್ಟಿದೆ). ಊಟ. ವಸತಿ? ನಮ್ಮ ದೂರದ ಬಳಗದವರ ಮನೆ ಇದ್ದಿತು. ೩೦-೩೫ ಜನರಿದ್ದ ಅವಿಭಕ್ತ ಕುಟುಂಬ. ಯಾರು ಬಂದರು? ಏನು ಮಾಡಿದರು? ಊಟ ಮಾಡಿದರೆ— ಇದು ಸುಲಭವಾಗಿ ತಿಳಿಯದಂಥ

ವಾತಾವರಣ. ಹಸಿವೆಯಾಗಿ, ಊಟದ ಸಮಯವೂ ಆಗಿದ್ದರೆ ನಾನು ಊಟ ಮಾಡುವ ಮನೆಯ ಬಾಗಿಲಿಗೆ ಕೈಕಟ್ಟಿಕೊಂಡು ನಿಲ್ಲಬೇಕು, ಆಗ ಅವರುಗಳಿಗೆ ನೆನಪಾಗಿ, ಖಾಲಿ ಇದ್ದ ಒಂದು ಎಲೆ ತೋರಿಸಿ ಕೂಡ ಹೇಳಬೇಕಾದಂಥ ಪರಿಸ್ಥಿತಿ. ಊಟದಲ್ಲಿ ಎರಡೇ ಬಗೆಯನ್ನು ಗುರುತಿಸುವುದಿತ್ತು. ಒಂದು ತಣ್ಣಗಿನದು(ಆರಿದ್ದು), ಇನ್ನೊಂದು ತಂಗಳದ್ದು(ಹಳಸುವ ಹಾದಿಯಲ್ಲಿದ್ದದ್ದು). ಒಂದೇ ಅನುಕೂಲವೆಂದರೆ ಊಟ unlimited ಎಷ್ಟು ಬೇಕಾದರೂ ಬಾಯಿಯಲ್ಲಿ ತುರುಕಿಕೊಳ್ಳುವುದಿತ್ತು!

ಶಾಲೆಯ ತರಗತಿಯಲ್ಲಿ ಉಳಿದವರಿಗಿಂತ ಎರಡು ವರ್ಷ ಹೆಚ್ಚಿಗೆ ವಯಸ್ಸಾದವರು. ನಾನು ಮೊದಲೇ ಗಿಡ್ಡ ನಿಲುವಿನವ, ಹೀಗಾಗಿ ವರ್ಗದ ಬೆಂಚುಗಳು ಕಡಿಮೆ ಎತ್ತರವಿದ್ದರೂ ನನ್ನ ಕಾಲು ನೆಲವನ್ನು ತಾಕುತ್ತಿರಲಿಲ್ಲ. ಒಬ್ಬ ಶಿಕ್ಷಕರಂತೂ ಮೊದಲ ಬಾರಿಗೆ ಪಾಠ ಹೇಳಲು ಬಂದವರು, ನಾನು ಪ್ರಾಥಮಿಕ ಶಾಲೆಯವ ಎಂದು ಹೊರಹಾಕಲೆಂದಿದ್ದರು. ನನ್ನ ಚಿಕ್ಕ ವಯಸ್ಸಿನ ಶಾಲಾಶಿಕ್ಷಣ ಮತ್ತು ಹಾವೇರಿ ಮನೆಯಲ್ಲಿಯ ರೌದ್ರ ವಾತಾವರಣದಿಂದ ತುಂಬಾ ಹೆದರಿದ್ದೆ. ಒಂದು ತಿಂಗಳು ಕಳೆದಿತ್ತೋ ಇಲ್ಲವೊ ಹಾವನೂರಿಗೆ ಬಸ್ ಹತ್ತಿ ಹೋಗಿಬಿಟ್ಟೆ.

ಅವ್ವ ಮನೆಯಲ್ಲಿ ಇದ್ದಳು. ನನ್ನ ಊಟದ ಸ್ವರೂಪ ಅಲ್ಲಿಯ ನನ್ನ ವಯಸ್ಸಿನ ಮಕ್ಕಳೂ ಕೂಡಾ ಅಲಕ್ಷ್ಯ ಮಾಡಿದ ಭಯಾನಕ ಸ್ಥಿತಿ ವಿವರಿಸಿದಾಗ ನನ್ನನ್ನು ಅಪ್ಪಿಕೊಂಡು ಕಣ್ಣೀರು ಸುರಿಸಿದಳು. ನಾನು ಅಳುದನಿಯಲ್ಲೇ ಮತ್ತೆ ಮತ್ತೆ ನನ್ನ ಗೋಳನ್ನು ತೋಡಿಕೊಂಡಾಗ "ನೀ ಹೀಂಗ ಬಂದದ್ದು ಗೊತ್ತಾದ್ರ ಅವರು ನಿನ್ನನ್ನು ಮೈಹುಳೀ ಹೊಡೀತಾರಲ್ಲೊ" ಎಂದಳು. "ಹೊಡದ್ರ ಹೊಡೀಲಿ. ನಾನಂತೂ ಹಾವೇರಿಗೆ ಹೋಗೋದಿಲ್ಲ" ಎಂದು ತುಸು ಜೋರಾಗಿ ಅಳತೊಡಗಿದೆ. ಅದನ್ನು ಕಂಡು "ನೀ ಹೋಗಬ್ಯಾಡ, ಆತಿಲ್ಲೊ?" ಎಂದು ಸಮಾಧಾನ ಹೇಳಿದಳು. ಆದರೆ ಅಷ್ಟರಲ್ಲಿ ಅವಳ ಬೆನ್ನಿಗೆ ಬಲವಾದ ಒದೆತ ಬಿತ್ತು. ಮುಗ್ಗರಿಸಿ ಮುಂಭಾಗಕ್ಕೆ ಬಿದ್ದಳು. ಕಣ್ಣು ತೆರೆದು ನೋಡಿದೆ. "ಮಗಾ ವಿದ್ಯಾ ಕಲೀಬಾರ್ದು; ಮನೆಯಲ್ಲೇ ಬಿದ್ದಿರಬೇಕೂಂತೀಯಾ?" ಎಂದದ್ದು ಕೇಳಿಸಿತು. ಅಂಥದರಲ್ಲೇ ಆಕೆ ತಡವರಿಸುತ್ತ ಹೇಳಿದಳು. "ಅವ್ನನ್ನ ಹೊಡೀಬ್ಯಾಡ್ರಿ, ಅಲ್ಲೆ ಅವ್ನಾ ಸಾಕಷ್ಟು ಕೂಳು ನೀರು ಇಲ್ಲದ ಒದ್ದಾಡಿ ಬಂದಾನ!"

ಅಂತೂ ನಮ್ಮ ದೂರದ ಬಳಗದ ಒಂದು ಮುದುಕಿಯನ್ನು ಜೊತೆ ಮಾಡಿ ಪುನಃ ಹಾವೇರಿಗೆ ಕಳಿಸಿದರು.

ಹೈಸ್ಕೂಲಿನಲ್ಲಿ ಫುಟ್‌ಬಾಲ್, ಹಾಕಿ, ಕ್ರಿಕೆಟ್ ಹೀಗೆ ಯಾವದೊಂದು ಆಟದಲ್ಲಿ ತೊಡಗಿರಬೇಕಲ್ಲವೆ. ನಾನು ಕ್ರಿಕೆಟ್ ಆಡಲು ಸುರುವು ಮಾಡಿದೆ. ಅದರಲ್ಲಿ ನನಗೆ ಯಾವುದೇ ಪರಿಶ್ರಮ ಇರಲಿಲ್ಲ. ಹೀಗಾಗಿ ನನ್ನನ್ನು ಅಂಡರ್ ವಿಕೆಟ್ ಕೀಪರ್ ಆಗಿ ನಿಲಿಸುತ್ತಿದ್ದರು. ನನ್ನ ತನಕ ಬಾಲ್ ಬರುವುದೇ ಕಮ್ಮಿ, ಹಾಗಾಗಿ ನಾನು ನನ್ನ ಹಳ್ಳಿಯ ವಾಸವನ್ನೆ ಧೇನಿಸುತ್ತಿದ್ದೆ. ಬೇಸರ-ದುಃಖದಲ್ಲಿ ಮೈಮರೆಯುತ್ತಿದ್ದೆ. ಒಂದು ಸಲ ಅಕಸ್ಮಾತ್ತಾಗಿ ಚೆಂಡು ರಭಸದಿಂದ ಬಂದು ನನ್ನ ಹಣೆಗೆ ತಾಕಿತು, ರಕ್ತದ ಹೊಳೆಯೇ ಹರಿಯಿತು. ಜೊತೆಗಾರರು ನನ್ನನ್ನು ಮನೆಗೆ ಹೊತ್ತುಕೊಂಡು ಬಂದು, ಬಿಟ್ಟುಹೋದರು.

ಸುದ್ದಿ ತಿಳಿದು ಮರುದಿನ ಅಪ್ಪನೇ ಬಂದ. ಹಾವೇರಿಯಲ್ಲಿಯ ದವಾಖಾನೆಗೆ ಕರೆದೊಯ್ದು, ಔಷಧ ಇತ್ಯಾದಿಗಳಿಗೆ ಖರ್ಚು ಮಾಡಲು ಅವನ ಹತ್ತಿರ ಹಣವಿರಲಿಲ್ಲ.

ಅದು ೧೯೩೬ ನೆಯ ಇಸವಿ ಇರಬೇಕು. ಈಗಿನಂತೆ ಯಾವುದೇ ಜಡ್ಡು ಗುಣವಾಗುವುದಕ್ಕೆ ಆಧುನಿಕ ಔಷಧಾದಿಗಳು ಇರಲೂ ಇಲ್ಲ. ಅಂತೂ ಹಾವನೂರಿಗೇ ಕರೆದೊಯ್ದ. ಅಲ್ಲಿಯೋ ತಾಯಿ ಐದು ದಿನದ ಬಾಣಂತಿ! ಹೀಗಾಗಿ ಅಪ್ಪನೇ ಆರೈಕೆ ಮಾಡಿದ. ಗಾಯವನ್ನು ತೊಳೆದು, ಪಟ್ಟಿ ಕಟ್ಟುವುದು, ಗಾಂವಠಿ ಔಷಧವನ್ನು ಹೊತ್ತು ಹೊತ್ತಿಗೆ ಕೊಡುವುದು– ಏನೆಲ್ಲ. ಪರಿಣಾಮವೆಂದರೆ ಅವನ ಬಗ್ಗೆ ನನ್ನಲ್ಲಿದ್ದ ಈ ಹಿಂದಿನ ಸಿಟ್ಟು ಬೇಸರವೆಲ್ಲ ಹೊರಟು ಹೋಯಿತು.

ಇವರ ಮೇಲಿಂದ ನನ್ನ ತಂದೆ ಓರ್ವ ಕ್ರೂರಿಯಿದ್ದ ಎಂದು ಇತರರೂ ತಿಳಿಯಬಾರದು. ಅವನದು ಮುಂಗೋಪ. ಆ ಕೋಪವನ್ನು ಶಮನ ಮಾಡಲು ತಕ್ಷಣ ಅದಕ್ಕೆ ಪರಿಹಾರ ಸಿಗಬೇಕು. ಯಾರನ್ನಾದರೂ ಬೈದು, ಹೊಡೆದು ಮಾಡಿಬಿಟ್ಟರೆ ಅಲ್ಲಿಗೆ ಮುಗೀತಿತ್ತು.

ಇನ್ನೊಂದು ಕಾರಣ ಅತೀವ ಬಡತನ. ಆ ಕಾಲದಲ್ಲಿ ಮಧ್ಯಮ ವರ್ಗದ ಅವೆಷ್ಟೋ ಬ್ರಾಹ್ಮಣ ಕುಟುಂಬಗಳು ಡಜನ್‌ಗಟ್ಟಲೆ ಮಕ್ಕಳನ್ನು ಹಡೆದು, ದುಡಿದು ತಿನ್ನದೇ ರೈತರಿಂದ ಬಂದಷ್ಟು ಲಾವಣಿ ಮುಂತಾದ್ದರಿಂದ ಉಪಜೀವನ ನಡೆಸುತ್ತಿದ್ದ ಕಾಲವದು. ಸಾಲ ಮಾಡಿ ಮನೆಯಲ್ಲಿಯ ಬೆಳ್ಳಿ ಬಂಗಾರವನ್ನು ಒತ್ತೆಯಿಟ್ಟು ಬಡ್ಡಿಯನ್ನೂ ಕೊಡಲಾಗದೇ ಎಲ್ಲವನ್ನೂ ಕಳೆದುಕೊಂಡಿದ್ದ ದಿನಗಳವು. ಆದರೂ ಠೀವಿಯಿಂದ ಬದುಕನ್ನು ಸಾಗಿಸುವತ್ತ ಧಿಮಾಕು ಬೇರೆ. ಅವರ ಒಂದು ಭಾವೀ ನಿರೀಕ್ಷೆ ಎಂದರೆ ಮಕ್ಕಳು 'ಇಂಗ್ಲೀಷು' ವಿದ್ಯೆ ಕಲಿತು, ದೊಡ್ಡ ನೌಕರಿ ಮಾಡಬೇಕು; ತಮಗೆ ದುಡ್ಡು ಕಳಿಸಬೇಕು... ಅವನ ನಿರ್ದಯ ಭಾವನಾಹೀನತೆಗೆ ಇದೇ ಮುಖ್ಯ ಕಾರಣವಿರಬೇಕು ಎನಿಸುತ್ತದೆ. ನಾನು ಹೈಸ್ಕೂಲ್ ಕಲಿಯುತ್ತಿದ್ದ ಕಾಲಕ್ಕೆ ಮನೆಯಲ್ಲಿ ಅದಾಗಲೇ ಐದಾರು ಎಳೆ ಜೀವಗಳು ಹೇಗೋ ಬದುಕಿ ಇದ್ದವು.

ಹೀಗೆಯೇ ನನ್ನ ನಾಲ್ಕು ವರ್ಷದ ವಿದ್ಯಾರಥ ಅಲ್ಲಲ್ಲಿ ಎಡವುತ್ತ ಸಾಗಿದ್ದಿತು. ಎಡಹುವುದು ಏಕೆಂದರೆ ಫೀ ಕೊಡಲಿಕ್ಕೇನೆ ಹಣದ ಚತ್ವಾರ. ಇತರ ವೆಚ್ಚಗಳಿಗೆ ಒಂದಾಣೆ ಸಹಿತ ಇರ್ತಿರಲಿಲ್ಲ. ಇರಲಿ, ೫ ನೆಯ ಇಯತ್ತೆಗೆ ಬಂದಾಗ ಜೂನ್ ತಿಂಗಳಲ್ಲಿ ಅಪ್ಪನು ಬಂದು ಆ ತಿಂಗಳ ಹಣವನ್ನು ಕೊಟ್ಟು ಹೋಗಿದ್ದ. ಆಮೇಲಿನ ಫೀ ಹಣಕ್ಕೆ ಕ್ಲಾಸ್ ಮಾಸ್ತರರು ತಾಕೀತು ಮಾಡಿದರಲ್ಲದೆ "ಇನ್ನೊಂದು ವಾರದಲ್ಲಿ ಫೀ ಕೊಡದಿದ್ದರೆ ನಿನ್ನ ಹೆಸರನ್ನು ತೆಗೆದು ಹಾಕುವೆ. ಶಾಲೆಯನ್ನೇ ಬಿಡಬೇಕಾದೀತು" ಎಂದು ಎಚ್ಚರಿಸಿದರು. ನಾನು ಪ್ರತಿ ದಿನವೂ ಹಾವನೂರಿಗೆ ಹೋಗುವ ಬಸ್ಸಿಗೆ ಯಾರಾದರೂ ಹೋಗುವವರ ಸಂಗಡ ಚೀಟಿ ಕಳಿಸುತ್ತಿದ್ದೆ. ಒಂದಕ್ಕೂ ಅಪ್ಪನಿಂದ ಪ್ರತಿಕ್ರಿಯೆ ಇಲ್ಲ. ಮೊದಲ ಬಾರಿಗೆ ಅವನ ಮೇಲೆ ಸಿಟ್ಟು ಬಂತು. ಕೊನೆಗೊಮ್ಮೆ ನನ್ನ ಹೆಸರನ್ನು ತೆಗೆದೇ ಬಿಟ್ಟರು. ನನ್ನೆಲ್ಲ ಅಳಲನ್ನು ತೋಡಿಕೊಂಡು ಸಿಟ್ಟಿನಿಂದಲೇ ಪತ್ರ ಬರೆದೆ.

ಮರುದಿನವೇ ಬಂದ. ನನ್ನನ್ನು ಕರೆದುಕೊಂಡು ಮುನಿಸಿಪಲ್ ಶಾಲೆಯ ಚೇರಮನ್ನರನ್ನು ಭೆಟ್ಟಿಯಾದ, ನವರಾತ್ರಿಯ ಹೊತ್ತಿಗೆ ಹೇಗೂ ಫೀ ಸಲ್ಲಿಸುವೆ, ಅಲ್ಲಿಯವರೆಗೆ ಸುಧಾರಿಸಿಕೊಳ್ಳಿರಿ ಎಂದು ಹೇಳಿದಾಗ ಅವರು ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. "ನೀವು ಹಾರುವರೆಲ್ಲ ಹೀಗೇ" ಎಂದು ಅವರು ಅಂದದ್ದು ಮಾತ್ರ ನನಗೆ ಈಗೂ ನೆನಪಿದೆ.

ಆದರೆ ನನ್ನ ವಿದ್ಯಾಭ್ಯಾಸದ ಗತಿ? ಇಷ್ಟರಲ್ಲಿ ನನಗೆ ಓದಿನ ಅಭ್ಯಾಸದ ಸವಿ ಹತ್ತಿದ್ದಿತು. ಏನಾದರೂ ಉಪಾಯ ಮಾಡಬೇಕಿತ್ತು. ನನ್ನ ಹೆಸರನ್ನು ತೆಗೆದು ಹಾಕಿದ್ದು ಕ್ಲಾಸ್ ಮಾಸ್ತರರಿಗಷ್ಟೇ ಗೊತ್ತಿತ್ತು. ಅವರ ಕ್ಲಾಸನ್ನು ತಪ್ಪಿಸಿ, ಉಳಿದ ವಿಷಯಗಳ ಪಾಠ ನಡೆದಾಗ ನಾನು ಹೋಗಿ ಕ್ಲಾಸಿನಲ್ಲಿ ಕೂಡಬಹುದಲ್ಲವೆ? ಒಳ್ಳೇ ಉಪಾಯ ಎನಿಸಿ, ಹಾಗೇ ಮಾಡತೊಡಗಿದೆ.

ಆದರೆ ಕ್ಲಾಸ್ ಮಾಸ್ತರರು ಕಲಿಸುತ್ತಿದ್ದ ವಿಷಯಗಳು ಇಂಗ್ಲಿಶ್ ಮತ್ತು ಕನ್ನಡ! ಸುರುವಿಗೆ ಅವರ ಪಾಠಗಳನ್ನು ತಪ್ಪಿಸಿದಾಗ, ಏನೊ ಒಂದು ಮಹತ್ವದ್ದನ್ನು ಕಳೆದುಕೊಂಡಂತೆ ಅನ್ನಿಸಿತು. ಅವರ ಪಾಠ ನಡೆದಾಗ ನಮ್ಮ ಕ್ಲಾಸ್ ರೂಮಿನ ಹಿಂಬದಿಯ ಕಿಟಕಿಯ ಬಳಿ ನಿಂತುಕೊಂಡು, ಅವರು ಹೇಳಿದ್ದನ್ನು ಕೇಳಿಸಿಕೊಳ್ಳುತ್ತಿದ್ದೆ. ಇತ್ತ ನೋಟ್ಸ್? ಅಮೇಲೆ ಬೇರೆ ವಿದ್ಯಾರ್ಥಿಗಳಿಂದ ಅವನ್ನು ಇಸಿದುಕೊಂಡು ಬಂದು ಬರೆದುಕೊಳ್ಳುತ್ತಿದ್ದೆ.

ಇಷ್ಟಾಗುವಾಗ ದೀಪಾವಳಿ ರಜೆಯೇ ಬಂದಿತು. ಹಾವೇರಿಯ ಶಾಲೆಯನ್ನು ಬಿಟ್ಟು ಧಾರವಾಡಕ್ಕೆ ಹೋದೆ. ಅಲ್ಲಿಯ ಕರ್ನಾಟಕ ಹೈಸ್ಕೂಲಿನಲ್ಲಿ ಹೆಸರು ಹಚ್ಚಿದೆ. ಹಾವೇರಿ ಯಲ್ಲಿದ್ದಾಗ ನನ್ನ ಬುದ್ಧಿವಂತಿಕೆ, ಲೇಖನಾದಿ ಕಾರ್ಯ ಯಾವುದೇ ಅವಕಾಶ ಇರಲಿಲ್ಲ. ಕರ್ನಾಟಕ ಹೈಸ್ಕೂಲಿನಲ್ಲಿ ಸಾಕಷ್ಟು ಉತ್ತೇಜನ ದೊರೆಯಿತು. ವಾರದ ಮನೆಯ ಊಟವಾದರೂ ಸುಸೂತ್ರ ಸಾಗಿದ್ದಿತು. ಫೀ ಅರ್ಧ ಮಾಫೀ ಏನೆಲ್ಲ. ಆಗೂ ಅಪ್ಪನಿಂದ ದೊರೆತ ಸಹಾಯ ಅಷ್ಟಕ್ಕಷ್ಟೇ. ಧಾರವಾಡಕ್ಕೆ ಅವನು ಬರುತ್ತಿದ್ದುದೂ ಕಡಿಮೆ. ಅವನಿಂದ ಏಟು ತಿನ್ನುವ ಪ್ರಸಂಗ ಬರಲಿಲ್ಲ. ಒಮ್ಮೆ ಮಾತ್ರ ಗದರಿಸಿದ್ದು ನೆನಪಿದೆ. ಆಗಿನ ಜನಪ್ರಿಯ ಪತ್ರಿಕೆ 'ಪ್ರಜಾಮತ'ವನ್ನು ಓದುತ್ತಿದ್ದಾಗ ಸಿಕ್ಕಿಬಿದ್ದೆ. "ಅಭ್ಯಾಸ ಮಾಡೋದು ಬಿಟ್ಟು ಇದ್ಯಾಕೆ? ಇನ್ನೊಮ್ಮೆ ಹೀಂಗ ಓದೋದು ಕಂಡರ ಚರ್ಮಾನೇ ಸುಲೀತೇನಿ" ಅಂದಿದ್ದ. ಆ ಪ್ರಸಂಗ ಬರಲಿಲ್ಲ. ಇಷ್ಟಕ್ಕೂ ನಾನು ಅರ್ಧ ಟಿಕೇಟಿನ ವರ್ಷ ಮುಗಿಸಿ ೧೩ ನೆಯ ವಯಸ್ಸಿನಲ್ಲಿ ಕಾಲಿರಿಸಿದ್ದೆ.

● ●

ಕಾರ್ಯಾನಂದ : ಕೇರ್ ಡಾ. ಶ್ರೀನಿವಾಸ ಹಾವನೂರ, ಕೆ.ಟಿ.ಸಿ., ಬಲ್ಮಠ, ಮಂಗಳೂರು - ೫೭೫ ೦೦೪

ಮಳೆ ಬಂದ ಮಾರನೆಯ ದಿನ

ಗುಂಡಣ್ಣ ಕಲಬುರ್ಗಿ

ಎಷ್ಟು ನೋವುಗಳ ಉಂಡು ಎಷ್ಟು ರಾತ್ರಿಗಳ ಕಳೆದು
ಬಿಕನಾಸಿಯಂತೆ ಬಿದ್ದುಕೊಂಡ ಈ ಜೀವ
ತತ್ತರಿಸಿ ನಲುಗಿ ಹೋಗಿತ್ತೋ, ಬಾಗಿತ್ತೋ ಬಾಳು
ಬೆಳುವಲದ ಬೇಗುದಿಯ ಈ ಗಾಳಿಯಲಿ ಗುಳೆ
ಹೋಗಿತ್ತೋ, ತುತ್ತು ಕೂಳಿಗೆ ತೊತ್ತಾಗಿ ಸಾಗಿತ್ತೋ!
ಮಳೆಯಿಲ್ಲ ಬೆಳೆಯಿಲ್ಲ ಬೆಳುವಲದ ನಾಡು ನೋಡೋ
ಕಡ ತಂದ ಬಾಳು ಮಣ್ಣ ಮಡಕೆಯಲ್ಲಿ ಕೂಳ

ಕುದಿಸಿತ್ತೋ, ಕೂಳ ಸುತ್ತ ಸುತ್ತುವರಿದ ಹಸಿದ
ಮಕ್ಕಳ ಸಂಭ್ರಮದ ಹಬ್ಬ ನೋಡೋ, ಹಡೆದ
ತಾಯಿ ಹೊಟ್ಟೆ ತಣ್ಣಗಾದಂತೆ ಎದೆ ತುಂಬ ಹಿಗ್ಗೋ!
ಮುನಿದ ಮಗಿಲರಾಯ ಮುತ್ತು ಕೊಡಲಿಲ್ಲ
ಹುತ್ತದೊಳಗೇ ಹುಗಿದು ಹೋದ, ಸತ್ತ ಹೆಣವಾಗಿ
ಕಂಡ ಹಸಿದ ನೆಲದವ್ವನ ಎದಿಗೋ, ಎದೆಗೆ
ಒದ್ದಂತೆ ಕನಸು ಕಡಿದಂತೆ ಬದುಕೆಲ್ಲಾ ಚೆಲ್ಲಾಪಿಲ್ಲಿ
ಎತ್ತ ಹೋದನೋ, ಇತ್ತ ಬರಲಿಲ್ಲ ಜೀವದೊಡೆಯ!
ಮಕ್ಕಳ ಮಾರಿ ರೊಕ್ಕ ತರಲು ಹೋದ ಮಗ ಮರಳಿ
ಬರಲಿಲ್ಲವೋ, ಭತ್ತ ಎಲ್ಲಿ ಸಿಗಬೇಕು ಚಿತ್ತ
ಎಲ್ಲಿ ನಾಟಬೇಕು ಬಿರುಕು ಬಿಟ್ಟ ಈ ಎದಿಯಾಗ
ಬಿಕ್ಕುಗಳೇ ಕುದಿಯತಾವ, ಕುಣಿಯತಾವ ಹುಚ್ಚೆದ್ದು
ಅನ್ನದಗುಳಿನ ಮುಂದ ಯಾವ ಬೆಡಗು ಬಿನ್ನಾಣವೋ!
ಮಳೆ ಬಂದ ಮಾರನೆಯ ದಿನ ಸಡಗರವೋ
ಸಡಗರ, ಅವ್ವನ ಎದಿತುಂಬ ಮತ್ತೆ ಚಿಗುರಿದ
ಜೀವಕಳೆ, ಒಪ್ಪಚ್ಚಿ ಅಗಲಿ ಕೂಡಿಕೊಂಡ
ಹಿಡಿಸಲಾರದ ಬೆಸುಗೆ ಬಂಧ! ನೊಂದ ನೋವುಗಳೆಲ್ಲ
ಸುಖದ ಮುಂದ ಮರೆತು ಹೋದವೋ
ಮರೆತು ಹೋದವೋ ಸುಖದ ಮುಂದ ನೋವುಗಳು!

● ●

ಡಾ. ಗುಂಡಣ್ಣ ಕಲಬುರ್ಗಿ : ಸೃಷ್ಟಿ, ಈರಣ್ಣನಗರ, ಮೂಡಲಗಿ - ೫೯೧ ೩೧೨, ಜಿ. ಬೆಳಗಾವಿ

ಕಾನೂನು

ಶಂಕರಗೌಡ ಸಾತ್ಮಾರ

ಈ ರಾಜಕೀಯ ನಾಯಕರು
ಕಾನೂನು ಮಾಡುತ್ತಾರೆ
ಹಾಗೆಯೇ ಬದಲಾಯಿಸುತ್ತಾರೆ
ಬೇಕೆಂದರೆ ಮುರಿದು ಹಾಕುತ್ತಾರೆ
ಮತ್ತೆ ಈ ಪಂಡಿತರು
ಕಾನೂನು ಓದುತ್ತಾರೆ
ಹಾಗೆಯೇ ವಿಮರ್ಶಿಸುತ್ತಾರೆ
ಬೇಕೆಂದರೆ ಕಾವಲು ಕಾಯುತ್ತಾರೆ
ಉಳಿದವರು
ಕಾನೂನು ಪಾಲಿಸುತ್ತಾರೆ
ಹಾಗೆಯೇ ಹೆದರುತ್ತಾರೆ
ಬೇಕೆಂದರೆ ಉರುಲು ಹಾಕಿಕೊಳ್ಳುತ್ತಾರೆ.

● ● ಶಂಕರಗೌಡ ಸಾತ್ಮಾರ : ಅ.ಶ್ರೇ. ಇಂಗ್ಲಿಶ್‌ಉಪನ್ಯಾಸಕ, ಸ.ಪ್ರ.ದ. ಕಾಲೇಜು, ಮುಂಡಗೋಡ

ಒಂದು ಜೀವನಾನುಭವಗಾಥೆಯ ಸುತ್ತ-ಮುತ್ತ...

ಎಚ್. ಡಿ. ಚಂದ್ರಪ್ಪಗೌಡ

ಜೀವನಚರಿತ್ರೆ, ಆತ್ಮಚರಿತ್ರೆ ಪ್ರಕಾರದ ಬರಹಗಳನ್ನು ಸಾಮಾನ್ಯವಾಗಿ ಸೃಜನಶೀಲ ಸಾಹಿತ್ಯವೆಂದು ಪರಿಗಣಿಸುವುದಿಲ್ಲ. ಆದರೂ ಅವುಗಳಿಗೆ ವಿಶಿಷ್ಟ ರೀತಿಯ ಪ್ರಾಮುಖ್ಯತೆಯಿದೆ. ವ್ಯಕ್ತಿಯೊಬ್ಬನ ಜೀವಿತ ಅವಧಿಯಲ್ಲಿ ಜರುಗಿದ ಘಟನೆಗಳ ಐತಿಹಾಸಿಕ ದಾಖಲೆಗಳಾಗಿ ಅವು ಉಳಿಯುತ್ತವೆಂಬುದನ್ನು ತಳ್ಳಿಹಾಕಲಾಗದು. ಜೊತೆಗೆ ಸಂಬಂಧಿಸಿದ ವ್ಯಕ್ತಿಯ ಜೀವನ ಸಾಧನೆ, ಏಳು-ಬೀಳುಗಳು ಹಾಗೂ ಜೀವನಶೈಲಿಯ ಬಗೆಗೆ ಹಿಡಿದ ಕೈಗನ್ನಡಿಯೂ ಆಗಬಹುದು. ಎಲ್ಲಕ್ಕಿಂತ ಮಿಗಿಲಾಗಿ ಆ ಕಾಲಘಟ್ಟದ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ, ನೈತಿಕ, ವೃತ್ತಿಜೀವನ ಮುಂತಾದ ಹಲವಾರು ವಿಚಾರಗಳ ಬಗೆಗೆ ಬೆಳಕು ಚೆಲ್ಲುತ್ತವೆ. ಅವುಗಳ ಸರಿಯಾದ ವ್ಯಾಖ್ಯಾನ, ಸೂಕ್ತ ಅನುಸರಣೆ ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶನ ನೀಡಬಲ್ಲವು. ನಮ್ಮವರೆ ಆದ ಮಹಾತ್ಮಾ ಗಾಂಧಿ, ಜವಾಹರಲಾಲ್ ನೆಹರು, ಎಂ. ಸಿ. ಛಗಲಾ ಮುಂತಾದವರ ಆತ್ಮಚರಿತ್ರೆಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಇಂಗ್ಲಿಷ್ ಮತ್ತಿತರ ಪಾಶ್ಚಿಮಾತ್ಯ ಭಾಷೆಗಳಲ್ಲಿ ಆತ್ಮಚರಿತ್ರೆಗಳ ಪರಂಪರೆ ವಿಪುಲವಾಗಿದೆ. ಭಾರತದಲ್ಲಿ ಪುರಾಣೇತಿಹಾಸಗಳಲ್ಲಿ ದೈವೀಪುರುಷರೆನ್ನಬಹುದಾದ ಮಹಾಮಹಿಮರಿರುವರಾದರೂ ಅವರಾರೂ ತಮ್ಮ ಆತ್ಮಕಥನಗಳನ್ನು ದಾಖಲಿಸಿರುವ ನಿದರ್ಶನಗಳಿಲ್ಲ. ಬದಲಿಗೆ ಅವರ ಕುರಿತು ಬರೆದ ವಿಶಿಷ್ಟ ಗ್ರಂಥಗಳ ಮಹಾಪೂರವೇ ಇದೆ. ಆದರೆ ಇತ್ತೀಚೆಗೆ ಪ್ರಸ್ತುತದ ಸಮಕಾಲೀನರನೇಕರು ತಮ್ಮ ಆತ್ಮಚರಿತ್ರೆಗಳನ್ನು ದಾಖಲಿಸುತ್ತಿರುವುದು ಒಂದು ಉತ್ತಮ ಬೆಳವಣಿಗೆಯೇ ಸರಿ. ಕನ್ನಡದಂತಹ ಪ್ರಾಂತೀಯ ಭಾಷೆಗಳಲ್ಲೂ ಇತ್ತೀಚಿನ ದಿನಗಳಲ್ಲಿ ಹಲವರು ತಮ್ಮ ಆತ್ಮೀಯ ಅನುಭವಗಳ ಆತ್ಮಕಥನಗಳನ್ನು ಬರೆಯುವ ಹವ್ಯಾಸ ಬೆಳೆದುಕೊಂಡು ಬರುತ್ತಿರುವುದಾದರೂ, ಈ ಪ್ರಕಾರದ ಸಾಹಿತ್ಯ ನಮ್ಮಲ್ಲಿಯ ಸಾಧಕರ ಸಂಖ್ಯೆ ಹಾಗೂ ನಮ್ಮ ಭಾಷೆ ತಲುಪಿರುವ ಶ್ರೇಷ್ಠ ಮಟ್ಟಕ್ಕೆ ಏನೇನೂ ಸಾಲದೆನಿಸುತ್ತದೆ.

ಆತ್ಮಕಥೆ/ಚರಿತ್ರೆ ಎಂದರೆ ತನ್ನ ಜೀವನದ ಒಂದು ನಿರ್ಣಾಯಕ ಹಂತ ತಲುಪಿದಾಗ– ವೃದ್ಧಾಪ್ಯ– ವ್ಯಕ್ತಿಯೊಬ್ಬ ತಾನು ಅಷ್ಟರ ತನಕ ಬಾಳಿದ ಜೀವನಮಾರ್ಗವನ್ನು ಸಿಂಹಾವಲೋಕನ ಮಾಡಿ ಪ್ರಾಮಾಣಿಕವಾಗಿ ನಿರೂಪಿಸುವ ದಾಖಲೆಯೆನ್ನಬಹುದು. ಆ ರೀತಿಯಲ್ಲಿ ದಾಖಲಿಸುವ ಅನುಭವ ಕಥನಗಳ ಬಗೆಗೆ ಪ್ರಖ್ಯಾತ ಇಂಗ್ಲಿಷ್ ವೈದ್ಯ ಬರಹಗಾರ ಜಾರ್ಜ್ ಸಾವ, "ಆತ್ಮವೃತ್ತಾಂತಗಳನ್ನು ಬರೆಯುವವರು ತಮ್ಮ ಕಾಲ ಮತ್ತು ಅಂದಿನ ಘಟನೆಗಳ ಬಗೆಗೆ ಅವರೇ ತೀರ್ಪುಗಾರರೂ ಆಗಲಾರರು" ಎಂದಿದ್ದರೆ, ಮತ್ತೊಬ್ಬ ಹೆಸರಾಂತ ಸಾಹಿತಿ ಡಾ. ಸಾಮ್ಯುಯೆಲ್ ಜಾನ್ಸನ್, "ಜೀವನ ಪರಿಚಯ ಒಂದು ಒಳ್ಳೆಯ ದಾಖಲೆಯಾಗ ಬೇಕಾದರೆ ಅದನ್ನು ಸಂಬಂಧಿಸಿದವರೇ ಬರೆಯುವುದು ಒಳಿತು" ಎಂದಿದ್ದಾರೆ. ಈ ಎರಡೂ ಅಭಿಪ್ರಾಯಗಳು ವಿರೋಧಾಭಾಸಗಳಂತೆ ಇರುವುವಾದರೂ, ಎರಡರಲ್ಲೂ ಅಷ್ಟಿಷ್ಟು

ಸತ್ಯಾಂಶಗಳು ಇರುವುದನ್ನು ತಳ್ಳಿಹಾಕುವಂತಿಲ್ಲ. ಆದುದರಿಂದ ಆತ್ಮವೃತ್ತಾಂತಗಳನ್ನು ಬರೆಯುವವರಲ್ಲಿ ಆತ್ಮಶೋಧನೆಯ ಪ್ರಾಮಾಣಿಕತೆ ಇರಬೇಕಾಗುತ್ತದೆ; ಘಟನೆಗಳನ್ನು ದಾಖಲಿಸುವಲ್ಲಿ ನೈಜತೆಯ ಸ್ಪರ್ಶ ಇರಬೇಕು; ನೈತಿಕತೆಯ ಹೊಣೆಗಾರಿಕೆ ಇರಬೇಕು. ಈ ಎಲ್ಲಾ ಆವಶ್ಯಕತೆಗಳನ್ನು ಗಮನಿಸಿದಾಗ ಸಾಮಾನ್ಯ ವ್ಯಕ್ತಿಗಳು ಅಂತಹ ಸಾಹಸ ಮಾಡುವಲ್ಲಿ ಹಿಂಜರಿಯುವುದು ಅಪರೂಪವೇನಲ್ಲ. ಅದರಿಂದಾಗಿ ಆತ್ಮಕಥೆಗಳನ್ನು ಬರೆಯುವ ಬಹುಪಾಲು ವ್ಯಕ್ತಿಗಳು ಸಮಾಜದಲ್ಲಿ ತಮ್ಮ ಬಹುಮುಖ ಸಾಧನೆಗಳಿಂದ ಹೆಸರು ಗಳಿಸಿ ಉನ್ನತ ಸ್ಥಾನಕ್ಕೇರಿದವರೇ ಹೆಚ್ಚಾಗಿರುವುದನ್ನು ನೋಡಬಹುದು. ಅವರ ಜೀವನಾದರ್ಶಗಳ ಹಿಂದೆ ಸಾಮಾನ್ಯವಾಗಿ ಧಾರ್ಮಿಕ, ಆಧ್ಯಾತ್ಮಿಕ, ತಾತ್ವಿಕ, ಸಾಮಾಜಿಕ, ರಾಜಕೀಯ ಮುಂತಾದ ಕ್ಷೇತ್ರಗಳ ಸಾಧನೆ-ಸಿದ್ಧಿಗಳ ಯಶಸ್ಸಿನ ಫಲಿತಾಂಶಗಳಿರುತ್ತವೆ. ಇದರಿಂದಾಗಿ ಬಹಳಷ್ಟು ಜನ ಈ ಬಗೆಯ ಸಾಹಿತ್ಯ ರಚನೆಗೆ ಮುಂದಾಗುವುದು ವಿರಳವೆಂದೇ ಹೇಳಬಹುದು.

ಆದರೂ ಸಾಮಾನ್ಯ ಜನರ ಸಮೂಹಕ್ಕೆ ಸೇರಿದವರಲ್ಲನೇಕರು ಉತ್ತಮ ಆತ್ಮಚರಿತ್ರೆಗಳನ್ನು ಬರೆದಿರುವ ನಿದರ್ಶನಗಳೂ ಇವೆ. ನಮ್ಮ ಮಲೆನಾಡಿನ ರೈತ ಕುಟುಂಬಕ್ಕೆ ಸೇರಿದ ವೈ. ಎಸ್. ಪುಟ್ಟಣ್ಣನವರು ೧೯೯೧ ರಲ್ಲಿ ಬರೆದ 'ನಾ ಕಂಡ ಮಲೆನಾಡು' ಮತ್ತೆ ೧೯೯೭ ರಲ್ಲಿ ಮರುಮುದ್ರಣಗೊಂಡಿದೆ. ಅವರ ಸರಳ ಸೌಜನ್ಯ, ಸುಸಂಸ್ಕೃತ ಜೀವನದ ಅನುಭವಗಳನ್ನು ಅನಾವರಣಗೊಳಿಸುವುದರ ಜೊತೆಗೆ ಮಲೆನಾಡಿನ ಅಪರೂಪದ, ವಿಶಿಷ್ಟ ಚಿತ್ರಣವನ್ನು ಆಡುಮಾತಿನ ನೇರ ನಡೆ-ನುಡಿಗಳಲ್ಲಿ ಹಿಡಿದಿಟ್ಟಿದ್ದಾರೆ. ಅದೇ ರೀತಿಯಲ್ಲಿ ತುಮಕೂರಿನಲ್ಲಿ ಟೈಲರ್ ವೃತ್ತಿ ನಡೆಸುತ್ತಿದ್ದು, ಜೊತೆಗೆ ಕಾರ್ಮಿಕ ವರ್ಗದ ಧುರೀಣರಾಗಿ ಹೆಸರಾದ ಕೆ. ಆರ್. ನಾಯಕ್ ಎಂಬವರು ೨೦೦೦ ದಲ್ಲಿ 'ಚಿನ್ನದ ಜಿಂಕೆಯ ಬೆನ್ನಹಿಂದೆ' ಎಂಬ ಅಪರೂಪದ ಆತ್ಮಕಥನವನ್ನು ಬರೆದಿದ್ದಾರೆ. ಸದಾ ಶೋಷಣೆಗೊಳಗಾಗುತ್ತಿದ್ದ ಬಡ ಬೀಡಿ ಕೆಲಸಗಾರರು, ಪೌರಕಾರ್ಮಿಕರು ಮುಂತಾದವರ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ಕಷ್ಟನಷ್ಟಗಳ ನಡುವೆಯೂ ಹೋರಾಟ ನಡೆಸಿ ಜಯ ಗಳಿಸುತ್ತಿದ್ದ ರೂವಾರಿ ಅವರಾಗಿರುತ್ತಿದ್ದರು. ಕೇವಲ ನಾಲ್ಕನೆಯ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದ್ದ ಅವರು ಅಖಿಲ ಭಾರತ ಮಟ್ಟದ ಕಮ್ಯುನಿಸ್ಟ್ ಮಾರ್ಕ್ಸಿಸ್ಟ್ ಧುರೀಣರ ಒಡನಾಟದಲ್ಲಿದ್ದ ಅವರ ಅನುಭವ ಕಥನ ಆ ತನಕ ನಿಗೂಢವಾಗಿದ್ದ ಒಂದು ವರ್ಗದ ಜನರ ಜೀವನಕ್ರಮಗಳ ನೈಜ ಚಿತ್ರಣವನ್ನು ತೆರೆದಿಡುತ್ತದೆ; ಅವರ ವೈಯಕ್ತಿಕ ಜೀವನ ಕಷ್ಟ ಕೋಟಲೆಗಳನ್ನು ಪರಿಚಯ ಮಾಡಿಕೊಡುತ್ತದೆ.

ಆತ್ಮಚರಿತ್ರೆಗಳ ನಿರ್ಮಾಣಕ್ಕೆ ಇರುವ ಈ ತರಹೆಯ ಹಿನ್ನೆಲೆಯಲ್ಲಿ ಸುಮಾರು ನಾಲ್ಕು ದಶಕಗಳ ಕಾಲ ವೈದ್ಯವೃತ್ತಿಯಲ್ಲಿ ನಿರತನಾಗಿದ್ದು, ಸಾಹಿತ್ಯಕ್ಷೇತ್ರದಲ್ಲೂ ಅಲ್ಪ ಸ್ವಲ್ಪ ಕೃಷಿ ಮಾಡಿದ ಅನುಭವವಿದ್ದವನಾದ್ದರಿಂದ ನನ್ನ ವೃತ್ತಿಜೀವನದ ಅನುಭವಗಳಿಗೆ ಲಿಖಿತ ರೂಪ ನೀಡುವ ಮನಸ್ಸಾಯಿತು. ವೈದ್ಯಕೀಯ, ಆಡಳಿತ ನಿರ್ವಹಣೆ, ವಕೀಲ ಮುಂತಾದ ವೃತ್ತಿಗಳಲ್ಲಿ ಜೀವನ ಸಾಗಿಸಿದವರಲ್ಲಿ ವಿಶಿಷ್ಟ ಹಾಗೂ ರೋಚಕ ವಿಚಾರಗಳ ಉಗ್ರಾಣವೇ ಹುದುಗಿ ಕುಳಿತಿರುತ್ತದೆಂದರೆ ಅತ್ಯುಕ್ತಿಯಲ್ಲ. ವೈದ್ಯರ ವ್ಯಕ್ತಿತ್ವ, ಜೀವನಕ್ರಮ, ದಿನನಿತ್ಯ

ಅವರಿಗೆದುರಾಗುವ ನಿಗೂಢ, ಸ್ವಾರಸ್ಯಕರ, ಕುತೂಹಲಕರ ಘಟನೆಗಳು, ಇತರರಿಗಿಂತ ತೀರಾ ಭಿನ್ನವಾಗಿರುತ್ತವೆ. ಅವರ ಕಾರ್ಯವಿಧಾನಗಳು ನಿಗೂಢವಾಗಿರುವಂತೆಯೇ ಸಾಮಾನ್ಯರಲ್ಲಿ ಭಯಮಿಶ್ರಿತ ಅಚ್ಚರಿಗಳಿಗೆ ಕಾರಣವಾಗಿರುತ್ತವೆ. ದುರದೃಷ್ಟವಶಾತ್ ನಮ್ಮ ದೇಶೀಯ ಭಾಷೆಗಳಲ್ಲಿ ವೈದ್ಯರಾದವರು ತಮ್ಮ ಅನುಭವಗಳನ್ನು ದಾಖಲಿಸುವಲ್ಲಿ ಹೆಚ್ಚಿನ ಉತ್ಸಾಹ ತೋರಿಸದಿರುವುದು ವಿಷಾದನೀಯ. ಹಾಗೆ ಮಾಡಿದಲ್ಲಿ ವೈದ್ಯಕೀಯಕ್ಕೆ ಸಂಬಂಧಿಸಿದ ಹಲವು ನಿಗೂಢ ವಿಷಯಗಳನ್ನು ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವುದರಲ್ಲಿ ಸಹಕಾರಿಯಾಗುತ್ತದೆ. ಕನ್ನಡದಲ್ಲಿ ವೈದ್ಯರು ತಮ್ಮ ಕಥನವನ್ನು ಬರೆದಿರುವವರು ಕಡಿಮೆಯೆನ್ನಬಹುದಾದರೂ, ಪ್ರಕಟವಾಗಿರುವ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದೆನಿಸುತ್ತದೆ. ಕೊರವಂಜಿ ಖ್ಯಾತಿಯ ಡಾ. ಎಂ. ಶಿವರಾಂ, ಡಾ. ಅನುಪಮಾ ನಿರಂಜನ, ಡಾ. ಡಿ. ವಿ. ರಾವ್, ಡಾ. ಗೋಪಾಲ್, ಡಾ. ನರಸಣಗಿ, ಡಾ. ಎಂ. ಮರಿಯಪ್ಪ, ಡಾ. ಸಿ. ಆರ್. ಚಂದ್ರಶೇಖರ್, ಡಾ. ಸ. ಜ. ನಾಗಲೋಟಿಮಠ ಮೊದಲಾದವರು ತಮ್ಮ ಆತ್ಮನಿವೇದನೆಗಳನ್ನು ದಾಖಲಿಸಿ ಈ ಪ್ರಕಾರದ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳನ್ನಿತ್ತಿದ್ದಾರೆ. ಇವರೆಲ್ಲರ ಉದಾಹರಣೆ ಇನ್ನೂ ಹಲವರಿಗೆ ಸ್ಫೂರ್ತಿಯಾಗಬಹುದಾಗಿದೆ.

ಇನ್ನು, ನಾನು ಬರೆದಿರುವ 'ವೈದ್ಯಾಧಿಕಾರಿಯ ಬದುಕು-ಬವಣೆ' (೨೦೦೨) ಕೃತಿ ಹಿಂದಿನ ಪ್ರೇರಣೆ ಹಾಗೂ ಉದ್ದೇಶಗಳ ಕುರಿತು ನಾಲ್ಕು ಮಾತುಗಳನ್ನು ಹೇಳುವುದು ಅಪ್ರಸ್ತುತವಾಗಲಾರದು :

● ಮಲೆನಾಡಿನ ಪುಟ್ಟ ಹಳ್ಳಿಯಲ್ಲಿ ಜನಿಸಿ ಶೈಶವಾವಸ್ಥೆಯಲ್ಲೇ ತಂದೆಯನ್ನು ಕಳೆದುಕೊಂಡು ಅಕ್ಷರ ಕಲಿಕೆಯೇ ಅಸಾಧ್ಯ ಎಂಬ ಪರಿಸರದಲ್ಲಿ ಆಕಸ್ಮಿಕವೋ ಎಂಬಂತೆ ವೈದ್ಯ ಪದವೀಧರನಾಗಿ, ನಂತರ ಶಸ್ತ್ರವೈದ್ಯನಾಗುವಲ್ಲಿನ ಹಲವು ತಿರುವುಗಳ ಚಿತ್ರಣ; ● ವೈದ್ಯನಾದ ನಂತರವೂ ಅರ್ಧ ಶತಮಾನದ ಹಿಂದೆ ಸರ್ಕಾರಿ ಕೆಲಸ ಪಡೆಯುವಲ್ಲಿ ಎದುರಾದ ಅಡಚಣೆ, ಅನ್ಯಾಯ, ಅದರಿಂದ ಸೇವಾ ಅವಧಿಯುದ್ದಕ್ಕೂ ಅನುಭವಿಸಿದ ಅವಮಾನಕರ ಘಟನೆಗಳು; ● ಸರ್ಕಾರಿ ಆಸ್ಪತ್ರೆಗಳ ಕಾರ್ಯ ನಿರ್ವಹಣೆಯಲ್ಲಿ ಎದುರಾದ ಸಮಸ್ಯೆಗಳ ನಿವಾರಣೆಗಾಗಿ ಪಟ್ಟ ಶ್ರಮಗಳು; ಔಷಧ ಸಾಮಗ್ರಿ, ಆಹಾರ ಸರಬರಾಜಿನ ವ್ಯವಸ್ಥೆಗಳಲ್ಲಿ ಲೋಪದೋಷಗಳನ್ನು ಸುಧಾರಿಸುವಲ್ಲಿ ಪಟ್ಟ ಶ್ರಮಗಳು; ● ಆಸ್ಪತ್ರೆಗಳಲ್ಲಿ ಎಲ್ಲಾ ಸ್ತರದ ಸಿಬ್ಬಂದಿ ವರ್ಗದವರ ಅಸಮರ್ಪಕ ಕಾರ್ಯ ನಿರ್ವಹಣೆ, ರೋಗಿಗಳ ಬಗೆಗೆ ತಾಳುವ ಅನಾದರಣೆ ಮುಂತಾದವುಗಳ ನಿರ್ವಹಣೆಯಲ್ಲಿ ಸೆಣಸಾಟ; ● ಆಸ್ಪತ್ರೆಯಲ್ಲಿ ಸಂಪರ್ಕಕ್ಕೆ ಬರುತ್ತಿದ್ದ ನಾನಾ ಬಗೆಯ ರೋಗಿಗಳು, ರೋಗ ಸಮಸ್ಯೆಗಳು, ರೋಚಕ ಹಾಗೂ ಮನ ಮಿಡಿಯುವ ಪ್ರಸಂಗಗಳು ಸಾವು-ಬದುಕಿನ ನಡುವೆ ತೊಳಲಾಡುತ್ತಿರುವವರ ಉದ್ವಿಗ್ನತೆಗಳು, ಅಸು ನೀಗುತ್ತಿರುವ ಅಂತಿಮ ಕ್ಷಣಗಳ ಅಸಹಾಯಕತೆ, ಬಂಧು-ಬಾಂಧವರ ನೋವು ನರಳಾಟ ಮುಂತಾದ ಸನ್ನಿವೇಶಗಳ ಪ್ರತ್ಯಕ್ಷದರ್ಶಿಯಾದಾಗಿನ ವಿಚಿತ್ರ ಅನುಭವಗಳು; ● ಅಪಘಾತ, ಹೊಡೆದಾಟ, ಕೊಲೆ ಪ್ರಕರಣಗಳಲ್ಲಿ ಭಾಗಿಯಾದವರ ವೈದ್ಯ ನ್ಯಾಯಶಾಸ್ತ್ರದ ಪರಿಧಿಗೆ ಸಿಲುಕುವ ರೋಗಿಗಳು, ವಿಚಿತ್ರ ಶವಪರೀಕ್ಷಾ ಸನ್ನಿವೇಶಗಳು, ಪೋಲೀಸು, ಕೋರ್ಟು,

ಕಛೇರಿಗಳ ಅನುಭವ; ● ಆಸ್ಪತ್ರೆಯ ಆಡಳಿತ ನಿರ್ವಹಣೆಯಲ್ಲಿನ ಲೋಪದೋಷಗಳು, ರೂಲ್ಸು-ಕಾನೂನುಗಳ ತೊಡಕುಗಳು, ಸಾರ್ವಜನಿಕರ ಕಷ್ಟ ಸುಖಗಳ ನಿವಾರಣೆಯಲ್ಲಿನ ಸಮಸ್ಯೆಗಳು, ಸರ್ಕಾರ ಹಾಗೂ ಸಂಬಂಧಿಸಿದ ಇಲಾಖೆಯವರಲ್ಲಿ ಸ್ಪಷ್ಟ ಧೋರಣೆ, ಮಾರ್ಗದರ್ಶನಗಳ ಅಭಾವ; ಆಸ್ಪತ್ರೆಗಳ ಆಡಳಿತ ಸುಧಾರಣೆಗೆ ಸಲಹೆ ಸೂಚನೆಗಳು; ● ಸಾಹಿತ್ಯಕ್ಷೇತ್ರ ಅದರಲ್ಲೂ ಜನಪ್ರಿಯ ವೈದ್ಯ ಸಾಹಿತ್ಯ ರಚನೆಯಲ್ಲೂ ಸಕ್ರಿಯ ಪಾತ್ರ; ಅಲ್ಪ ಸ್ವಲ್ಪ ಮನ್ನಣೆಗಳಿಗೂ ಪಾತ್ರ; ● ಸಾಮಾಜಿಕ, ಶಿಕ್ಷಣ ಕ್ಷೇತ್ರಗಳಲ್ಲೂ ಸಕ್ರಿಯ ಪಾತ್ರ;● ಪರಿಸರ ಸಂರಕ್ಷಣೆಯಲ್ಲೂ ಕಾರ್ಯನಿರತ.

ಹೀಗೆ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಅನುಭವಗಳನ್ನು ದಾಖಲಿಸುವ ಪ್ರಯತ್ನ ಮಾಡಿರುವೆ. ವೈದ್ಯಕೀಯ ಕ್ಷೇತ್ರ ಮತ್ತು ಆಸ್ಪತ್ರೆಗಳಲ್ಲಿ ನಿಗೂಢವಾಗಿ ಜರುಗುವ ಕಾರ್ಯಕಲಾಪಗಳ ಬಹಿರಂಗ ಚರ್ಚೆಗಳಿಗೆ ಇದು ಅವಕಾಶ ಮಾಡಿಕೊಡಬಹುದು.

● ●

ಡಾ. ಎಚ್. ಡಿ. ಚಂದ್ರಪ್ಪಗೌಡ : ೬೪, ಶ್ರೀನಿವಾಸ ನಿಲಯ, ಮಿಶನ್ ಕಾಂಪೌಂಡು, ಶಿವಮೊಗ್ಗ - ೧

ಆಯ್ದ ಕವಿತೆಗಳು

ಬಸವರಾಜ ವಕ್ಕುಂದ

೧. ಪೂರ್ತಿ ಕಾಣುವುದಿಲ್ಲ

ನೋಡುವ ಕಣ್ಣಿಗೆ ಬೆಳಕು ಬೇಕು
ಕಾಣುವ ವಸ್ತುವಿಗೂ ಬೆಳಕು ಬೇಕು
ಒಂದಕ್ಕಿಲ್ಲದಿದ್ದರೂ ಎರಡೂ ವ್ಯರ್ಥ

ಒಳಗಿನ ಕತ್ತಲು ಅಥವಾ ಬೆಳಕು
ಕಾಣಬೇಕೆಂದರೆ
ಹೊರಗಿನ ಲೈಟು ಹತ್ತಿರಬೇಕು

ಹೊರಗಿನ ಕತ್ತಲು ಅಥವಾ ಬೆಳಕು
ಕಾಣಬೇಕೆಂದರೆ
ಒಳಗಿನ ಲೈಟು ಹತ್ತಿರಬೇಕು

ಎರಡೂ ಕಡೆ ಲೈಟಿದ್ದರೂ
ಎರಡೂ ಕಡೆ ಕತ್ತಲು ಇದ್ದೇ ಇರುತ್ತದೆ

ಬೆಳಕಿನ ಅಪೂರ್ಣತೆಯೋ
ಕತ್ತಲೆಯ ಅಪಾರತೆಯೋ

ಹೊರಗಿಂದೇ ಆಗಲಿ
ಒಳಗಿಂದೇ ಆಗಲಿ
ಪೂರ್ತಿ ಕಾಣುವುದಿಲ್ಲ.

೨. ಗಾಳಿಯ ಸೋದರು

ದೀಪ
ಜೀವದ ದೀಪ
ಎರಡಕ್ಕೂ
ಎಣ್ಣೆ ಅಥವಾ
ಗಾಳಿ ಬೇಕು.

ಹೊರಗಿನ ದೀಪಕ್ಕೆ
ಎಣ್ಣೆಯೇ
ಉಸಿರು;
ಒಳಗಿನ ದೀಪಕ್ಕೆ
ಉಸಿರೇ
ಎಣ್ಣೆ.

ಆದರೆ
ಗಾಳಿ ಬೀಸಿದರೆ
ಬಯಲೊಳಗಿಟ್ಟ ದೀಪ
ನಂದುತ್ತದೆ.

ಅದೇ ಗಾಳಿ ನಿಂತರೆ
ಒಳಗಿದ್ದರೂ
ಜೀವದ ದೀಪ
ನಂದುತ್ತದೆ.

೩. ಅಳು ಕೂಗಿನ ಹಕ್ಕಿ

ಇದು ಇಷ್ಟವಾದವರ
ಆಪ್ತ ದನಿಯಲ್ಲಿ ಕೂಗುತ್ತದೆ

ಓಗೊಟ್ಟರೆ ರಕ್ತ ಕಾರಿ ಸಾಯಬೇಕು
ಸುಮ್ಮನಿದ್ದರೆ ಕಲ್ಲಾಗಿ ನಿಲ್ಲಬೇಕು
ಕಣ್ಣು ಮುಚ್ಚಿ ಬೆನ್ನು ಹತ್ತಿದರೆ
ಮುಗಿಯದ ದಾರಿಯಲ್ಲಿ ಕರೆದೊಯ್ಯುತ್ತದೆ

ಕತ್ತಲೆಯಲ್ಲಿ ಕಪ್ಪಗೆ ಬೆಳಕಿನಲ್ಲಿ ಬೆಳ್ಳಗೆ
ಮುಸುಕು ತೊಟ್ಟಿರುತ್ತದೆ
ಆದ್ದರಿಂದ ಇದನ್ನು ಕಾಣುವುದು
ಕಂಡರೆ ಗುರುತಿಸುವುದು
ಮುಸುಕು ಕಳಚಿದಾಗ ಮಾತ್ರ
ಆದರೆ ಅಷ್ಟೊತ್ತಿಗೆ ಆಗಬಾರದ್ದು ಆಗಿರುತ್ತದೆ.

ವೇಷಾಂತರಗೊಂಡು ಭಾಷಾಂತರಗೊಂಡು
ಕರುಳಿಗೆ ಕಸಿ ಮಾಡಿಕೊಂಡು
ಕೂಗುವ ಈ ಹಕ್ಕಿ ನೀರನ್ನು ರಕ್ತವಾಗಿಸುತ್ತದೆ
ಹತ್ತಿರದ ಅಥವಾ ದೂರದ
ಹತ್ತುಗಡಿಯಾಗಿ ಹಾಡುತ್ತದೆ

ಆದ್ದರಿಂದ ನನಗೆ
ಸಂಬಂಧವಾಚಕಗಳ ಭಯ
ಸಂಬಂಧವಾಚಕರ ಭಯ

ಅವ್ವ, ಕಂದಾऽ ಅಂತ ಕರೆದಾಗ
ಕರ್ಣನ ಎದುರಿಗಿನ
ಕುಂತಿಯ ನೆನಪಾಗಿ ನಡುಗುತ್ತೇನೆ

ಅಪ್ಪ, ಮಗನೇ ಅಂದಾಗ
ಕರ್ಣಕುಂಡಲ ಪಡೆದ
ಕಪಟ ವೇಷದ ದೇವೇಂದ್ರ
ನೆನಪಾಗಿ ಕಂಪಿಸುತ್ತೇನೆ.

ಹೆಂಡತಿ ರೀ ರೀ ಅಂತ
ಕಾಲೊಳಗೆ ಸುಳಿವಾಗ
ಕಾಳೋರಗ ಧೂಪದ ಹೊಗೆ
ನೆನಪಾಗಿ ಉಸಿರುಗಟ್ಟುತ್ತದೆ.

ಅಣ್ಣಾऽ ಅಂತ ಯಾರಾದರು ಕೂಗಿದರೆ
ಸುಗ್ರೀವನ ನೆನಪು
ಯಾವ ಮರದ ಮರೆಯಿಂದ

ರಾಮಬಾಣ ಎರಗುವುದೋ
ಎಂದು ತಿಳಿಯದ ವಾಲಿಯ ಹಾಗೆ ಅಳುಕು.

ಅಪ್ಪಾS ಅಂತ ಮಕ್ಕಳು ಕರೆವಾಗ
ಔರಂಗಜೇಬ ನೆನಪಾಗುತ್ತಾನೆ
ತಾಜಮಹಲನ್ನು ಕಾಣದ
ಶಹಜಹಾನನ ಸೆರೆವಾಸದ ಸ್ವಗತಾಲಾಪ
ನೆನಪಾಗಿ ಎದೆ ಬಡಿತ ನಿಂತ ಹಾಗೆ ತಳಮಳ

ತಮ್ಮಾS ಮಾಮಾS ಅಳಿಯಾS ಗೆಳೆಯಾS
ಅಂದಾಗೆಲ್ಲ ನೀವೇ ನೆನಪಿಸಿಕೊಳ್ಳಿ
ಯಾವ ಯಾವ ಕೊಳ್ಳಿ ಹೇಗೆ ಸುಡುತ್ತವೆ ಅಂತ
(ಮರೆಯಬಾರದು, ಬೆಂಕಿ ಹೂವಿನ ವೇಷದಲ್ಲಿರುವದನ್ನು)
ಇತಿಹಾಸ ಪುರಾಣ ವರ್ತಮಾನಗಳಿಂದ
ಮಾದರಿಗಳ ಆಯ್ದುಕೊಳ್ಳಿ
ಮುಸುಕು ತೆಗೆಯುವದು ಸಾಧ್ಯವಾದರೆ
ಹಕ್ಕಿಯಿಂದ ಕಾದುಕೊಳ್ಳಿ
ಇಲ್ಲವಾದರೆ ನನ್ನಂತೆ
ಬಲಿಪೀಠಕ್ಕೆ ತಲೆ ಒಡ್ಡಿಕೊಳ್ಳಿ
ಬೆಳಕಿಲ್ಲದ ಬೆಂಕಿಯಲ್ಲಿ ಸುಟ್ಟುಕೊಳ್ಳಿ.

೪. ಹಾದಿ

ಹಾದಿ ತೆಪ್ಪಗಿದೆ ಅಂತ ತಿಳಿಯಬೇಡಿ
ಅದು ಮೌನವಾಗಿ ಮಲಗಿದ ಹಾವು

ನೆಲ ಒದ್ದು ನೀರು ಬರಿಸುವ
ಹೆಜ್ಜೆ ಸಪ್ಪಳದಲ್ಲಿಯೇ ನಾವು ಮೈಮರೆತಾಗ
ಕಪ್ಪೆಯ ಹಾಗಿರುವ ನಮ್ಮ ಪಾದಗಳನ್ನು
ಅದು ಗೊತ್ತಾಗದ ಹಾಗೆ ನುಂಗಿರುತ್ತದೆ.

ನಮ್ಮನ್ನು ಎಲ್ಲಿಗೋ ಮುಟ್ಟಿಸಿತೆಂದು
ನಾವು ಹಾದಿಯ ಬಗ್ಗೆ ಕೃತಜ್ಞರಾಗಿರುತ್ತೇವೆ
ಆದರೆ ಅದು ನಮ್ಮ ಪಾದ ಮುಟ್ಟಿದಾಗಲೇ
ನಮ್ಮ ಜೀವ ಕ್ಷಣದ ಹಕ್ಕಿ
ಅದರ ಬಾಯಿಂದ ಬಾಲದ ವರೆಗೆ
ಹೊಟ್ಟೆಯ ಆಕಾಶದಲ್ಲಿ ಹಾರಾಡಿ
ಗೂಡು ಕಟ್ಟಲು ಹವಣಿಸಿ
ಬುರುಗು ನೊರೆ ಕಾರಿ ಕಾಣೆಯಾಗಿರುತ್ತದೆ

ನಾವು ಬಿಟ್ಟು ಬಂದೆವೆಂದು ತಿಳಿದ
ಹಾದಿ ಮಾತ್ರ ನಗುತ್ತ ಬೆನ್ನಿಗೆ ನಿಂತಿರುತ್ತದೆ

ಆಕಾಶದ ಹಾಗೆ ಹೆಡೆ ಹಿರಿದು
ನೆರಳಾಗಿ ಕೊಡೆ ಹಿರಿದು.

ಕೆಲವೊಮ್ಮೆ ಅಡ್ಡಗೆರೆ ಎಳೆದು ದಾಟಬೇಡ ಅನ್ನುತ್ತದೆ
ವೃತ್ತಾ ಎಳೆದು ಸುತ್ತಾಡು ಅನ್ನುತ್ತದೆ
ಬೇಕಾದ ಹಾಗೆ ಮೈ ಬಳುಕಿಸಿ
ಬೇಕಿದ್ದರೆ ಬಾ ಅನ್ನುತ್ತದೆ
ಕೆಲವೊಮ್ಮೆ ಮುಗಿದಂತೆ ಕಂಡು
ಗಹಗಹಿಸಿ ನಗುತ್ತದೆ
ಮುಗಿಯಲಾರದೆ ಅನಂತವಾಗಿ ಬೆಳೆಯುತ್ತದೆ.

ಆದರೆ ಹಾದಿ ಎಂದೂ ತಪ್ಪುವುದಿಲ್ಲ
ತಪ್ಪುವುದು ನಾವು ನೀವು
ಆವಾಗಲೂ ಅದು ಆರೋಪ ಮಾಡುವುದಿಲ್ಲ
ಆಯ್ಕೆಯ ಸ್ವಾತಂತ್ರ್ಯವನ್ನು ನಮಗೇ ಕೊಟ್ಟು
ಬೆನ್ನು ಸವರುತ್ತದೆ
ಹೆಜ್ಜೆ ಹೆಜ್ಜೆಗೂ ಬೆನ್ನಿಗಮರುತ್ತದೆ.

ನಾವು ಹಾದಿಯನ್ನು
ಸರಿಯಾಗಿ ನೋಡಿಕೊಳ್ಳದೆ ಇರಬಹುದು
ಕೆಡಿಸಿ ಹಾಳು ಮಾಡಿರಬಹುದು
ತಪ್ಪು ಹಾದಿಯದಲ್ಲ ನಮ್ಮದು
ನಷ್ಟವೂ ನಮಗೇ.
ಸವೆದದ್ದು ಹಾದಿಯಲ್ಲ ನಾವು ಅಂತ
ಗೋರಿಯ ವರೆಗೆ ಬಂದು
ಮಾತಿಲ್ಲದೆ ಪಿಸುಗುಟ್ಟುತ್ತದೆ
ದಾರಿ ದೀಪಗಳ ಬೆಳಕಲ್ಲಿ
ಸವೆದ ನೆನಪಿಗೆ ಅಳತೆಕಲ್ಲುಗಳು ಅಲ್ಲಲ್ಲಿ
ಕೊನೆಗೆ ನೆನಪುಗಳನ್ನೂ ಹುಗಿದು
ಗೋರಿಗೂ ಗೋರಿ ಕಟ್ಟುತ್ತದೆ
ಹೀಗೆಯೇ ಲಗೋರಿ ಆಡುತ್ತದೆ.

೫. ಮೈಯೆಲ್ಲ ಕಾಲುಗಳ ಕುದುರೆ

ಕಾಲಕ್ಕೆ ಕಾಲುಗಳು ಮಾತ್ರ, ಶರೀರವಲ್ಲ
ಕಾಲಿನ ಕೆಲಸ ನಡೆಯುವದು
ಮತ್ತು ತುಳಿಯುವದು
ಪ್ರಸಂಗ ಬಂದಾಗ ಒದೆಯುವದು
ಕಾಲಭೈರವನಾಗಿ ಕುಣಿಯುವದು

ಕಾಲಕ್ಕೆ ಕಾಲು ಸೋಲುವದಿಲ್ಲ
ಅದು ದಣಿದು ಕುಸಿಯುವದಿಲ್ಲ
ಸಕಲ ಜೀವರಾಶಿಗಳ ಹಣೆಬರಹ
ಅದರ ಹೆಜ್ಜೆಗುರುತುಗಳು

ಆತುರ ನಿಧಾನ ಎಂಬ ಭೇದವಿಲ್ಲದ
ಕಾಲವನ್ನು ಅಳೆಯಲಾಗದು
ಗಡಿಯಾರಗಳು ನಮ್ಮ ಬಡಿವಾರಗಳು ಅಷ್ಟೆ
ಆಯುಷ್ಯದ ತಕ್ಕಡಿಯಲ್ಲಿ
ಅದೇ ನಮ್ಮನ್ನು ಅಳೆಯುತ್ತದೆ
ಹುಟ್ಟು ಸಾವುಗಳ ಗಡಿ
ಯಾರದಲ್ಲಿ ತುರುಕಿ ತುಳಿಯುತ್ತದೆ

ಕಾಲವನ್ನು ತಿಳಿಯುವ ಪ್ರಯತ್ನಗಳೂ ಫಲಿಸಿಲ್ಲ
ಏನಾಯಿತೆಂದು ತಿಳಿಯುವ ಮೊದಲೇ
ಆಗಿಬಿಟ್ಟಿರುತ್ತದೆ ಆಗಬಾರದ್ದೋ
ಅಥವಾ ಅದೇ ಆಗಬೇಕಾದದ್ದೋ ತಿಳಿಯದು
ಏನಾಗುವುದೆಂಬ ಸುಳಿವು ಹತ್ತಿಗೊಡದ
ಈ ಕಾಲವು ಪ್ರಜ್ಞೆಗಿಂತ ವೇಗವಾಗಿ
ತನ್ನ ಕ್ರಿಯೆ ನಡೆಸುತ್ತದೆ.

ಹೀಗಾಗಿ ಕಾಲದ ದಿಕ್ಕು ಮತ್ತು ವೇಗಗಳನ್ನು
ಅಳೆಯಲು ತಿಳಿಯಲು ಆಗದು
ಅವಕಾಶ ಮತ್ತು ಅಸ್ತಿತ್ವಗಳ
ಅಂದರೆ ಬಯಲು ಮತ್ತು ಘನಗಳ
ಕಣಕಣದಲ್ಲಿಯೂ ಕಾಲೂರಿ ಕೆನೆಯುವ
ಮೈಯೆಲ್ಲ ಕಾಲುಗಳ ಕುದುರೆ ಈ ಕಾಲ;
ಗುಟ್ಟು ಬಿಡಲಾರದ
ಹುಟ್ಟು ಸ್ಥಿತಿ ಲಯಗಳ ತ್ರಿಶೂಲ
ಇದರ ಹೊರಚಾಚಿದ ನಾಲಿಗೆ;
ಭೂತ ವರ್ತಮಾನ ಭವಿಷ್ಯತ್ತುಗಳು
ಇದು ಸುರಿಸುವ ಜೊಲ್ಲು;
ಯಾವ ಕಿವಿಗಳಿಗೂ ಪತ್ತೆಯಾಗದು
ಇದು ತೇಕುವ ಸೊಲ್ಲು.

● ●

ಬಸವರಾಜ ಪಕ್ಕುಂದ : ಆಶ್ರಯ : ವ್ಹಿ. ಬಿ. ಕುಲಕರ್ಣಿ, ಶ್ರೀಕೃಷ್ಣ ಬಿಲ್ಡಿಂಗ್, ಬಾರಾಕೊಟ್ರಿ ಹತ್ತಿರ, ಧಾರವಾಡ-೫೮೦ ೦೦೭

೧. ನವಸ್ಮೃತಿ

ನೂರಾರು ಸಂದಿಗ್ಧ ಆಲೋಚನೆಗಳ ನಂತರ
ಸಾವಿರಾರು ಅಪ್ರಸ್ತುತ ಪ್ರಶ್ನೆಗಳಿಗೆ
ಉತ್ತರಗಳ ಕಂಡುಕೊಂಡ ನಂತರ
ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ.

ಗಡಿಗಳು, ಸರಹದ್ದುಗಳು ಬೇಡ
ಲಕ್ಷ್ಮಣರೇಖೆಗಳ ದಾಟಬೇಕಿರುವುದೀಗ ಅನಿವಾರ್ಯ.

ನಮಗೆ ಮಾತ್ರ ಸಾಧ್ಯವಾಗುವ ಆ ಕ್ರಿಯೆ
ನಮಗೆ ಮಾತ್ರ ಕೊಡಲಾದ ಆ ವರ
ಯಾರೋ... ಏನೋ... ಅಂತಾರೆಂದು
ಯಾಕೆ, ಯಾಕೆ ಬಿಟ್ಟುಕೊಡಬೇಕು?
ಯಾರಾದರೇನು?
ಒಂದು ಅನುಭವವ ಬದುಕಬೇಕು
ಯಾರಾದರೇನು? ಧೈರ್ಯವಾಗಿ
ನವಮಾಸಗಳು ಹೊರಲು ಸಿದ್ಧವಾಗಿರುವಾಗ.

ಹೃದಯ ಬಡಿತ
ಹೊಟ್ಟೇಲಿ ಕೇಳಿಸುವ
ಅದ್ಭುತವ ಅನುಭವಿಸಬೇಕು
ನಮ್ಮ ರಕ್ತಮಾಂಸದ ಫಲಗಳ ಮೇಲೆ
ಅವರಿವರ ಅಧಿಕಾರದ ಮೊಹರು ಅದ್ಯಾಕೆ ಬೇಕು?
ಅವರಿಗೇ ತಿಳಿಯದ ಅಸ್ಪಷ್ಟ ಬಹಿಷ್ಕಾರಗಳ ನಡುವೆ
ಈ ಯುಗದ ಮುಂದೆ ನಿಂತು
ಮಾತೃತ್ವವನ್ನು ಅನಾವರಣಗೊಳಿಸುತಿರುವೆ.

೨. ಕತ್ತಲೆಯಿಂದ ಬೆಳಕಿನೆಡೆಗೆ

'ಉಳಿವಿಗಾಗಿ ಹೋರಾಟ'
ಡಾರ್ವಿನ್ ಮತ್ತೆ ಮತ್ತೆ ನೆನಪಾಗುತ್ತಾನೆ
'ಪಹರೇ ಹೋಶಿಯಾರ್!'
ಪುರುಷಪ್ರಧಾನ ಸಮಾಜ ಕಾವಲು ಕಾಯುತ್ತಿದೆ
'ಸಬ್ ಠೀಕ್ ಹೈ!'
ಪಿತೃಪ್ರಧಾನ ವ್ಯವಸ್ಥೆ ಗಂಟಲು ಹರಿದುಕೊಂಡು ಅರಚುತ್ತಿದೆ

ಎಲ್ಲ ಸರಿಯಾಗಿಯೇ ಇದೆ;
ಬೂದಿ ಮುಚ್ಚಿದ ಕೆಂಡದ ಹಾಗೆ

ಒಳಗೆ
ಆಲೋಚನೆಯ ಅಗ್ನಿಪರ್ವತ
ಬೆಳಗಾಯಿತೇ? –ಗೊತ್ತಾಗಲೇ ಇಲ್ಲ
ನೋಡುತ್ತೇನೆ–
ಲಾವಾರಸ ಹರಿದೆಡೆಯಲೆಲ್ಲ
ಹೊಸ ಬದುಕು ಚಿಗಿತುಕೊಂಡಿದೆ
ಎಲೆ ಹಸಿರು ಬಣ್ಣ ನೋಡಿ
ಅಭ್ಯಾಸವಿರದ ಕಂಗಳಿಗೆ
ಕೊಂಚ ಕಾಲಾವಕಾಶ ಬೇಕಾಗಿ ಬಂದಿದೆ.

ವಿಭ್ರಾಂತಿಯಾಗಿದೆ
ಎಲ್ಲ ಕನಸಿನಂತಿದೆ
ಹಸಿಹಸಿ ಸುಳ್ಳಿನಂತಿದೆ
ನಂಬುವುದೋ ಬೇಡವೋ ಎಂದು
ತಿಳಿಯದ ಸಂದಿಗ್ಧ ಸ್ಥಿತಿಯಂತಿದೆ.

ಬದುಕು ಹೀಗೆಲ್ಲ ಪಾತ್ರ ಬದಲಿಸೀತೆಂದು
ಅಂದುಕೊಂಡಿರಲಿಲ್ಲ ಎಂದೂ
ಅಸಲಿಗೆ
ಸ್ವಂತದ ಬದುಕೆಂಬ ಆಲೋಚನೆಯೆಲ್ಲಿತ್ತು?
'ಆಲದ ಮರದಡಿಯ ಸಣ್ಣ ಸಸಿ'ಯಾಗಿ
ತೃಪ್ತಿಪಟ್ಟುಕೊಂಡೆನೆ ಹೊರತು
ನನ್ನ ಬದುಕೇನೋ ನಾನೇ ಬದುಕಿದ್ದಿದ್ದರೆ
ಎತ್ತರದ ಹೆಮ್ಮರವಾಗಿ ಬೆಳೆದು ನಿಂತಿರುತ್ತಿದ್ದೆ.

ಹೋಗಲಿ ಬಿಡು. ಎಲ್ಲ ಒಳ್ಳೆಯದಕ್ಕೇ ಆಯಿತು
ಜೀವನ ಅದ್ಭುತವಾಗಿದೆ
ಕಾಮನಬಿಲ್ಲಿಗಾಗಿ ಎಲ್ಲೆಲ್ಲೋ
ಹುಡುಕಬೇಕಾದ ಅಗತ್ಯವಿಲ್ಲ.
Manna, the heavenly food
ಆಕಾಶದಿಂದಿಳಿದು ಬಂದಿದೆ.

● ●

ಚಿದಾನಂದ ಸಾಲಿ : ಸಿರಿವಾರ - ೫೮೪ ೧೨೫, ಜಿ. : ರಾಯಚೂರು

ಮೂರು ಟಿಪ್ಪಣಿಗಳು

ಸುಮತೀಂದ್ರ ನಾಡಿಗ

೧. ಸಾಹಿತ್ಯ ಕೃತಿಗಳ ಹಕ್ಕು ಯಾರಿಗೆ ಸೇರಬೇಕು?

ಯಾವನೇ ಒಬ್ಬ ಪ್ರತಿಭಾವಂತ ತಾನಾಗಿಯೇ ಬೆಳೆಯುವುದಿಲ್ಲ. ಸಮಾಜ, ಸಂಸ್ಕೃತಿ, ಸಾಹಿತ್ಯ ಪರಂಪರೆ ಮತ್ತು ಭಾಷೆ ಅವನನ್ನು ಬೆಳೆಸುತ್ತವೆ. ಆದ್ದರಿಂದಲೆ ಒಬ್ಬ ಪ್ರತಿಭಾವಂತ ಸಾರ್ವಜನಿಕ ವ್ಯಕ್ತಿಯಾಗುತ್ತಾನೆ. ಅವನು ತನ್ನ ಸಮಾಜದ ಋಣವನ್ನು ತೀರಿಸುವುದಕ್ಕಾಗಿ ತನ್ನ ಕಲಾಕೃತಿಗಳನ್ನು ಸೃಷ್ಟಿಸುತ್ತಾನೆ. ಅದನ್ನು ಸಮಾಜಕ್ಕೆ ಕೊಡುತ್ತಾನೆ. ಅದಕ್ಕೆ ಪ್ರತಿಯಾಗಿ ಮತ್ತೆ ಸಮಾಜ ಅವನನ್ನು ಪುರಸ್ಕರಿಸುತ್ತದೆ. ಆದ್ದರಿಂದ ಯಾವುದೇ ಲೇಖಕನ ಕೃತಿಗಳು ಅವನನ್ನು ಬೆಳೆಸಿದ ಸಮಾಜಕ್ಕೆ ಸೇರಬೇಕೇ ಹೊರತು, ಆ ಸಮಾಜದ ಅತ್ಯಂತ ಸಣ್ಣ ಘಟಕವಾದ, ಅವನ ಕುಟುಂಬಕ್ಕಲ್ಲ. ಆದರೆ ನಮ್ಮಲ್ಲಿ ಬೇಂದ್ರೆ, ಕಾರಂತ, ರಾಜರತ್ನಂ ಮೊದಲಾದವರು ಸತ್ತ ಹತ್ತಿಪ್ಪತ್ತು ವರ್ಷಗಳಲ್ಲೇ, ಅವರ ಕೃತಿಗಳು ಅಪರೂಪವಾಗಿ, ಅವರನ್ನು ಅಧ್ಯಯನ ಮಾಡುವ ಅವಕಾಶಗಳು ತಪ್ಪಿ ಹೋಗಿವೆ. ಮಾಸ್ತಿಯವರ ಕೃತಿಗಳಿಗೂ ಹಕ್ಕಿನ ಉರುಲು ಬಿಗಿದುಕೊಂಡಿದೆ. ಇನ್ನೂ ಅನೇಕ ಲೇಖಕರ ವಾರಸುದಾರರ ವಿಳಾಸಗಳು ಕೂಡ ಸಿಗುತ್ತಿಲ್ಲ. ಅಕಸ್ಮಾತ್ತಾಗಿ ಹಳೆಯದೊಂದು ಪುಸ್ತಕ ಪ್ರಕಟವಾದ ಕೂಡಲೆ ಹಕ್ಕುದಾರರು ಹುಟ್ಟಿಕೊಳ್ಳುತ್ತಾರೆ. ಅದಕ್ಕೋಸ್ಕರ ಈ ವಾಂಶಿಕ ಹಕ್ಕನ್ನು ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಒಂದು ನೀತಿಸಂಹಿತೆಯನ್ನು ರೂಪಿಸಬೇಕು. ಮೊದಲಿಗೆ ಯಾವ ಯಾವ ಲೇಖಕರ ಕೃತಿಗಳ ಹಕ್ಕು ಯಾರಲ್ಲಿದೆ ಎಂದು ಕೇಳುವ ಜಾಹೀರಾತೊಂದನ್ನು ಪ್ರಕಟಿಸಬೇಕು. ಅವರಿಂದ ಉತ್ತರ ಬಂದ ಕೂಡಲೆ, ಆ ಹಕ್ಕಿಗೆ ತಕ್ಕ ದಾಖಲೆಗಳನ್ನು ಕೇಳಬೇಕು. ಬೇರೆ ಹಕ್ಕುದಾರರ ಹೆಸರನ್ನು ಅವರು ಮುಚ್ಚಿಹಾಕಿದ್ದರೆ ಅದಕ್ಕೆ ದಂಡವನ್ನು ಕಟ್ಟಬೇಕು ಅಥವಾ ಪರಿಹಾರ ನಿಧಿಯನ್ನು ಕೊಡಬೇಕು ಎನ್ನುವ ಕರಾರುಪತ್ರವನ್ನು ತೆಗೆದುಕೊಳ್ಳಬೇಕು. ಹೀಗೆ ಹಕ್ಕನ್ನು ಕೇಳದಿರುವ ಯಾವ ಯಾವ ಕೃತಿಗಳು, ಸಾರ್ವಜನಿಕರಿಗೆ ಲಭ್ಯ ಎನ್ನುವುದನ್ನು ತಿಳಿಸಬೇಕು. ವಾರಸುದಾರರು ಕೇಳಬಹುದಾದ ಸಂಭಾವನೆಯನ್ನೂ ಕನ್ನಡ ಸಂಸ್ಕೃತಿ ಇಲಾಖೆಯ ಒಂದು ಸಮಿತಿ ನಿರ್ಧರಿಸಬೇಕು. ಅಷ್ಟು ಗೌರವಧನವನ್ನು ಕೊಡಲಿಕ್ಕೆ ತಯಾರಾದ ಪ್ರಕಾಶಕರಿಗೆ, ವಾರಸುದಾರರು ಅನುಮತಿಯನ್ನು ಕೊಡದಿದ್ದರೆ ಅದು ದಂಡನಾರ್ಹವಾದ ಅಪರಾಧವಾಗಬೇಕು.

ಯಾವುದೇ ಪ್ರತಿಭಾವಂತನ ಕೃತಿ ಸಮಾಜಕ್ಕೆ ಸಿಕ್ಕುವಂತಿರಬೇಕು. ಸರ್ಕಾರ ಇಂತಹ ಕೆಲಸಗಳನ್ನು ಮಾಡುವುದಿಲ್ಲ ಅಂತ ತಿಳಿಯಬೇಕಿಲ್ಲ. ಏಕೆಂದರೆ ಸರ್ಕಾರದ ಹೆಜ್ಜೆ ಬಹಳ ನಿಧಾನ. ಆದ್ದರಿಂದ ಈಗ ಇನ್ನೂ ಜೀವಂತವಾಗಿರುವ ಸಾಹಿತಿಗಳು, ತಮ್ಮ ಕೃತಿಗಳು ನಿರ್ನಾಮವಾಗದ ಹಾಗೆ ನೋಡಿಕೊಳ್ಳುವುದಕ್ಕಾಗಿ, ಮತ್ತು ಮುಂದಿನ ಜನಾಂಗಕ್ಕೆ ಅವು ಸಿಗುವ ಹಾಗೆ ಮಾಡುವುದಕ್ಕಾಗಿ, ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ತುರ್ತಾಗಿ ಯೋಚಿಸಬೇಕು.

೨. ಜಾನಪದ ಕಾವ್ಯ

ನಾನು ಜಾನಪದದಲ್ಲಿ ಕುತೂಹಲವನ್ನು ಉಳಿಸಿಕೊಂಡದ್ದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಾನು ಚಿಕ್ಕ ಹುಡುಗನಾಗಿದ್ದಾಗ ನಮ್ಮ ಮನೆಯಲ್ಲಿ ಎಲ್ಲಮ್ಮನ ಪಡಲಗಿಯನ್ನು ಹೊರಿಸುತ್ತಿದ್ದರು. ನಾನಾಗ ಏಳೆಂಟು ವರ್ಷದ ಹುಡುಗನಾದ್ದರಿಂದ ನನಗೆ ವಿವರಗಳೆಲ್ಲ ಮರೆತುಹೋಗಿವೆ. ಆದರೆ ಪಡಲಿಗೆ ಹೊರಿಸುವ ಆಚರಣೆ ಒಂದು ರೀತಿ ಕುತೂಹಲದ, ಇನ್ನೊಂದು ರೀತಿಯಲ್ಲಿ ಆಶ್ಚರ್ಯಕರವಾದ, ಮತ್ತೊಂದು ರೀತಿಯಲ್ಲಿ ತಮಾಷೆಯ ವಿಷಯವೂ ಆಗಿತ್ತು. ಆಗಾಗ ಉಧೋ ಉಧೋ ಎಂದು ಕೂಗುವುದರಲ್ಲಿ ಸಂತೋಷವೂ ಸಿಕ್ಕಿತ್ತು. ಎಷ್ಟೋ ವರ್ಷಗಳಾದ ಮೇಲೆ ನನಗೆ ಜಾನಪದ ದೀರ್ಘ ಕವನಗಳ ಒಂದು ಸಂಗ್ರಹ ಸಿಕ್ಕಿತು. ಆ ಪುಸ್ತಕವೂ ಈಗ ನನ್ನಲ್ಲಿಲ್ಲ. ಆದರೆ ಅದರಲ್ಲಿ ಹೀಗೊಂದು ಮಾತುಕತೆಯಿತ್ತು :

"ಮಾಯಗಾರ್ತಿ ಎಲ್ಲಮ್ಮ ಮಹಾಮಹಿಮಳು ಹೌದೋ?"

"ಹೌದು ಹೌದು."

"ಆಕಿ ಗಂಡ್ಸರ್‍ನ್ನೊಯ್ದು ಹೆಂಗಸ್ರನ್ನ ಮಾಡ್ತಾಳೆ. ಹೆಂಗಸ್ನೊಯ್ದು ಗಂಡಸು ಮಾಡ್ತಾಳೆ ಹೌದೋ?"

"ಹೌದು ಹೌದು."

ಹೀಗೆ ನಾಟಕೀಯವಾಗಿ ಕತೆಯನ್ನು ಹೇಳುವುದರಲ್ಲಿ, ಹೌದೋ ಹೌದೋ ಎನ್ನುವುದು ಕಾಲಾನುಕ್ರಮದಲ್ಲಿ ಉಧೋ ಉಧೋ ಆಗಿರಬಹುದೇ ಎನ್ನುವ ಅನುಮಾನ ನನ್ನಲ್ಲಿ ಹುಟ್ಟಿತು. ನಾನು ಜಾನಪದ ತಜ್ಞನಲ್ಲ. ತಜ್ಞರು ಈ ಅನುಮಾನವನ್ನು ಬಗೆಹರಿಸಬೇಕು.

೩. ಸಮಾನತೆ

ಮನುಷ್ಯ ಸಂಘಜೀವಿ. ಒಟ್ಟಾಗಿದ್ದಾಗ ಅವನಿಗೆ ನೆಮ್ಮದಿ ಇರುತ್ತೆ. ರಕ್ಷಣೆ ಇರುತ್ತೆ. ಒಬ್ಬರಿಗೆ ಒಬ್ಬರ ಸಹಾಯವಿರುತ್ತೆ. ಒಟ್ಟಾಗಿ ಊಟ ಮಾಡುವಾಗ, ಒಟ್ಟಾಗಿ ಕೆಲಸ ಮಾಡುವಾಗ, ಒಟ್ಟಾಗಿ ಹಾಡುವಾಗ, ಕುಣಿಯುವಾಗ, ಒಟ್ಟಾಗಿ ಕಾರ್ಯಕ್ರಮವನ್ನೋ, ನಾಟಕವನ್ನೋ ನೋಡುವಾಗ, ಹಾಡನ್ನು ಕೇಳುವಾಗ, ಒಟ್ಟಾಗಿ ಕಾರ್ಯಕ್ರಮವನ್ನು ನಡೆಸುವಾಗ ಸಂತೋಷವಿರುತ್ತೆ. ಒಬ್ಬರೇ ಇದ್ದಾಗ ಏನು ಕಷ್ಟ ಅಂತ ನಾವು ಯಾರೂ ಯೋಚಿಸುವುದಿಲ್ಲ. ನಾವು ನಲವತ್ತು, ಐವತ್ತು, ಅರವತ್ತು, ಎಪ್ಪತ್ತು ವರ್ಷ ಬದುಕುತ್ತ ಹೋದಾಗ ನಾವು ಎಷ್ಟು ಜನರನ್ನ ದೂರ ಮಾಡುಕೊಳ್ಳುತ್ತೇವೆ ಅಂತ ನಾವು ಯೋಚಿಸುವುದಿಲ್ಲ. ಆಗ ನಮ್ಮ ಒಂಟಿತನ ಜಾಸ್ತಿಯಾಗುತ್ತ ಹೋಗುತ್ತೆ. ಆದರೆ ಹೆಚ್ಚು ಹೆಚ್ಚು ಜನರಿಗೆ ಸಹಾಯ ಮಾಡುತ್ತಿದ್ದರೆ, ನಗುನಗುತ್ತಾ ಇದ್ದರೆ, ಪ್ರೀತಿಯಿಂದ ಮಾತಾಡಿಸಿದರೆ, ನಮಗೆ ೭೦-೮೦ ಆದಾಗ ಯಾರಾದರೂ ನಾಕು ಜನ ಮಾತಾಡಿಸುವವರು ಇರುತ್ತಾರೆ.

ಎಲ್ಲರೂ ಒಟ್ಟಾಗಿದ್ದಾಗ, ಅವರಲ್ಲಿ ಸಮಾನತೆ ಇದ್ದಾಗ, ಬದುಕು ಚೆನ್ನಾಗಿರುತ್ತೆ. ನಾನು ಓದಿದವನು ಆದ್ದರಿಂದ ದೊಡ್ಡವನು, ಒಬ್ಬ ರೈತ ಓದಿಲ್ಲ ಆದ್ದರಿಂದ ಅವನು ಕಡಿಮೆ ಅಂದುಕೊಂಡರೆ ಮೂರ್ಖತನವಾಗುತ್ತೆ. ರೈತ ಬೆಳೆಯದಿದ್ದರೆ ಪಂಡಿತರಿಗೆ,

ಪ್ರೊಫೆಸರ್‌ಗಳಿಗೆ, ದೊಡ್ಡ ಅಧಿಕಾರಿಗೆ ಕೂಡ ಅನ್ನ ಸಿಕ್ಕುವುದಿಲ್ಲ. ಆದ್ದರಿಂದ ಮನುಷ್ಯ ಮನುಷ್ಯನ ವ್ಯವಹಾರದಲ್ಲಿ ಸಮಾನತೆ ಮುಖ್ಯವಾಗುತ್ತೆ. ನಮ್ಮ ಬುದ್ಧಿಶಕ್ತಿಯಿಂದ ನಮ್ಮ ಪ್ರತಿಭೆಯಿಂದ ನಮ್ಮನ್ನು ದೊಡ್ಡವರು ಅಂತ ಸಮಾಜ ಪರಿಗಣಿಸಬಹುದು. ನಾನು ಕವಿ ಆದ ಮಾತ್ರಕ್ಕೆ ನನ್ನ ಮಗ ಕವಿಯಾಗುವುದಿಲ್ಲ. ನಾನು ದೊಡ್ಡವನಾದ ಮಾತ್ರಕ್ಕೆ ನನ್ನ ಮಗ ದೊಡ್ಡವನಾಗುವುದಿಲ್ಲ. ಅಂದರೆ ಹುಟ್ಟಿನಿಂದ ಯಾರೂ ದೊಡ್ಡವರಲ್ಲ. ನಮ್ಮ ನಮ್ಮ ದುಡಿಮೆಯಿಂದ ಮಾತ್ರ ನಾವು ದೊಡ್ಡವರಾಗಲಿಕ್ಕೆ ಸಾಧ್ಯ. ಇದನ್ನು ನಮ್ಮ ಮಕ್ಕಳಿಗೆ ಹೇಳಿ ಕೊಡಬೇಕು. ಅವರು ಕಷ್ಟಪಟ್ಟು ಓದುವುದನ್ನು ಹೇಳಿಕೊಡಬೇಕು. ಅಂಬೇಡ್ಕರರು ಸಾಮಾನ್ಯ ಅಸ್ಪೃಶ್ಯರಾದ ಮಹಾರ್ ಜನಾಂಗದಲ್ಲಿ ಹುಟ್ಟಿ ಎಷ್ಟೇ ಅಪಮಾನಗಳನ್ನು ಸಹಿಸಿದ್ದರೂ, ತಮ್ಮ ಪರಿಶ್ರಮದಿಂದ ದೊಡ್ಡವರಾದರು. ಇಂಗ್ಲಿಷ್, ಸಂಸ್ಕೃತ ಮತ್ತು ಮರಾಠಿಯಲ್ಲಿ ಪಾಂಡಿತ್ಯವನ್ನು ಗಳಿಸಿಕೊಂಡರು. ನಮ್ಮ ಮಕ್ಕಳೂ ಕನ್ನಡ, ಇಂಗ್ಲಿಷ್, ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಗಳಿಸಿಕೊಳ್ಳಬೇಕು ಅಂಥ ಅವಕಾಶಗಳನ್ನು ನೀವು ಮಾಡಿಕೊಡಬೇಕು.

ಎಲ್ಲ ಸಮಾಜದಲ್ಲೂ ವ್ಯವಸ್ಥೆ ಇರಬೇಕಾಗುತ್ತೆ. ಆದ್ದರಿಂದ ಸರ್ಕಾರ ಬೇಕಾಗುತ್ತೆ. ವಿದ್ಯೆ ಬುದ್ಧಿ ಇರುವ, ಜನರ ಹಿತವನ್ನು ಬಯಸುವ ಆಡಳಿತಗಾರರು ಇರಬೇಕಾಗುತ್ತೆ. ರಾಜ್ಯದ ಗಡಿಗಳನ್ನು ರಕ್ಷಿಸಲಿಕ್ಕೆ ಸೈನ್ಯ ಬೇಕಾಗುತ್ತೆ. ನಮಗೆ ಬೇಕಾದ ಅಕ್ಕಿ, ಬೇಳೆ, ಉಪ್ಪು, ಮೆಣಸಿನಕಾಯಿ, ತರ್ಕಾರಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ದು ನಮಗೆ ಸಿಗುವ ಹಾಗೆ ಮಾಡುವ ವ್ಯಾಪಾರಿಗಳು ಬೇಕಾಗುತ್ತೆ. ನಗರಗಳನ್ನು, ಆಸ್ಪತ್ರೆಗಳನ್ನು, ಆಫೀಸುಗಳನ್ನು ಸ್ವಚ್ಛ ಮಾಡುವ ಜನ ಬೇಕಾಗುತ್ತೆ. ಸತ್ತ ಪ್ರಾಣಿಗಳನ್ನು ಎತ್ತಿಹಾಕುವವರು ಬೇಕಾಗುತ್ತೆ. ಹೀಗೆ ನಾಲ್ಕು ವರ್ಗದ ಜನ ಒಂದು ಸಮಾಜದಲ್ಲಿ ಬೇಕಾಗುತ್ತಾರೆ ಎನ್ನುವುದನ್ನು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಎಂದು ಕರೆದರು. ಅಂದರೆ ಅವರವರ ಮನೋಧರ್ಮದಿಂದ, ಅವರು ಮಾಡುವ ಕೆಲಸದಿಂದ ಈ ರೀತಿಯಾಗಿ ಒಂದು ಸಾಮಾಜಿಕ ವ್ಯವಸ್ಥೆ ಮತ್ತು ಕರ್ತವ್ಯದ ವಿಂಗಡಣೆಯನ್ನು ಮಾಡಬಹುದೆಂದು ಗ್ರೀಸ್ ದೇಶದಲ್ಲಿ ಪ್ಲೇಟೋ ಕೂಡ ಯೋಚಿಸಿದ್ದ. ಹಾಗೆ ಯೋಚಿಸಿದವರಿಗೆ ಹುಟ್ಟಿನಿಂದ ಯಾರೂ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಆಗುವುದಿಲ್ಲ ಎನ್ನುವುದು ಗೊತ್ತಿತ್ತು. ಆದರೆ ಬರಬರುತ್ತ ನಮ್ಮ ಮೂರ್ಖತನದಿಂದಲೇ, ನಾವು ಹುಟ್ಟಿನಿಂದಲೇ ವರ್ಣಗಳು ನಿರ್ಧಾರವಾಗುತ್ತವೆ ಅಂತ ನಂಬಿಕೊಂಡು ಬಂದೆವು.

ಈ ನಂಬಿಕೆ ಎಷ್ಟು ಆಳವಾಗಿದೆಯೆಂದರೆ ಲಿಂಗಾಯತರ ಮನೆಯಲ್ಲಿ ಹುಟ್ಟಿದವನು ಲಿಂಗಾಯತನಾಗುತ್ತಾನೆ, ಮುಸಲ್ಮಾನರಲ್ಲಿ ಹುಟ್ಟಿದವನು ಮುಸಲ್ಮಾನನಾಗುತ್ತಾನೆ, ಮಹಾರ್ ಜನಾಂಗದಲ್ಲಿ ಹುಟ್ಟಿದವನು ಮಹಾರ್ ಆಗುತ್ತಾನೆ ಅಂತ ನಂಬಿಕೊಂಡು ಬಂದೆವು. ಇಂಥ ನಂಬಿಕೆಗಳು ಎಷ್ಟು ನೋವಿಗೆ, ಕ್ರೌರ್ಯಕ್ಕೆ, ಹಿಂಸೆಗೆ, ಅಮಾನವೀಯತೆಗೆ ಕಾರಣ ಆದುವೆಂದರೆ, ಹಿಂದೂ ಧರ್ಮದಲ್ಲಿ ಸಮಾನತೆಯಿಲ್ಲ, ಮುಸಲ್ಮಾನರಲ್ಲಿದೆ, ಕ್ರೈಸ್ತರಲ್ಲಿದೆ, ಆದ್ದರಿಂದ ನಾವು ಮುಸಲ್ಮಾನರಾದರೆ ಅಥವಾ ಕ್ರೈಸ್ತರಾದರೆ, ಅಲ್ಲಿ ಸಮಾನತೆ ಸಿಗುತ್ತದೆ ಅಂತ ನಮ್ಮ ಅಸ್ಪೃಶ್ಯರು ಮತಾಂತರಗೊಂಡರು. ಪರಿಣಾಮ ಏನಾಯಿತೆಂದರೆ, ಅಲ್ಲಿಯೂ ಅವರು ಅಸ್ಪೃಶ್ಯರಾಗಿಯೇ ಉಳಿದರು. ಆದರೆ ಜ್ಯೋತಿಬಾ ಫುಲೆ, ಅಂಬೇಡ್ಕರ್, ಗಾಂಧಿಯಂಥವರು ಹಿಂದೂ ಧರ್ಮದಿಂದ ಅಸ್ಪೃಶ್ಯತೆಯ ರೋಗವನ್ನು ತೊಡೆದು ಹಾಕಲಿಕ್ಕೆ ಯತ್ನಿಸಿದರು. ಭಾರತದಲ್ಲಿ ಹುಟ್ಟಿ ಬೆಳೆದ

ಯಾರಿಗೇ ಆಗಲಿ ಕೆಲವು ನಂಬಿಕೆಗಳು ಗಾಢವಾಗಿರುತ್ತವೆ. ಹಿಂಸೆಯನ್ನು ಮಾಡಬಾರದು. ಎಲ್ಲರೂ ದೇವರ ಮಕ್ಕಳು. ಆದ್ದರಿಂದ ಸಮಾನರು. ನಾವು ಕೆಟ್ಟ ಕೆಲಸ ಮಾಡಿದರೆ ಪಾಪ. ಹಾಗೆ ಮಾಡಿದರೆ ಆ ಕರ್ಮದ ಫಲವನ್ನು ಅನುಭವಿಸಬೇಕಾಗುತ್ತೆ. ಆದ್ದರಿಂದ ಕೆಟ್ಟ ಕೆಲಸ ಮಾಡಬಾರದು, ನಮ್ಮಲ್ಲಿ ಸಾವಿರಾರು ದೇವರುಗಳಿದ್ದಾರೆ. ಎಲ್ಲಾ ದೇವರನ್ನು ಪೂಜಿಸಬಹುದು, ಪ್ರಾರ್ಥಿಸಬಹುದು. ದೇವರು ಒಬ್ಬನೆ. ಅವನು ಮನುಷ್ಯರಲ್ಲೂ ಇದ್ದಾನೆ, ಗಿಡ ಮರ ಪ್ರಾಣಿಗಳಲ್ಲೂ ಇದ್ದಾನೆ. ಯಾವ ಒಬ್ಬ ಮನುಷ್ಯನೂ ದೇವರಲ್ಲ. ದೇವರು ದೇವರೆ. ಅವನನ್ನು ಅಲ್ಲಾ ಅಂತ ಪೂಜಿಸಬಹುದು, ಜೀಸಸ್ ಅಂತ ಪೂಜಿಸಬಹುದು. ಇಂತಹ ನಂಬಿಕೆಗಳು ಹಿಂದೂಗಳಿಗೆ ಸಾಧ್ಯ. ಆದರೆ ಒಬ್ಬ ಮುಸಲ್ಮಾನ, ಅಥವಾ ಕ್ರೈಸ್ತ ವಿಷ್ಣುವೂ ದೇವರೆ, ಈಶ್ವರನೂ ದೇವರೆ, ರಾಮನೂ, ಕೃಷ್ಣನೂ, ಹನುಮಂತನೂ, ಅಣ್ಣಮ್ಮನೂ, ಮಾರಮ್ಮನೂ ದೇವರೆ ಎಂದು ಪೂಜಿಸುವುದಿಲ್ಲ. ಅವರ ನಂಬಿಕೆ ಬೇರೆ, ನಮ್ಮ ನಂಬಿಕೆ ಬೇರೆ. ನಂಬಿಕೆಯನ್ನು ಬದಲಾಯಿಸುವುದು ಸುಲಭವಲ್ಲ. ಆದ್ದರಿಂದ ಮತಾಂತರಕ್ಕೆ ಅರ್ಥವಿಲ್ಲ.

ಅಸ್ಪೃಶ್ಯತೆ ಒಂದು ಸಾಮಾಜಿಕ ರೋಗ. ಆದ್ದರಿಂದ ಸಮಾಜದಲ್ಲಿ ಜನಗಳು ಒಟ್ಟಾಗಿ ಸೇರಿ ಅಸ್ಪೃಶ್ಯತೆಯನ್ನು ತೊಡೆದು ಹಾಕಬೇಕು. ಅಂಥ ಪ್ರಯತ್ನವನ್ನು ಮಾಡಿ, ಎಲ್ಲ ಜಾತಿಯವರನ್ನೂ ಸೇರಿಸಿ, ಒಟ್ಟಿಗೆ ಊಟ ಮಾಡಿ, ನಮ್ಮ ಬುದ್ಧಿಯಲ್ಲಿ ತುಂಬಿದ ಕಸವನ್ನು ಕತ್ತರಿಸಿ ಹಾಕುವ ಪ್ರಯತ್ನವನ್ನು ಡಾ. ಅಂಬೇಡ್ಕರರು ಮಾಡಿದರು. ಈ ಸಮಾಜಕ್ಕೆ ಅಂತಹ ವೈದ್ಯರು, ಸರ್ಜನ್‌ಗಳು ಬೇಕು. ಹಿಂದೂ ಧರ್ಮದಲ್ಲಿರುವ ಅಸ್ಪೃಶ್ಯತೆಯ ಕ್ಯಾನ್ಸರನ್ನು ಕತ್ತರಿಸಿ ಹಾಕುವ ಆಪರೇಶನ್ ಆಗಬೇಕು.

ಸರಿ, ನೀವೆಲ್ಲ ಈ ಮಾತನ್ನು ಒಪ್ಪುತ್ತೀರಿ. ಆದರೆ ಅಂಬೇಡ್ಕರ್ ಶುರು ಮಾಡಿದ ಕೆಲಸವನ್ನು ಯಾರು ಮುಂದುವರಿಸಬೇಕು? ನಾನು ಹೇಳುವುದೇನೆಂದರೆ, ಈಗ ೩೦-೪೦-೫೦ ವರ್ಷ ಆದವರು, ೬೮ ವರ್ಷ ಆಗಿರುವ ನನ್ನಂಥವರನ್ನು ಬಿಟ್ಟುಬಿಡಿ. ನಮ್ಮ ಮಕ್ಕಳಿಗೆ ಆ ಸಾಧ್ಯತೆಯಿದೆ. ಅವರು ಅಂಬೇಡ್ಕರರ ಹಾಗೆ ಅನೇಕ ಭಾಷೆಗಳನ್ನು ಕಲಿಯುವ ಸಾಧ್ಯತೆಯಿದೆ. ಕರ್ನಾಟಕದಲ್ಲಿರುವವರು, ಕನ್ನಡದಲ್ಲಿರುವ ಬುದ್ಧಿಯನ್ನು ಪ್ರಚೋದಿಸುವ ಸಾಹಿತ್ಯವನ್ನು ಸಂಪೂರ್ಣ ಓದಬೇಕು. ಸಂಸ್ಕೃತದಲ್ಲಿರುವ ಗ್ರಂಥಗಳನ್ನು, ಇಂಗ್ಲಿಷ್, ಫ್ರೆಂಚ್, ಜರ್ಮನ್ ಮೊದಲಾದ ಭಾಷೆಗಳಲ್ಲಿರುವ ಅತ್ಯುತ್ತಮ ಗ್ರಂಥಗಳನ್ನು ಅಭ್ಯಾಸ ಮಾಡಬೇಕು. ಅವರು ಅಂಬೇಡ್ಕರರ ಎಲ್ಲ ಬರವಣಿಗೆಯನ್ನೂ, ಅವರ ಜೀವನಚರಿತ್ರೆಯನ್ನೂ, ಗಾಂಧಿ, ಜ್ಯೋತಿಬಾ ಫುಲೆ ಮುಂತಾದವರ ಗ್ರಂಥಗಳನ್ನೂ ಓದಬೇಕು. ಆಗ ನಮ್ಮ ಮಕ್ಕಳಲ್ಲಿ ಕೆಲವರಾದರೂ, ಅಂಬೇಡ್ಕರರ ಪೂಜಾರಿಗಳಾಗದೆ, ನಿಜವಾದ ಶಿಷ್ಯರಾಗಬಹುದು. ಅಂಬೇಡ್ಕರರನ್ನು ಪೂಜಿಸಿದರೆ ಸಾಲದು, ಅವರನ್ನು ಗುರುವಾಗಿ ತೆಗೆದುಕೊಂಡು, ಆ ಗುರು ನಡೆದ ಹಾದಿಯಲ್ಲಿ ನಡೆಯಬೇಕು. ಅಂಬೇಡ್ಕರರ ಶಿಷ್ಯತ್ವ ಸುಲಭವಾಗಿ ಸಿಗುವುದಿಲ್ಲ. ಅನೇಕ ವರ್ಷಗಳ ಕಾಲ ಕಷ್ಟಪಟ್ಟು ಅಧ್ಯಯನ ಮಾಡಿ, ಅದನ್ನು ಪ್ರಶ್ನಿಸುತ್ತಲೂ, ಅರ್ಥಮಾಡಿಕೊಂಡು, ಅದರ ಆಚೆಗೂ ಆಲೋಚಿಸುವ ಶಿಷ್ಯತ್ವ ನಮ್ಮ ಮಕ್ಕಳ ಆದರ್ಶವಾಗಬೇಕು.

ನನಗೆ ಗೊತ್ತು, ಭಾಷಣಗಳಿಂದ ಏನೂ ಆಗುವುದಿಲ್ಲ. ಈ ಕಿವಿಯಲ್ಲಿ ಕೇಳಿದ್ದು, ಆ ಕಿವಿಯಲ್ಲಿ ಹೊರಟು ಹೋಗುತ್ತೆ. ನಮ್ಮನ್ನು ಯಾರೂ ಪ್ರಶ್ನಿಸುವುದಿಲ್ಲ ಅಂತ ಭಾಷಣ

ಮಾಡುವವರಿಗೆ ಗೊತ್ತು. ಆದ್ದರಿಂದಲೇ ನಮ್ಮ ಎಲ್ಲ ಜಾತಿಯ ಸ್ವಾಮೀಜಿಗಳೂ, ಸಮಾನತೆಯ ಬಗ್ಗೆ ಭಾಷಣ ಮಡುತ್ತಾರೆ. ಎಲ್ಲ ಸ್ವಾಮೀಜಿಗಳನ್ನೂ ಕೇಳಿ "ನಿಮಗೆ ಸಾಮಾಜಿಕ ಸಮಾನತೆಯಲ್ಲಿ ನಂಬಿಕೆ ಇದೆಯೆ?" ಅಂತ. ಇದೆ ಅನ್ನುತ್ತಾರೆ. "ಹಾಗಾದರೆ" ಅಂತ ಅವರಿಗೆ ಕೇಳಿ, "ಸ್ವಾಮೀಜಿಗಳೆ, ನೀವು ಎಲ್ಲ ಜಾತಿಯ ಸ್ವಾಮೀಜಿಗಳೂ ಒಂದೇ ಅಡಿಗೆಯನ್ನು ಊಟ ಮಾಡುತ್ತೀರ?" ಅವರು ಹ್ಞೂ ಅನ್ನಬಹುದು. ಆದರೆ ಎಲ್ಲ ಸ್ವಾಮೀಜಿಗಳೂ ಒಟ್ಟಿಗೇ ಕೂತು ಊಟಮಾಡಲಿಕ್ಕೆ ತಯಾರಾಗಿರುವುದಿಲ್ಲ. ಒಂದುವೇಳೆ ಅದಕ್ಕೂ ತಯಾರಾದರುಅನ್ನಿ. ಅವರೆಲ್ಲರೂ ಸೇರಿ, "ಎಲ್ಲ ಜಾತಿಗಳೂ ಸಮಾನ, ಆದ್ದರಿಂದ ಯಾರು ಯಾವ ಜಾತಿಯಲ್ಲಿ ಬೇಕಾದರೂ ಮದುವೆಯಾಗಬಹುದು. ಅಂತರ್ಜಾತೀಯ ವಿವಾಹವನ್ನು ನಾವು ಒಪ್ಪಿಕೊಳ್ಳುತ್ತೇವೆ" ಅಂತ ಹೇಳಲಿ. ಅವರು ಹೇಳುತ್ತಾರಾ? ಖಂಡಿತಾ ಹೇಳುವುದಿಲ್ಲ. ಹಾಗಾದರೆ ಈ ಮಠಗಳಿಗೆ ನಾವು ಏಕೆ ಹೋಗಬೇಕು; ಅವರ ಭಾಷಣ ಕೇಳಲಿಕ್ಕೆ ಯಾಕೆ ಹೋಗಬೇಕು?

ಕಡೆಯದಾಗಿ ನೀವು ಒಂದು ವಿಷಯದ ಬಗ್ಗೆ ಯೋಚಿಸಬೇಕು. ನಾನು ಬ್ರಾಹ್ಮಣ. ನನ್ನ ಸ್ನೇಹಿತರು ಡಿ. ಎಸ್. ವೀರಯ್ಯನವರು. ತುಂಬ ಒಳ್ಳೆಯ ಕತೆಗಳನ್ನು ಬರ್ದಿದಾರೆ. ನನ್ನನ್ನು ಗುರು ಅಂತ ಕರೀತಾರೆ. ಆದರೆ ಅವರು ನನ್ನ ಶಿಷ್ಯ ಅಂತ ನಾನು ಹೇಳೋಲ್ಲ. ನನ್ನ ಸ್ನೇಹಿತ ಅಂತ ಹೇಳ್ತೇನೆ. ಅವರು ಅಂಬೇಡ್ಕರ್ ಅವರಷ್ಟು ದೊಡ್ಡವರಾಗಿ ಬೆಳೆಯಬೇಕು. ಅವರ ಹತ್ರಾನೂ ಈ ವಿಷಯ ಮಾತಾಡಿದೀನಿ. ಬ್ರಾಹ್ಮಣರ ಪರವಾಗಿ ಈ ಪ್ರಶ್ನೆ ಕೇಳ್ತಾ ಇಲ್ಲ. ನಾನೊಬ್ಬ ವ್ಯಕ್ತಿಯಾಗಿ ಈ ಪ್ರಶ್ನೆ ಕೇಳ್ತಿದೀನಿ : 'ಬ್ರಾಹ್ಮಣರು ನಿಮ್ಮನ್ನು ಸಮಾನರಾಗಿ ಒಪ್ಕೋಬೇಕು. ಅವರ ಹುಡುಗೀರನ್ನ ನೀವು ಮದುವೆ ಆಗ್ಬೇಕು ಅಂತೀರಿ. ಅನೇಕ ಬ್ರಾಹ್ಮಣ ಹುಡುಗಿಯರು ಈಗಾಗಲೇ ದಲಿತರನ್ನು ಮದುವೆ ಆಗಿದಾರೆ. ಆದರೆ ಎಷ್ಟು ದಲಿತರ, ಲಿಂಗಾಯತರ, ಒಕ್ಕಲಿಗರ, ರೆಡ್ಡಿಗಳ, ಈಡಿಗರ ಹೆಣ್ಣುಗಳನ್ನು ಮದುವೆಯಾಗಿದಾರೆ?'

ಇನ್ನೊಂದು ಪ್ರಶ್ನೆ. ಬ್ರಾಹ್ಮಣರು ದಲಿತರು ಸಮಾನರು ಅಂತ ಒಪ್ಕೊಳ್ತೀವಿ. ಆದರೆ ಹೊಲೆಯ ಮಾದಿಗ ಕೊರಚ ಕೊರಮ ಹೆಳವ ಚಂಡಾಲ, ಇನ್ನೂ ಏನೇನೊ ಜಾತಿಗಳಿದಾವಲ್ಲ ಅವರೆಲ್ಲರೂ ಒಬ್ಬರನ್ನೊಬ್ಬರು ಸಮಾನ ಅಂತ ಯಾಕೆ ತಿಳ್ಕೋಳ್ಳೋಲ್ಲ? ಅವರವರ ನಡುವೆ ಮದುವೆ ಯಾಕಾಗೋಲ್ಲ?

ಹೀಗೆ ದಲಿತರು ದಲಿತರ ನಡುವೆ ಕಚ್ಚಾಡ್ತ ಇದ್ದರೆ ದಲಿತ ಸಂಘಟನೆ ಆಗೋಲ್ಲ. ದಲಿತ ಸಂಘರ್ಷ ಮಾತ್ರ ಆಗ್ತಾ ಇರ್ತಾರೆ. ದಲಿತರು ಒಟ್ಟಾಗ್ದೆ ಇದ್ರೆ, ಅವರು ಮೊದಲಿದ್ದ ಹಾಗೇ ಇರ್ತಾರೆ. ಅವರು ರಾಜ್ಯಾಡಳಿತದಲ್ಲಿ ಅಥವಾ ಸರ್ಕಾರದಲ್ಲಿ ಭಾಗವಹಿಸಲಿಕ್ಕೆ ಆಗೋಲ್ಲ. ಇಬ್ಬರ ಜಗಳ ಮೂರನೆಯವನಿಗೆ ಲಾಭ ಅಂದಹಾಗೆ, ನಿಮ್ಮೊಳಗಿರುವ ಹದಿನೆಂಟು ಜಾತಿಗಳು, ಹದಿನೆಂಟು ರಾಜಕೀಯ ಸಂಘರ್ಷ ಸಮಿತಿಗಳಿಂದ ಉಳಿದವರಿಗೆ ಲಾಭ ಆಗುತ್ತೆ. ಇಂತಹ ಪರಿಸ್ಥಿತಿಯನ್ನು ಡಾ. ಅಂಬೇಡ್ಕರರು ಯೋಚಿಸಿರಲಿಲ್ಲ.

●●

ಡಾ. ಸುಮತೀಂದ್ರ ನಾಡಿಗ : ೩೮, ಅಪೂರ್ವ, ೧ ನೇ ಮೇನ್, ೩ ನೇ ಹಂತ, ೬ ನೇ ಬ್ಲಾಕ್, ಬನಶಂಕರಿ ೩ ನೇ ಸ್ಟೇಜ್, ಬೆಂಗಳೂರು-೫೬೦ ೦೮೫

ಶತಮಾನದ ಸಾಹಿತಿ ಹಾವರ್ಡ್ ಫಾಸ್ಟ್

ಜಿ. ಭಾಸ್ಕರ ಮಯ್ಯ

ಅಮೆರಿಕನ್ ಸಾಹಿತಿ ಹಾವರ್ಡ್ ಫಾಸ್ಟ್ ೧೨ ಮಾರ್ಚ್ ೨೦೦೩ ರಂದು ನಿಧನವಾದ. ಆಗ ಅವನಿಗೆ ೮೮ ನೆಯ ವಯಸ್ಸು. ಫಾಸ್ಟ್ ಇಪ್ಪತ್ತನೆಯ ಶತಮಾನದಲ್ಲಿ ಅತಿ ಹೆಚ್ಚು ಜನರಿಂದ ಓದಲ್ಪಟ್ಟ ಲೇಖಕರಲ್ಲಿ ಮೊದಲಿಗ. ಆತ ಅದ್ಭುತ ಪ್ರತಿಭೆಯ ಲೇಖಕ. ರಾಜಕೀಯ ಪುರೋಗಾಮಿತ್ವ ಹಾಗೂ ನಗರಪ್ರಜ್ಞೆಯ ಆತನ ಚಾರಿತ್ರಿಕ ಕಾದಂಬರಿಗಳು ವಿಶ್ವವಿಖ್ಯಾತವಾದುವು. ಪ್ರೇರಣಾಪ್ರದ, ಕರುಣಾಮಯ ಸುಶಿಕ್ಷಿತ ವ್ಯಕ್ತಿಯಾದ ಫಾಸ್ಟ್ ಮಹಾಮಾನವತಾವಾದಿಯಾಗಿದ್ದ. ಆದರೆ, ಅಮೆರಿಕಾದ ಸರಕಾರ ಆತನ ಹೆಸರನ್ನು ಕಪ್ಪು ಪಟ್ಟಿಯಲ್ಲಿ ದಾಖಲಿಸಿದೆ.

ಹಾವರ್ಡ್ ಮೆಲ್ವಿನ್ ಫಾಸ್ಟ್ ನ್ಯೂಯಾರ್ಕ್ ನಗರದ ಒಬ್ಬ ಬಡ ಕೂಲಿ ಕಾರ್ಮಿಕನ ಕುಟುಂಬದಲ್ಲಿ ೧೧ ನವೆಂಬರ್ ೧೯೧೪ ರಲ್ಲಿ ಜನಿಸಿದ. ಫಾಸ್ಟ್ ಮಗುವಾಗಿದ್ದಾಗಲೇ ತಾಯಿ ತೀರಿಕೊಂಡಿದ್ದಳು. ತಂದೆ ಒಂದು ಕಬ್ಬಿಣದ ಕಾರ್ಖಾನೆಯಲ್ಲಿ ಕಾರ್ಮಿಕ. ಬಾಲಕಾರ್ಮಿಕನಾಗಿಯೇ ಆತನ ಜೀವನಾರಂಭ. ಪತ್ರಿಕೆ ಹಾಕುವುದು, ಸಿಗಾರ್ ತಯಾರಿಸುವುದು, ಟೊಪ್ಪಿ ಹೊಲಿಯುವುದು, ಸಾಮಾನು ಸಾಗಿಸುವುದು, ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿ ಗುಡಿಸುವುದು– ಇಂಥ ಕೆಲಸಗಳನ್ನು ಮಾಡಿ ಆತನಿಗೆ ಬದುಕು ಸಾಗಿಸಬೇಕಾಗಿತ್ತು. ಆದರೆ ಅಸಾಧಾರಣ ಪ್ರತಿಭೆಯ ಬಾಲಕ ನ್ಯೂಯಾರ್ಕ್ ಲೈಬ್ರರಿಯ ಪೂರ್ಣ ಲಾಭ ಪಡೆದ.

ಫಾಸ್ಟ್‌ನ ಮೊದಲ ಕಾದಂಬರಿ ಅವನ ೧೮ ನೆಯ ವಯಸ್ಸಿನಲ್ಲಿ ಪ್ರಕಟವಾಯಿತು. ಅದರ ಹೆಸರು 'The Village'. ಅದನ್ನಾತ ೩೭ ಡಾಲರಿಗೆ ಮಾರಿದ. ೧೮ ನೆಯ ವಯಸ್ಸಿನಲ್ಲಿ ಆರಂಭವಾದ ಆತನ ಬರವಣಿಗೆ ೮೭ ನೆಯ ವಯಸ್ಸಿನ ತನಕ ಅವಿಚ್ಛಿನ್ನವಾಗಿ ಮುಂದುವರಿಯಿತು. ಆತ ಒಟ್ಟು ೭೫ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದ. ಹೆಚ್ಚಿನ ಪುಸ್ತಕಗಳು 'ಇ. ವೀ. ಕನಿಂಘಮ್' ಎಂಬ ಛದ್ಮ ಹೆಸರಿನಲ್ಲಿವೆ. ಇವುಗಳಲ್ಲದೆ ಪತ್ರಿಕೆಗಳಲ್ಲಿ, ಮ್ಯಾಗಜಿನ್‌ಗಳಲ್ಲಿ ಆತನ ಅಸಂಖ್ಯಾತ ಲೇಖನಗಳು ಪ್ರಕಟಗೊಂಡಿದ್ದುವು. ಆತ ಕತೆ, ನಾಟಕ, ಕವಿತೆಗಳನ್ನೂ ರಚಿಸಿದ್ದ.

ಫಾಸ್ಟ್‌ನ ಕೃತಿಗಳು ಆತನ ಯಾವುದೇ ಸಮಕಾಲೀನ ಲೇಖಕರಿಗಿಂತ ಅತಿ ಹೆಚ್ಚು ಓದಲ್ಪಡುತ್ತಿದ್ದುವು. ಅವನ ಕೃತಿಗಳು ಸುಮಾರು ೮೨ ಭಾಷೆಗಳಲ್ಲಿ ಅನುವಾದಗೊಂಡಿವೆ. ಅಮೆರಿಕಾದ ಗೃಹಯುದ್ಧದ ನಂತರ ಅಲ್ಲಿನ ಕರಿಯರ ಹೋರಾಟದ ಚಿತ್ರಣವಿರುವ 'The Freedom Road' ಎನ್ನುವ ಕಾದಂಬರಿಯ ಪ್ರತಿಗಳು ಇಡೀ ಜಗತ್ತಿನಲ್ಲಿ ಒಟ್ಟು ೨ ಕೋಟಿಗಳಿಗಿಂತ ಹೆಚ್ಚು ಮಾರಾಟವಾದುವು.

ಮೊದಮೊದಲಿಗೆ ಆತ ಅಮೆರಿಕಾದ ಕಮ್ಯುನಿಸ್ಟ್ ಪತ್ರಿಕೆ 'Daily Worker'ಗೆ ಬರೆಯುತ್ತಿದ್ದ. ಆನಂತರ ಬಹಳ ಕಾಲ 'ಗ್ರೀನ್‌ವಿಚ್ ಟಾಯಿಮ್ಸ್' ಪತ್ರಿಕೆಗೆ ನಿಯಮಿತ ಕಾಲಮಿಸ್ಟ್ ಆಗಿ ದುಡಿದ. ೨೦೦೦ ದಲ್ಲಿ ಪ್ರಕಟವಾದ ಆತನ ಕೊನೆಯ ಕಾದಂಬರಿಯ ಹೆಸರೂ 'ಗ್ರೀನ್‌ವಿಚ್'.

ಫಾಸ್ಟ್ ಅತ್ಯಂತ ಸಂವೇದನಶೀಲ, ಸ್ವಾಭಿಮಾನಿ ವ್ಯಕ್ತಿ. ಯಾವುದನ್ನೂ ಮುಚ್ಚಿಡದೆ ನಿರ್ಭಿಡೆಯಿಂದ ಬರೆಯುತ್ತಿದ್ದ. ತನ್ನ ಸಿದ್ಧಾಂತ ಹಾಗೂ ಆದರ್ಶಗಳಿಗಾಗಿ ಧೈರ್ಯದಿಂದ ಹೋರಾಡುತ್ತಿದ್ದ. ೧೯೪೩ ರಲ್ಲಿ ಆತ ಅಮೆರಿಕನ್ ಕಮ್ಯುನಿಸ್ಟ್ ಪಾರ್ಟಿಯ ಸಕ್ರಿಯ ಕಾರ್ಯಕರ್ತನಾದ. ಮೊದಲಿಂದಲೂ ಆತ ಫ್ಯಾಸಿಸ್ಟ್ ವಿರೋಧಿ ಸಂಘರ್ಷ ಹಾಗೂ Popular Front ನ ಜತೆಗಿದ್ದ. ಎರಡನೆಯ ಮಹಾಯುದ್ಧ ಮುಗಿಯುತ್ತಲೇ ಆತನನ್ನು ಜೈಲಿಗೆ ಅಟ್ಟಲಾಯಿತು.

ಜೈಲಿನಲ್ಲಿ ಆತ ಅತ್ಯುತ್ತಮ ಕವಿತೆಗಳನ್ನು ಬರೆದ. ತುರ್ಕಿಯ ಪ್ರಗತಿಶೀಲ ಕವಿ 'ನಾಜಿಮ್ ಹಿಕಮತ್'ನನ್ನು ಸಂಬೋಧಿಸಿ ಆತ ಬರೆದ ಕವಿತೆಯ ಸ್ಥೂಲ ಸಾರಾಂಶ ಹೀಗಿದೆ– 'ಯಾವ ರೀತಿ ಜೈಲಿನ ಗೋಡೆಗಳು ನಿಮ್ಮ ಶಬ್ದಗಳನ್ನು ತಮ್ಮೊಳಗೆ ಇಟ್ಟುಕೊಳ್ಳಲಾರವೊ ಅದೇ ರೀತಿ ನಮ್ಮ ಜೈಲಿನ ನಾಲ್ಕು ಗೋಡೆಗಳು ನಮ್ಮ ಶಬ್ದಗಳನ್ನು ಒಳಗೇನೇ ಅದುಮಿಡಲಾರವು. (ಆಗ 'ನಾಜಿಮ್ ಹಿಕಮತ್' ಕೂಡಾ ಜೈಲಿನಲ್ಲಿದ್ದ.) ನಾನು ನಿಮ್ಮನ್ನೆಂದೂ ನೋಡಿದ್ದಿಲ್ಲ. ನಿಮ್ಮನ್ನು ಚೆನ್ನಾಗಿ ತಿಳಿದಿದ್ದೇನೆಂದು ಹೇಗೆ ಹೇಳಲಿ? ನಮ್ಮ ನಡುವಿನ ಬಂಧುತ್ವವು ರಾಷ್ಟ್ರಗಳ ಗಡಿಗಳನ್ನು ದಾಟಿದೆ. ನನ್ನ ನಿಮ್ಮ ನಡುವೆ ೫ ಸಾವಿರ ಮೈಲುಗಳ ಅಂತರವಿದ್ದರೂ ನಮ್ಮ ನಡುವೆ ಅವಿಚಲ ಸಂಬಂಧವಿದೆ. ನಮ್ಮ ದೇಶದ ದುಷ್ಟ ಜನ ಭಯಾನಕ ಪಾತಕಗಳನ್ನು ಮಾಡುತ್ತಿದ್ದಾರೆ. ಸ್ವಾತಂತ್ರ್ಯ ನಾಚಿಕೆಯಿಂದ ತಲೆ ತಗ್ಗಿಸಿದೆ. ಆದರದು ಖಂಡಿತವಾಗಿಯೂ ಸೆಟೆದು ನಿಲ್ಲುವುದು. ವಿದೂಷಕನಂತೆ ಮೂರ್ಖ ನಗೆ ನಗುವ ಕೊಲೆಗಡುಕರಿಂದ ನಿರ್ಮಿತವಾದ ನಮ್ಮ ಜೈಲುಗಳ ನಾಲ್ಕು ಗೋಡೆಗಳು ಬೆಳಕು ಮತ್ತು ಗೌರವದೆಡೆಗಿನ ಮಾನವನ ಪ್ರಯಾಣದಲ್ಲಿ ಒಂದು ಸಣ್ಣ ತಂಗುದಾಣ ಮಾತ್ರ.' ಫಾಸ್ಟ್‌ನ ಇನ್ನೊಂದು ಅತ್ಯುತ್ತಮ ಕವನ 'ಅಕ್ಟೋಬರ್ ಕ್ರಾಂತಿ'. ಅದು ಅಕ್ಟೋಬರ್ ಕ್ರಾಂತಿಯಿಂದ ಜಗತ್ತಿನ ಕೋಟ್ಯಂತರ ಜನರ ಹೃದಯದಲ್ಲಿ ಆಸೆಯ ಸಂಚಾರವನ್ನುಂಟು ಮಾಡಿದುದರ ಕುರಿತು ಹೇಳುತ್ತದೆ.

ಜೈಲಿನಿಂದ ಆತ ಬಿಡುಗಡೆಯಾಗುತ್ತಲೆ 'ಶಾಂತಿಯ ಒಂದು ಹಾಡು' ಕವಿತೆಯನ್ನು ಬರೆದ. ಇದು ಕೊರಿಯಾದ ಮೇಲೆ ಅಮೆರಿಕಾ ಸಾರಿದ ಯುದ್ಧದ ಹಿನ್ನೆಲೆಯನ್ನು ಹೊಂದಿತ್ತು. ಅಲ್ಲಿ ಎತ್ತಿದ ಪ್ರಶ್ನೆಗಳು ಇಂದು ಅಮೆರಿಕಾ ಇರಾಕಿನ ಮೇಲೆ ನಡೆಸುತ್ತಿರುವ ಯುದ್ಧದ ಸಂದರ್ಭಕ್ಕೂ ಸಮಕಾಲೀನವಾಗಿವೆ. –'ತಾನು ಹುಟ್ಟಿದ ದೇಶ ಅಮೆರಿಕಾ ತನ್ನೆಲ್ಲ ಉತ್ಪಾದನೆ, ಸಂಪನ್ಮೂಲಗಳ ಆಧಿಕ್ಯ, ನಾನಾ ಜನಾಂಗಗಳ ವೈವಿಧ್ಯವನ್ನು ಹೊಂದಿಯೂ ಏಕೆ ಜಗತ್ತಿನ ತಿರಸ್ಕಾರಕ್ಕೆ ಪಾತ್ರವಾಗಿದೆ? ಇಡೀ ಜಗತ್ತಿನಲ್ಲಿ ಇಂದು ಬೆಳಕಿರುವಾಗ ಏಕೆ ನನ್ನ ದೇಶದಲ್ಲಿ ಮಾತ್ರ ಕತ್ತಲೆ? ಏಕೆ ಜನ ಹೆದರಿ ಮುದುಡಿ ಸೊರಗಿ ಬದುಕುತ್ತಿದ್ದಾರೆ? ಏಕೆ ಅವರು ಮೌನವಾಗಿದ್ದಾರೆ? ಅನ್ಯಾಯ, ಅಪರಾಧವನ್ನು ಎದುರಿಸಿದ ಸ್ವಾತಂತ್ರ್ಯದ ದನಿ ಎಲ್ಲಡಗಿದೆ?' ಈ ಸುದೀರ್ಘ ಕವಿತೆಯಲ್ಲಿ ಕಾಳರಾತ್ರಿ ಕಳೆದು ಅಂತಿಮವಾಗಿ ಬೆಳಕು ಮೂಡುತ್ತದೆಂಬ ಆಶಾಭಾವ ಕೊನೆಯಲ್ಲಿ ವ್ಯಕ್ತವಾಗುತ್ತದೆ.

ಜೈಲಿನಿಂದ ಹೊರಬಂದ ಕೂಡಲೇ ಅಮೆರಿಕಾ ಆತನ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸಿತು. ಆತನ ಪ್ರಕಾಶಕ Little Brown ನ ಸಂಪಾದಕನನ್ನು (ಅಂಗುಸ್ ಕೆಮರಾನ್)

ಕೆಲಸದಿಂದ ತೆಗೆದು ಹಾಕಿಸಿತು. ಅಮೆರಿಕಾದ ಯಾವ ಪುಸ್ತಕಾಲಯವೂ ಆತನ ಪುಸ್ತಕಗಳನ್ನು ಕೊಳ್ಳಕೂಡದೆಂದು ಆಜ್ಞೆ ಹೊರಡಿಸಿತು.

ಆದರೆ, ಫಾಸ್ಟ್ ಸೋಲನ್ನೊಪ್ಪಿಕೊಳ್ಳುವ ಮನುಷ್ಯನಾಗಿರಲಿಲ್ಲ. ಆತ 'ಬ್ಲೂ ಹೆರಾನ್ ಪ್ರೆಸ್' ಎಂಬ ಹೆಸರಿನಲ್ಲಿ ತನ್ನದೇ ಪ್ರಕಾಶನ ಸಂಸ್ಥೆಯೊಂದನ್ನು ತೆರೆದ. ತನ್ನ ಪುಸ್ತಕಗಳನ್ನು ತಾನೇ ಮುದ್ರಿಸಿ ಮಾರಾಟ ಮಾಡತೊಡಗಿದ. ಅವನು ಪ್ರಕಟಪಡಿಸಿದ ಮುಖ್ಯ ಪುಸ್ತಕಗಳು 'ಸ್ಪಾರ್ಟಕಸ್' (೧೯೫೧), ಸಿಲಾಸ್ ಟಿಂಬರ್‌ಮನ್ (೧೯೫೪), ಲೋಲಾ ಗ್ರೆಗ್ (೧೯೫೭).

ಸ್ಪಾರ್ಟಕಸ್ ಆತನಿಗೆ ಅತ್ಯಂತ ಹೆಚ್ಚಿನ ಜನಪ್ರಿಯತೆಯನ್ನು ತಂದುಕೊಟ್ಟಿತು. ಅದು ಕ್ರಿ. ಪೂ. ೭೧ ರಲ್ಲಿ ರೋಮನ್ ಸಾಮ್ರಾಜ್ಯದ ವಿರುದ್ಧ ಗುಲಾಮರು ಹೋರಾಡಿದ ಕತೆ. ಸ್ಪಾರ್ಟಕಸ್ ಗುಲಾಮರ ಮುಖಂಡ. ಈ ಕಾದಂಬರಿಯನ್ನು ಬರೆಯಲು ಪ್ರಾಚೀನ ರೋಮಿಗೆ ಸಂಬಂಧಿಸಿದ ನೂರು ಗ್ರಂಥಗಳನ್ನು ಅಧ್ಯಯನ ಮಾಡಿದ್ದ. ಮೂಲ ದಸ್ತಾವೇಜುಗಳನ್ನು ತಿಳಿದುಕೊಳ್ಳಲು ಲ್ಯಾಟಿನ್ ಭಾಷೆಯನ್ನು ಕಲಿತ. ಜೈಲಿನ ಯಾತನಾಮಯ ಜೀವನದ ಹಿನ್ನೆಲೆಯಲ್ಲಿ ಪ್ರಾಚೀನ ಗುಲಾಮಗಿರಿಯ ನಗ್ನ ವಾಸ್ತವಗಳನ್ನು ತಿಳಿದುಕೊಳ್ಳುವುದು ಆತನಂತಹ ಸಂವೇದನಶೀಲ ವ್ಯಕ್ತಿಗೆ ಸಹಜಸಾಧ್ಯವಾಗಿತ್ತು.

'ಸ್ಪಾರ್ಟಕಸ್' ಪ್ರಕಟವಾದ ಮೂರೇ ತಿಂಗಳಲ್ಲಿ ೪೮,೦೦೦ ಪ್ರತಿಗಳು ಮಾರಾಟವಾದುವು. ಅದೊಂದು ದಾಖಲೆ. ಪೇಪರ್‌ಬ್ಯಾಕ್ ಪ್ರತಿಗಳಂತೂ ಲಕ್ಷಾಂತರ ಸಂಖ್ಯೆಯಲ್ಲಿ ಮಾರಾಟವಾದುವು. 'ಸ್ಪಾರ್ಟಕಸ್' ಜನಪ್ರಿಯತೆಯನ್ನು ಮನಗಂಡು ಅಮೆರಿಕಾದ ಪ್ರಮುಖ ಕಂಪೆನಿ 'ಡಬಲ್ ಡೇ' ಮುನ್ನೂರು ಪ್ರತಿಗಳನ್ನು ಖರೀದಿಸಿ ತನ್ನ ಅಂಗಡಿಯಲ್ಲಿ ಇರಿಸಿಕೊಂಡಿತು. ೧೯೬೦ ರಲ್ಲಿ ಈ ಕತೆಯನ್ನಾಧರಿಸಿ ಸಿನೆಮಾ ಕೂಡಾ ಮಾಡಲಾಯಿತು. ಸೋವಿಯತ್ ಸಂಘವು ತನ್ನ ನೃತ್ಯರೂಪಕಗಳಲ್ಲಿ ಅದನ್ನು ಬಳಸಿಕೊಂಡಿತು.

ಫಾಸ್ಟ್ ಒಂದು ಸಂದರ್ಶನದಲ್ಲಿ ಈ ಕೃತಿಯ ಕುರಿತು ಮಾತನಾಡುತ್ತಾ ಹೀಗೆಂದಿದ್ದ– 'ಇಂದಿನಿಂದ ನೂರು ವರ್ಷಗಳ ನಂತರ ಇತಿಹಾಸವು ನಮ್ಮ (ಅಮೆರಿಕಾ) ಇಂಥದೇ ನಿಷ್ಪ್ರಭ-ಕಾಂತಿಹೀನ ಚಿತ್ರವನ್ನು ಪ್ರಸ್ತುತಪಡಿಸುತ್ತದೆ. ಏಕೆಂದರೆ, ರೋಮಿನಂತೆಯೇ ನಾವೂ ನಿರರ್ಥಕ ಯುದ್ಧಗಳನ್ನು ಮಾಡಿದ್ದೇವೆ. ಬೇರೆ ಬೇರೆ ರಾಷ್ಟ್ರಗಳ ವಿರುದ್ಧ ಅತ್ಯಂತ ಭಯಾನಕ ಕಾರ್ಯಾಚರಣೆ ನಡೆಸಿದ್ದೇವೆ. ಈಗ ನಾವು ಇರಾಕನ್ನು ನಾಶ ಮಾಡುತ್ತಿದ್ದೇವೆ. ಅಲ್ಲಿನ ಲಕ್ಷಾಂತರ ಮಕ್ಕಳ ಸಾವಿಗೆ ಕಾರಣವಾಗಿದ್ದೇವೆ. ನಾವು ನಮ್ಮ ಪಾಪವನ್ನು ರೋಮ್ ವಾಸಿಗಳಂತೆಯೇ ಸರಿಯೆಂದು ಘೋಷಿಸುತ್ತಿದ್ದೇವೆ. ರೋಮ್ ಮತ್ತು ನೂರು ವರ್ಷ ಹಿಂದಿನ ಬ್ರಿಟನ್‌ನಂತೆ ನಾವು ಈಗ ಹೆಚ್ಚು ಕಡಿಮೆ ಜಗತ್ತಿನ ಶಾಸಕರಾಗಿದ್ದೇವೆ. ಈ ದೃಷ್ಟಿಯಲ್ಲಿ ನೋಡಿದರೆ 'ಸ್ಪಾರ್ಟಕಸ್' ಪ್ರಾಚೀನ ಮತ್ತು ಸಮಕಾಲೀನ ಎರಡರ ಇತಿಹಾಸವೂ ಹೌದು. ಕಾಲಕ್ರಮದಲ್ಲಿ ಅದು ಪುರಾತನವಿದ್ದಿರಬಹುದು. ಆದರೆ, ಮಾನವೀಯ ದೃಷ್ಟಿಯಿಂದ ಪುರಾತನ ಅಲ್ಲ.'

೧೯೫೩ ರಲ್ಲಿ ಹಾವರ್ಡ್ ಫಾಸ್ಟ್‌ಗೆ ಸ್ಟಾಲಿನ್ ಅಂತಃರಾಷ್ಟ್ರೀಯ ಶಾಂತಿ ಪುರಸ್ಕಾರ ದೊರೆಯಿತು. ಈತನ ಇನ್ನೊಂದು ಸುಪ್ರಸಿದ್ಧ ಕೃತಿ 'Freedom Road'. ೨೦೦೦ ನೆಯ

ಇಸವಿಯ ಪೂರ್ವಾರ್ಧದಲ್ಲಿ ಈ ಕೃತಿಯ ೨ ಕೋಟಿ ಪ್ರತಿಗಳು ಮಾರಾಟವಾಗಿವೆ. ಆತನಿಗೆ ಅತಿ ಹೆಚ್ಚಿನ ಕೀರ್ತಿಯನ್ನು ತಂದುಕೊಟ್ಟ ಕೃತಿಗಳು ಮೊದಲಿಗೆ 'ಸ್ಪಾರ್ಟಕಸ್', ಆನಂತರ 'ಸಿಟಿಜನ್ ಟಾಮ್‌ಪೇನ್', 'ಫ್ರೀಡಮ್ ರೋಡ್', 'ಏಪ್ರಿಲ್ ಮಾರ್ನಿಂಗ್', 'ದಿ ಲಾಸ್ಟ್ ಫ್ರಾಂಟಿಯರ್' ಮತ್ತು 'ದಿ ಪೇಶನ್ ಆಫ್ ಸಾಕೋ ಎಂಡ್ ವೆಂಜೆದಿ'.

ಆದರೆ, ೧೯೫೬ ರಲ್ಲಿ ಆತನಿಗೆ ರಷ್ಯಾದ ಕಮ್ಯುನಿಸಮ್ ಬಗ್ಗೆ ಅತ್ಯಂತ ಭ್ರಮನಿರಶನವಾಗಿತ್ತು. ಹಂಗೇರಿಯಲ್ಲಿ ಸೋವಿಯತ್ ಸಂಘದ ಮಿಲಿಟರಿ ಕಾರ್ಯಾಚರಣೆ, ಆ ಕಾಲದಲ್ಲಿ ನಡೆದ ಅನ್ಯಾಯಗಳು ಆತನನ್ನು ಆಘಾತಗೊಳಿಸಿದವು. ಕಮ್ಯುನಿಸ್ಟ್ ಪಾರ್ಟಿಯ ೨೦ ನೆಯ ಸಮ್ಮೇಳನದಲ್ಲಿ ಸ್ಟಾಲಿನ್‌ರ ವ್ಯಕ್ತಿಪೂಜೆ ಆತನಿಗೆ ನುಂಗಲಾರದ ತುತ್ತಾಯಿತು. ತನ್ನ ಸಂಕಟವನ್ನು ಆತ ೧೯೫೭ ರಲ್ಲಿ ಪ್ರಕಟವಾದ ಕೃತಿ 'ದಿ ನೇಕೆಡ್ ಡಾಗ್ : ದಿ ರೈಟರ್ ಎಂಡ್ ಕಮ್ಯುನಿಸಮ್'ನಲ್ಲಿ ತೋಡಿಕೊಂಡಿದ್ದಾನೆ. ಕೊನೆಗೆ ಆತನಿಗೆ ಪಕ್ಷವನ್ನು ತ್ಯಜಿಸಬೇಕಾಯಿತು. ಆದರೆ, ಆತ ಅಮೆರಿಕಾದ ಗುಪ್ತಚರ ವಿಭಾಗದ ಯಾವುದೇ ವಿತ್ತಪೋಷಿತ ಅಥವಾ ಸಂಚಾಲಿತ ಸಂಸ್ಥೆಯೊಂದಿಗೆ ಸೇರಿಕೊಳ್ಳಲಿಲ್ಲ. ಅನ್ಯಾಯ ಮತ್ತು ಶೋಷಣೆಯ ವಿರುದ್ಧ ಆತನ ಲೇಖನ ನಿರಂತರ ಗತಿಶೀಲವಾಗಿಯೇ ಇತ್ತು.

ಆತನ ಸಾವಿನ ನಂತರ ಗಾರ್ಜಿಯನ್ ಪತ್ರಿಕೆ (೧೪ ಮಾರ್ಚ್ ೨೦೦೩)ಯಲ್ಲಿ ಎರಿಕ್ ಹೋಮ್‌ಬರ್ಗರ್ ಹೀಗೆ ಬರೆದ– 'ಸೋವಿಯತ್ ಸಂಘದಿಂದ ಭ್ರಮನಿರಸನಗೊಂಡರೂ ಫಾಸ್ಟ್ ಉಳಿದವರಂತೆ ವೃತ್ತಿಪರ ಕಮ್ಯುನಿಸ್ಟ್ ವಿರೋಧಿ ನಿಲುವನ್ನು ತಳೆಯಲಿಲ್ಲ. ಆತನಲ್ಲಿ ಇನ್ನೂ ಅನೇಕ ಕಾದಂಬರಿಗಳನ್ನು ಬರೆಯಲು, ಗ್ರಂಥ ರಚಿಸಲು, ಸ್ವಾತಂತ್ರ್ಯದ ಬಗೆಗೆ ಹೋರಾಡಲು ಸಾಕಷ್ಟು ಸಾಮಗ್ರಿಗಳು ಉಳಿದಿದ್ದುವು.'

ಕಮ್ಯುನಿಸ್ಟ್ ಆಂದೋಲನದಲ್ಲಿ ಆಸಕ್ತಿವುಳ್ಳವರು ಆತನ ನೆನಪುಗಳ ಪುಸ್ತಕ 'Beeing Red' (೧೯೯೦) ಅನ್ನು ಅವಶ್ಯ ಓದಬೇಕು. ಈ ಪುಸ್ತಕದಲ್ಲಿ ತಾನು ಕಮ್ಯುನಿಸ್ಟ್ ಆದ ಬಗೆ, ಹಾಗೂ ಕಮ್ಯುನಿಸ್ಟ್ ಪಕ್ಷದಲ್ಲಿ ಸಕ್ರಿಯವಾಗಿದ್ದಾಗಿನ ರೋಚಕ ಕ್ರಾಂತಿಕಾರಿ ಅನುಭವಗಳ ವರ್ಣನೆಯಿದೆ.

ಈಗ ಶೀತಯುದ್ಧದ ಕಾಲವೂ ಮುಗಿದೇ ಹೋಗಿದೆ. ಸೋವಿಯತ್ ಸಂಘದ ಅವಸಾನದ ಜತೆಗೆ ವೈಜ್ಞಾನಿಕ ಸಮಾಜವಾದವನ್ನು ಸಾಕಾರಗೊಳಿಸುವ ಪ್ರಯೋಗ ಮತ್ತು ಪ್ರಯತ್ನ ಸದ್ಯ ಹಿನ್ನಡೆ ಕಂಡಿದೆ. ಅಮೆರಿಕಾ ವಿಶ್ವದ ಏಕಮಾತ್ರ ಮಹಾಶಕ್ತಿಯ ರೂಪದಲ್ಲಿ ವಿಶ್ವವಿಜಯದ ಅಭಿಯಾನಕ್ಕೆ ಹೊರಟಿದೆ. ಇಂತಹ ಪರಿಸ್ಥಿತಿಯಲ್ಲಿ ಫಾಸ್ಟ್‌ನ ಕೃತಿಗಳ ಪುನರ್‌ಪಠನ ಮತ್ತು ಮೌಲ್ಯಮಾಪನ ಅತ್ಯಂತ ಆವಶ್ಯಕ. ಚಿಲಿಯ ಪಾಬ್ಲೊ ನೆರೂಡಾ ತನ್ನೊಂದು ಕೃತಿಯನ್ನು ಫಾಸ್ಟ್‌ಗೆ ಸಮರ್ಪಿಸಿದ್ದ.

ಭಾರತದಲ್ಲಿ ಆತನ ಕೃತಿಗಳ ಓದು ಅತ್ಯಂತ ವಿರಳ. ನಾವಿಂದು ಫಾಸ್ಟ್‌ನ್ನು ಪ್ರೀತಿಯಿಂದ ಸ್ವಾಗತಿಸಬೇಕಾಗಿದೆ.

(ಋಣ : ಹಾವರ್ಡ್ ಫಾಸ್ಟ್ : ಗಿರೀಶ್ ಮಿಶ್ರ)

● ●

ಡಾ. ಜಿ. ಭಾಸ್ಕರ ಮಯ್ಯ : ಪ್ರಮಾ, ಗುಂಡ್ಮಿ- ೫೭೬ ೨೨೬, ತಾ. ಉಡುಪಿ

೧

ಅನಿರೀಕ್ಷಿತ
ಸಿಕ್ಕಿತ್ತು ಈ ಪದವಿ
ಈ ಸ್ಥಾನ-ಮಾನ
ದೈವ ಕೃಪೆ.

ಆಹಾ! ಕಣ್ಣು ಕೋರೈಸುವ ಸಿಂಹಾಸನ
ದಾರಿಯುದ್ದಕ್ಕೂ ಹಾಸಿದ್ದಾರೆ ರತ್ನಗಂಬಳಿ
ಹೂವುಗಳ ಮೇಲೆ ಚೆಲ್ಲಿದ್ದಾರೆ
ಚಾಮರ ಹಿಡಿದು ನಿಂತಿದ್ದಾರೆ ಮೈ ನೆರೆದ
ಚೆಲುವೆಯರು, ಒಂದೆಡೆಗೆ ಮಂತ್ರಘೋಷ
ಇನ್ನೊಂದೆಡೆಗೆ ಸಾವಿರ ಸಾವಿರ
ಜನರ ಜಯಘೋಷ
ದಿವ್ಯನಗರಿಯ ಸುಖವೇ,
ದಿವ್ಯಪದವಿಯ ಸುಖವೇ
ಬಯಸದೇ ಬಂದ ಭಾಗ್ಯವೇ
ಶರಣು ಶರಣು.

ಮರೆಯುವುದು ಸಹಜ ಇಂಥ ವೈಭವದಲ್ಲಿ
ಆ ಕಾಡು, ಆ ಬೆಟ್ಟ
ಆ ಹರಿವ ನದಿ, ಆ ಮಣ್ಣು ಕಂಪು
ಆ ಮಂದಿ ಒಡನಾಟ.

ಅಲೆದ ಕಾಡುಗಳಲ್ಲಿ, ಬೆಟ್ಟಗುಡ್ಡಗಳಲ್ಲಿ
ದಟ್ಟ ಕಣಿವೆಗಳಲ್ಲಿ
ಗಿಡಮರದ ನೆರಳಲ್ಲಿ, ಹೊಳೆಬದಿಯಲ್ಲಿ
ಇಂಥ ಸುಖ ಸಿಕ್ಕಿತೇ?
ಮೊದಲ ಮಳೆಗೆ ಮಿಂದ ಮಣ್ಣಿನ
ಕಂಪಿನಲ್ಲೂ
ನೆನಪಿನ ಮಧುರ ಸುವಾಸನೆ ಇತ್ತೇ?
ಆ ಪ್ರೀತಿ, ಆ ದ್ವೇಷ, ಮತ್ಸರದ ಬದುಕಿನಲಿ
ಹೊಡೆದಾಟ, ಬಡಿದಾಟ
ನೂರು ಸಂಬಂಧಗಳ ಒಡನಾಟ–
ದಲಿ ರೋಮಾಂಚನವಿತ್ತೇ?
ಬೆಳಗಾಗೆದ್ದರೆ ತಾಪತ್ರಯ, ಚಿಂತೆ,
ನೂರೆಂಟು ನೋವು
ಬೆನ್ನ ಹಿಂದೆ ಇರುವ ಸಾವು
ಒಂದು ಕ್ಷಣವಾದರೂ ನೆಮ್ಮದಿಯ
ಕರುಣಿಸಿತ್ತೇ?
ಏನಂಥಾ ಸೊಗಸಿತ್ತು ಇಂಥ ವೈಭವದೆದುರು?
ಹೇಳು ಮನಸೇ.

ಅದೃಷ್ಟವೇ ಕರೆತಂತು ನನ್ನ
ಈ ವೈಭವದ ಸ್ವರ್ಗಕ್ಕೆ
ಏನಿಲ್ಲ ಏನುಂಟು
ಎಲ್ಲವೂ ಇಲ್ಲುಂಟು
ಮೃಷ್ಟಾನ್ನ ಭೋಜನ, ಕುಡಿಯಲಮೃತಜಲ
ಒರಗಲು ಮಿದು ಹಾಸುಗೆ
ಬಯಸಿದರೆ ಸಾಕು ಮಗ್ಗುಲಿಗೆ ಬರುವ
ಅಪ್ಸರೆಯರ ದಂಡು,
ಸುಖ ಸುಖ ಸುಖ
ಸಾವು ಕೂಡಾ ಇಲ್ಲಿ ಕಾಡುವುದಿಲ್ಲ
ಕಾಯುವುದಕ್ಕೆ ಕಾದು ನಿಂತಿದ್ದಾರೆ
ದೇವ ವೈದ್ಯರು- ಅಶ್ವಿನಿ ಸೋದರರು.

ಅಡ್ಡಾಡಬೇಕೇ ಹೊರಗೆ
ಕಾಯುತ್ತಿದೆ ಅಲ್ಲಿ ಪಲ್ಲಕಿ, ರಥ
ಬೇಕಾದರೆ ಐರಾವತ
ಜಿಗಿದು ಕುಳಿತರೆ ಸಾಕು
ಯಾವ ಲೋಕಕ್ಕೂ ಹಾಜರು.
ಬಿಡುಗಣ್ಣ ಬಾಲೆಯರು, ನಗೆಮೊಗದ ಸೇವಕರು
ಕರೆದಲ್ಲಿಗೆ ಬರುವ ಇಷ್ಟಾರ್ಥ ವಸ್ತುಗಳು

ಸುತ್ತಹೊರಟರೆ ದಾರಿ ಕಕ್ಕಾಬಿಕ್ಕಿ-
ಯಾಗಿ ಕುಳಿತರೆ ಬೇಕಾದ್ದನ್ನು
ನೀಡೋ ಪರಿಚಾರಕರು
ಓ ದಿವ್ಯ ನಗರಿಯೇ
ಹೊಸ ನಾಗರಿಕತೆಯೇ
ಹಳೆಯದೆಲ್ಲವ ಮರೆಸಿ ಹೊಸತನ ಮೆರೆವ
ನನ್ನ ಹೊಸಲೋಕವೇ

ಸ್ವೀಕರಿಸು ನನ್ನನ್ನು
ನಿನ್ನಲ್ಲೊಬ್ಬನನ್ನಾಗಿ ಸ್ವೀಕರಿಸಿ
ಕಲಿಸು ಹೊಸ ಜೀವನದ ಪಾಠ
ಉಳಿಸು
ನನ್ನನ್ನಿಲ್ಲೇ ಉಳಿಸು
ಸೋತಿದ್ದೇನೆ ನಿನಗೆ
ಇಲ್ಲೇ ಉಳಿಯುವುದಕ್ಕೆ
ಅವಕಾಶ ಕಲ್ಪಿಸು.

೨

ಸೇವಕ ಬಾಗಿ ಹೇಳುತ್ತಾನೆ
"ಹೊರಗೆ ಕಾದಿದ್ದಾರೆ ಜನ"
ಕಣ್ಣು ಹಾಯಿಸಿದರೆ ಜನಸಾಗರ
ಒಳಕರೆಯಲೂ ಬೇಸರ
ಅಯ್ಯೋ, ಈ ಕುರ್ಚಿ ಏಳಬಿಡುತ್ತಿಲ್ಲ.

ಉದ್ಯೋಗ, ಬಡ್ತಿ, ವಸತಿ
ಊರಿಗೊಂದು ರಸ್ತೆ
ಮಗನಿಗೊಂದು ಮೆಡಿಕಲ್ ಸೀಟು
ಬೇಡಿ ಬಂದವರು.

ಮಿದು ಪಲ್ಲಂಗ ಬಿಟ್ಟು
ಏಳಲಾಗುತ್ತಿಲ್ಲ. ಆದೇಶ ಹೊರಡಿಸುವೆ:
ಅಧಿಕಾರಿಗಳೇ ಕೊಟ್ಟುಬಿಡಿ
ಅವರ ಇಷ್ಟಾರ್ಥಗಳ ಈಡೇರಿಸಿ
ಕಳಿಸಿಬಿಡಿ.
ಏನು? ಕೊಡಲಸಾಧ್ಯವೇ?
ರಾಜಾಜ್ಞೆ, ಹೇಳಿದಷ್ಟನ್ನು ಮಾಡಿ.
ಖಜಾನೆ ಬರಿದಾಗಿದೆಯೇ?
ತೆರಿಗೆ ಹೆಚ್ಚಿಸಿಬಿಡಿ
ಕೊಡದಿದ್ದವರ ಶಿಕ್ಷಿಸಿ

ನಿಂತ ಪತ್ರಕರ್ತರನೆಲ್ಲ
ನೇರ ಒಳ ಬರಹೇಳಿ
ಬರೆದುಕೊಳ್ಳಲಿ ನನ್ನ ಸಾಹಸಗಾಥೆ
ತಪ್ಪು ಕಾಣದ ಹಾಗೆ,
ಸಿದ್ಧವಾಗಿದೆ
"ನನ್ನದೇನಿದ್ದರೂ ಜನಗಳಿಗಾಗಿ"
ಎಂಬ ಒಕ್ಕಣೆ ಮಂತ್ರ.

ಎಷ್ಟೊಂದು ಆರಾಮ! ಎಷ್ಟೊಂದು ಖುಷಿ!
ಹುಜೂರ್ ಅನ್ನುತ್ತಿದ್ದಾರೆ
ಭಲೇ ಅನ್ನುತ್ತಿದ್ದಾರೆ
ನಡೆಯುತ್ತಿದೆ ನನ್ನ ಗುಣಗಾನ
ನಹುಷ ಮಹಾರಾಜ್ ಕೀ
ಭೋ ಪರಾಕ್, ಭೋ ಪರಾಕ್
ಕೇಳುತ್ತಿದೆ ಜಯಘೋಷ
ಪುಳಕಗೊಳಿಸುವ ಹಾಗೆ.

ರಸ್ತೆ ವಿಶಾಲವಾಗಲಿ, ಪಬ್‌ಗಳು ಹೆಚ್ಚಲಿ,
ಗೂಂಡಾಗಿರಿ, ಚಾಕು ಚೈನು ಸಂಸ್ಕೃತಿ
ಸದಾ ಇರಲಿ.
ಋಷಿಗಳ ಹೋಮ, ಜ್ಯೋತಿಷಿಗಳ ಜ್ಯೋತಿಷ
ನಿತ್ಯ ಸಾಗುತ್ತಿರಲಿ ನಿರಾತಂಕ
ನನ್ನ ಕೀರ್ತಿ, ಗೌರವಕ್ಕೆ ಧಕ್ಕೆ ಬಾರದ ಹಾಗೆ.

ಸೇವಕರೇ ಕಾರ್ಯಮಗ್ನರಾಗಿ
ಹಿಂದಿನರಸರು ಬರೆದ ಶಾಸನವಳಿಸಿ

ಬರೆಸಿಬಿಡಿ ನನ್ನ ಹೆಸರು, ಕುಲ,
ಇತಿಹಾಸವೆಲ್ಲ
ಇಲ್ಲದ ಬಿರುದುಗಳನೆಲ್ಲ ದಾಖಲಿಸಿ
ಉಳಿಯಬೇಕು ಆಚಂದ್ರಾರ್ಕ.

ಅಕಸ್ಮಾತ್
ಸಂಜೆ ವಿಹಾರದ ಸಮಯ
ಕಂಡವಳು, ಕಂಡು ಮನ ಸೆಳೆದವಳು
ಅವಳ್ಯಾರು, ಇಂದ್ರನ ಪತ್ನಿಯೇ?
ಇರಲಿ ಬಿಡಿ.

ಈಗ ನಾನೇ ಇಂದ್ರ, ಈಗ ನಾನೇ ಚಂದ್ರ
ನನ್ನ ಪ್ರೇಮಸಂದೇಶ ತಿಳಿಸಿಬಿಡಿ.
ಒಪ್ಪದಿದ್ದರೆ ಒಪ್ಪಿಸಿ
ಒಪ್ಪತಕ್ಕದ್ದೆಂದು ತಿಳಿಸಿ.

ಸೇವಕರೇ, ಏನು ಉತ್ತರ ಬಂತು?
ಒಪ್ಪಿದಳೆ?
ಬರ ಹೇಳಿದಳೇ
ಸಪ್ತ ಋಷಿಗಳು ಹೊತ್ತ ಪಲ್ಲಕ್ಕಿಯಲ್ಲಿ?
ಇದೋ ನಾನು ಸಿದ್ಧ
ಎಂಥ ಷರತ್ತಿಗೂ ಬದ್ಧ.

ಕಾಯಬೇಕೆ? ಬೇಡ, ಬೇಗ ಕಾಲಿಡಬೇಕು
ಶಚಿಯ ಅಂತಃಪುರಕ್ಕೆ
ತರುಣಿಯೇ? ಗೃಹಿಣಿಯೇ? ಸತ್ಕುಲಜಳೆ?
ಅವಳು ಯಾರೇ ಇರಲಿ
ಕಾಲಿಡಬೇಕು ಅವಳ ಅಂತಃಪುರಕ್ಕೆ
ಕಾಡ ಮಣ್ಣವಾಸನೆ ಹೊತ್ತ ಹೆಣ್ಣಿಗಿಂತ
ದಿವ್ಯ ನಗರಿಯ ಗಂಧ
ಸೆಂಟಿನ ಕಮಟುವಾಸನೆ, ಜರಿಸೀರೆ
ಅತ್ಯಾಕರ್ಷಕ ಉಡುಪು
ಅಂಗಾಂಗ ಬಿರಿವಂತೆ ಚೆಲುವು ಹೊರಹಾಕಿ
ಕಣ್ಣಲ್ಲಿಯೇ ಕರೆವ
ಶಚಿಯೇ ಮೇಲಲ್ಲವೇ?

ಸೇವಕರೇ ಬನ್ನಿ
ಪಲ್ಲಕಿ ಸಿದ್ಧಮಾಡಿ
ಅಲಂಕರಿಸಿ
ಸಪ್ತಋಷಿಗಳ ಬೇಗ ಬರಹೇಳಿ
ನಡೆಯಿರಿ.

ಬಂದರೇ, ಒಳಬಂದರೆ?
ಸಮಯ ಹೋಗುತ್ತಿಲ್ಲ
ಸಪ್ತಋಷಿಗಳೇ ಸಿದ್ಧರಾಗಿ
ಪಲ್ಲಕಿಯೊಳಗೆ ಕೂರುತ್ತೇನೆ.
ಎತ್ತಿ ಹೆಗಲಿಗೇರಿಸಿ ಪಲ್ಲಕಿ ಹೊತ್ತು
ನಡೆಯಿರಿ. ಸಾಗಲಿ
ಇನ್ನೊಂದು ಸ್ವರ್ಗಕ್ಕೆ
ನಮ್ಮ ಪ್ರಯಾಣ.

೩

ಮೈ ಮರೆತ ಮಂದಿಯ
ಸುಡದೇ ಬಿಡುವುದೇ
ಸ್ವರ್ಗ ಕಾಮದ ಕಿಚ್ಚು.

ಉರಿದು ಹೋಗಿದ್ದಾರೆ ಅನೇಕ ಮಂದಿ
ಅನಾರೋಗ್ಯ ಹೊತ್ತು ಸುಸ್ತಾಗಿ
ಕ್ಷಣವನೆಣಿಸುತ್ತಿದ್ದಾರೆ. ಕಾಲನ ಕರೆಗೆ
ಕಾಯುತ್ತಿದ್ದಾರೆ.

ಪದವಿಯಹಂಕಾರ, ಬಿಡದ ಭೋಗದ ಬದುಕು
ಶಚಿಯ ಸೇರುವ ಮೊದಲೇ
ಕಾಡಿತ್ತು. ಕೊಟ್ಟಿತ್ತು ಏಟು.
ಎರಗಿತ್ತು ಶಾಪವಾಗಿ. ಅನಾರೋಗ್ಯ
ಹೆಬ್ಬಾವಾಗಿ ಬಿದ್ದೆ ಪ್ರಪಾತಕ್ಕೆ

ಎದ್ದು ನೋಡಿದರೆ
ಸುತ್ತ ಜನರಿಲ್ಲ

ಓಡೋಡಿ ಬರುವ ಸೇವಕರಿಲ್ಲ
ಕುಣಿವ ಅಪ್ಸರೆಯರಿಲ್ಲ.
ಎಲ್ಲ ಕರಗಿದ್ದಾರೆ. ದೂರ ಸರಿದಿದ್ದಾರೆ.
ಹೇಸಿ ನಗುತ್ತ ಮುಖ ತಿರುವಿ ನಡೆದಿದ್ದಾರೆ.

ಒಂಟಿ ನಾನು

ಮತ್ತೆ ಅದೇ ಕಾಡಲ್ಲಿ, ಬೆಟ್ಟ ಗುಡ್ಡಗಳಲ್ಲಿ
ಹೊಳೆ ಬದಿಯಲ್ಲಿ,
ಮರದ ಟೊಂಗೆ ಟೊಂಗೆಗಳಲ್ಲಿ
ಸುತ್ತಾಡೋ ಶಾಪ ಬಂತು.
ಅಯ್ಯೋ! ಶಾಪ ಬಂತು.

೪

ಶಾಪವೇ? ವರವೇ?
ನರಕವೇ? ಸ್ವರ್ಗವೇ?
ಪಡೆದದ್ದು, ಅನುಭವಿಸಿದ್ದು,
ಕೂಡಿದ್ದು, ಮೈಮರೆತದ್ದು
ಸ್ವರ್ಗವೇ?
ಈಗ ಮತ್ತೆ ಶಾಪವ ಪಡೆದು
ಒಂಟಿಯಾಗಿ
ಕಾಡಲ್ಲಿ ಬಿದ್ದು ಒದ್ದಾಡೋ ಬದುಕು
ನರಕವೇ?

ಅದು ಸ್ವರ್ಗವಲ್ಲ
ಇದು ನರಕವಲ್ಲ
ಏರಿದ್ದು ಸ್ವರ್ಗಕ್ಕಲ್ಲ
ಇಳಿದದ್ದು ನರಕಕ್ಕಲ್ಲ

ನೆನಪಾಗುವುದು ಆ ಲೋಕ
ಬಾಲ್ಯದ ಲೋಕ
ಅದೇ ಕಾಡು, ಅದೇ ಬೆಟ್ಟ,
ಅದೇ ಹೊಳೆ, ಅದೇ ಮರ
ಆಡಿದ್ದು, ಕುಣಿದದ್ದು
ಒಂಟಿಯಾಗಿದ್ದರೂ ಸಮೃದ್ಧತೆ ಪಡೆದದ್ದು
ಎಲ್ಲ ನೆನಪಾಗುವುದು

ಬಾಗಿರುವ ಬಳ್ಳಿಗಳು ಚಾಮರವೆ ಅಲ್ಲವೇ?
ಕೆಳಗಿರುವ ಹುಲ್ಲು ರತ್ನಗಂಬಳಿಯಲ್ಲವೇ?
ಆ ಶುದ್ಧ ಜಲ ಅಮೃತವೇ ಅಲ್ಲವೇ?
ಹಕ್ಕಿಗಳ ಕಲರವ ಸಂವಾದವಲ್ಲವೆ?
ಕಾಡ ಚೆಲುವೆಯ ಸಹಜ ನಗೆ
ಸಂತೋಷ ಉಕ್ಕಿಸದೆ?

ಈಗ
ಮತ್ತದೇ ಕಾಡಲ್ಲಿ, ಬೆಟ್ಟಗುಡ್ಡಗಳಲ್ಲಿ
ಗಿಡಮರದ ನೆರಳಲ್ಲಿ, ಹೊಳೆಬದಿಯಲ್ಲಿ
ಹಸಿರು ಹುಲ್ಲಿನ ಮೇಲೆ
ಅಲೆಯುತ್ತೇನೆ, ಅಲೆಯುತ್ತ
ಅಲೆಯುತ್ತ ಜೀವ ಸವೆಸುತ್ತೇನೆ.

ಸಪ್ತಋಷಿಗಳೇ ಧನ್ಯ
ಮತ್ತೆ ಕಳಿಸಿದ್ದೀರಿ
ನಿಜದ ಸ್ವರ್ಗಕ್ಕೆ
ಹೇಗಾದರೂ ಇರಲಿ
ಇಲ್ಲಿರುವುದೇ
ನಿಜದ ಭಾಗ್ಯ.

● ●

ಡಾ. ಸಂತೋಷ ಚೊಕ್ಕಾಡಿ : ೬೯೭/ಎ, ಭೈರವೇಶ್ವರ ಕೃಪಾ, ವಿಶ್ವಮಾನವ ಜೋಡಿ ರಸ್ತೆ, ಸರಸ್ವತಿಪುರಂ,
ಮೈಸೂರು-೫೭೦ ೦೦೯

ಭಗವದ್ಗೀತೆಯಲ್ಲಿ ಯಜ್ಞ ಮತ್ತು ಅದರ ಅರ್ಥ

ಸಿ. ಸೋಮಶೇಖರಯ್ಯ

ಪ್ರಾಚೀನ ಭಾರತದ ಸಾಮಾಜಿಕ ಪದ್ಧತಿಗಳಲ್ಲಿನ ಅತ್ಯಂತ ವಿವಾದಾಸ್ಪದ ವಿಷಯಗಳಲ್ಲಿ, ಮೊದಲನೆಯದು ವರ್ಣಾಶ್ರಮವಾದರೆ, ಎರಡನೆಯದು ಯಜ್ಞಯಾಗಾದಿಗಳು. ಎಲ್ಲಾ ಪ್ರಾಚೀನ ಸಾಹಿತ್ಯ ಪ್ರಕಾರಗಳಲ್ಲಿ, ಇದರ ಪರ ಮತ್ತು ವಿರುದ್ಧವಾದ ದನಿಗಳು, ವರ್ತಮಾನ ಕಾಲದಲ್ಲಿನ ಪ್ರತಿಭಟನೆಗಳ ರೀತಿಯಲ್ಲಿಯೇ ಪ್ರಕಟಗೊಳ್ಳುತ್ತಿದ್ದುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಇಂತಹ ಆಚರಣೆಗಳು ಯಾವ ಕಾಲದಲ್ಲಿ, ಯಾವ ಉದ್ದೇಶಗಳಿಗಾಗಿ, ಯಾವ ಅನಿವಾರ್ಯತೆಗಳಿಂದ ಹುಟ್ಟಿಕೊಂಡವು ಎಂಬುದು ಅಸ್ಪಷ್ಟ. ಈ ವಾದ ವಿವಾದಗಳೇನೇ ಇರಲಿ, ಈ ಆಚರಣೆಗಳು ತೊಡಗಿದ ಕಾರಣಗಳೇನೇ ಇರಲಿ, ಇದರಿಂದ ಮನುಷ್ಯಕುಲದ ಬಹು ದೊಡ್ಡ ಭಾಗವೊಂದು ಅನೇಕ ಶತಮಾನಗಳ ಕಾಲ ನರಕಕುಂಡದಲ್ಲಿ ಬದುಕಿದುದು (ಬದುಕುತ್ತಿರುವುದು) ಮತ್ತು ಅಸಹನೀಯ ನೋವಿನಿಂದ ಮನುಷ್ಯಜನ್ಮವನ್ನೇ ಶಪಿಸುತ್ತಾ ಕಾಲ ತಳ್ಳಬೇಕಾಗಿ ಬಂದುದು ಮಾನವ ಇತಿಹಾಸದ ಮಹಾ ದುರಂತಗಳಲ್ಲೊಂದು. ಈ ಲೇಖನದಲ್ಲಿ ಯಜ್ಞಗಳ ಬಗ್ಗೆ ಭಗವದ್ಗೀತೆಯ ನಿಲುವುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಈ ಯಜ್ಞಗಳೆಂಬವು ವರ್ಣಾಶ್ರಮವನ್ನು ಗಟ್ಟಿಗೊಳಿಸುವ ಸಾಧನಗಳಾಗಿದ್ದವು. ಯಜ್ಞಗಳ ಪೌರೋಹಿತ್ಯವು ಬುದ್ಧಿಜೀವಿವರ್ಗಗಳು ಎನಿಸಿಕೊಂಡವರ ಅಧಿಕಾರಕ್ಕೆ ಒಳಪಟ್ಟಿದ್ದರೆ, ಅವುಗಳ ರಕ್ಷಣೆ ಮತ್ತು ಆರ್ಥಿಕ ವ್ಯವಸ್ಥೆಯ ಜವಾಬ್ದಾರಿ ಆಳುವ ವರ್ಗದವರದಾಗಿತ್ತು. ಜನಸಾಮಾನ್ಯರು ಇಲ್ಲಿ ಕೇವಲ ಪ್ರೇಕ್ಷಕರು ಅಥವಾ ಅಲಕ್ಷಿತರು ಮಾತ್ರವಾಗಿದ್ದರು. ಅಷ್ಟೇ ಅಲ್ಲ, ಯಜ್ಞಾಚರಣೆಯಿಂದ ಸಿಗುತ್ತವೆಂದು ನಂಬಿಸಲಾಗಿದ್ದ ಫಲಗಳು ಪ್ರಶ್ನಾರ್ಹವಾಗಿದ್ದವು. ಮತ್ತು ಕೆಲವು ಹಾಸ್ಯಾಸ್ಪದವೂ ಸಹ ಆಗಿದ್ದವು. ಆದರೆ ಕ್ಷತ್ರಿಯರಿಗೆ ತಮ್ಮ ಬಲವನ್ನು ತೋರ್ಪಡಿಸಲು ತಮ್ಮ ಸಂಪತ್ತನ್ನು ಪ್ರದರ್ಶಿಸಲು ತಮ್ಮ ಪ್ರಭುತ್ವವನ್ನು ಇತರರ ಮೇಲೆ ಹೇರಲು ಈ ಯಜ್ಞಗಳು ಅನುಕೂಲಕರವಾಗಿದ್ದವು.

ಅಂದಿನ ಆಳುವ ವರ್ಗದವರಿಗೆ, ಬುದ್ಧಿಜೀವಿ ವರ್ಗದವರು ಯಜ್ಞಗಳ ಆಚರಣೆಯಿಂದ, ಅಲೌಕಿಕ ಭೋಗ-ಭಾಗ್ಯಗಳೂ ಪದವಿಗಳೂ ದೊರೆಯುತ್ತವೆ ಎಂಬ ಆಮಿಷಗಳನ್ನಂತೂ ಒಡ್ಡಿದ್ದರು. ನೂರು ಅಶ್ವಮೇಧ ಯಾಗಗಳನ್ನು ಮಾಡಿದವರಿಗೆ ದೇವೇಂದ್ರನ ಪಟ್ಟ ದೊರಕುತ್ತದೆ ಎಂಬುದು ಒಂದು ದೊಡ್ಡ ಆಮಿಷ.

ಯಾವನಾದರೂ ರಾಜ ಇಂಥ ಪ್ರಯತ್ನಗಳಿಗೆ ತೊಡಗಿದರೆ, ತನ್ನ ಸ್ಥಾನಕ್ಕೆ ಪೈಪೋಟಿ ಎದುರಾಗುತ್ತಿದ್ದುದನ್ನು ಕಂಡು, ಕಂಗೆಡುತ್ತಿದ್ದ ಹಾಲಿ ಇರುವ ದೇವೇಂದ್ರ ಈ ಯಾಗಗಳನ್ನು ಭಗ್ನ ಮಾಡಲು ಇನ್ನಿಲ್ಲದಷ್ಟು ಪ್ರಯತ್ನಪಡುತ್ತಿದ್ದ ಅನೇಕ ಕಥೆಗಳೇ ಇವೆ. ದೇವೇಂದ್ರನಾದರೇನು? ಯಾವೇಂದ್ರನಾದರೇನು? ಇರುವ ಪಟ್ಟ ಬಿಟ್ಟುಕೊಡಲು ಯಾರಿಗೆ ತಾನೆ ಇಷ್ಟ?

ಸ್ವರ್ಗವನ್ನು ಕುಮಾರವ್ಯಾಸ ತನ್ನ ಅನೇಕ ಪದ್ಯಗಳಲ್ಲಿ 'ನೂರು ಯಜ್ಞದ ಮೇಹುನಾಡು' ಎಂದೇ ಉದ್ಗರಿಸುತ್ತಾನೆ. ದುರ್ಬಲ ಮನಸ್ಕರೂ ಭೋಗಜೀವಿಗಳೂ ಆದ ರಾಜರುಗಳು ಅಲೌಕಿಕ ಲೋಕದ ಭೋಗಭಾಗ್ಯಗಳು ಮತ್ತು ಸುಂದರಿಯರಿಗಾಗಿ ಈ ಲೋಕದಲ್ಲಿ ಪಡುತ್ತಿದ್ದ ಶ್ರಮ ಅದಕ್ಕಾಗಿ ಆಚರಿಸುತ್ತಿದ್ದ ಯಜ್ಞಯಾಗಾದಿಗಳು ಪುರಾಣಗಳಲ್ಲಿ ಹೇರಳವಾಗಿ ಲಭ್ಯ.

ವೇದಗಳ ಕರ್ಮಕಾಂಡಗಳಲ್ಲಿ ಉಕ್ತವಾದ ಯಜ್ಞಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ ಭಗವದ್ಗೀತೆಯು ಯಜ್ಞ ಎಂಬ ಶಬ್ದಕ್ಕೆ ಅರ್ಥವನ್ನು ಬಹು ಆಯಾಮಗಳಿಗೆ ಒಳಪಡಿಸಿ, ಅತ್ಯಂತ ಉದಾತ್ತವಾದ ಮತ್ತು ವಿಶಾಲವಾದ ಭಾವವ್ಯಾಪ್ತಿಯನ್ನು ಈ ಪದಕ್ಕೆ ಕೊಟ್ಟುದಲ್ಲದೆ, ಅದುವರೆಗೆ ನಂಬಿಕೊಂಡು ಬಂದಿದ್ದ ಮೂಢನಂಬಿಕೆಗಳಿಗೆ ಬಲವಾದ ಪೆಟ್ಟನ್ನು ಕೊಟ್ಟಿತು. ವೇದಗಳ ಕರ್ಮಕಾಂಡವನ್ನು ಖಚಿತ ಶಬ್ದಗಳಲ್ಲಿ ತಿರಸ್ಕರಿಸುವ ಗೀತೆ ಇದು :

ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।
ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ॥

ಅಧ್ಯಾಯ : ೨, ಪದ್ಯ ೪೫

'ವೇದಗಳು, ಕೇವಲ ತ್ರಿಗುಣಾತ್ಮಕ ವಿಷಯವನ್ನು ಬೋಧಿಸುವಂತಹವು, ನೀನು ತ್ರಿಗುಣಾತೀತನೂ, ದ್ವಂದ್ವರಹಿತನೂ, ಯೋಗಕ್ಷೇಮರಹಿತನೂ (ಆಸೆಗಳನ್ನು ತೊರೆದವನು) ಸತ್ವಪ್ರಧಾನನೂ, ಆತ್ಮವಂತನೂ ಆಗು' ಎಂದು ಹೇಳುವುದಲ್ಲದೆ,

ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।
ತಾವಾನ್ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥ ೨.೪೬

ಎಲ್ಲ ಕಡೆಗಳಲ್ಲಿಯೂ ನೀರು ತುಂಬಿರುವಾಗ ಒಂದು ಭಾವಿಯ ಪ್ರಯೋಜನವು ಎಷ್ಟೋ, ಅಷ್ಟೇ ಜ್ಞಾನಿಗೆ ವೇದಗಳ ಪ್ರಯೋಜನ ಎಂದು ಸ್ಪಷ್ಟಪಡಿಸುತ್ತಾ 'ಅವಿಪಶ್ಚಿತಃ' ಎಂದರೆ, ಅವಿವೇಕಿಗಳು ಮಾತ್ರವೇ ಮರುಳು ಮಾಡುವ ಮಾತುಗಳಿಗೆ ಸೋತವರಾಗಿ, ಭೋಗೈಶ್ವರ್ಯಗಳ ಬೆನ್ನು ಬಿದ್ದು ನಿಶ್ಚಯ ಬುದ್ಧಿಯನ್ನು ಕಳೆದುಕೊಳ್ಳುವರು ಎಂದು ತಪ್ಪು ಮಾರ್ಗಗಳ ವಿರುದ್ಧ ಗೀತೆಯು ಎಚ್ಚರಿಸಿರುವುದು, ಭಗವದ್ಗೀತೆಯ ಈ ಮುಂದಿನ ಶ್ಲೋಕಗಳನ್ನು ಗಮನಿಸಿ :

ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।
ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥
ಕಾಮಾತ್ಮಾನಃ ಸ್ವರ್ಗಪರಾ ಜನ್ಮಕರ್ಮಫಲಪ್ರದಾಮ್ ।
ಕ್ರಿಯಾವಿಶೇಷಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ ॥
ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಮ್ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥ ೨. ೪೨, ೪೩, ೪೪

ಯಜ್ಞದ ಬಾಹ್ಯ ಮೂಢಾಚರಣೆಗಳನ್ನು ಈ ರೀತಿಯಾಗಿ ನಿರಾಕರಿಸಿದ ಗೀತೆ, ಯಜ್ಞದ ಆಂತರಂಗಿಕ ಅರ್ಥವನ್ನು ಸೊಗಸಾದ ಉಪಮೆಗಳ ಮೂಲಕ ಮನದಟ್ಟು ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ.

ಯಜ್ಞವೆಂದರೆ ಸಾಮಾನ್ಯತೆಯ ಕಡೆಯಿಂದ ಅಸಾಮಾನ್ಯತೆಯ ಕಡೆಗೆ ನಡೆಯುವುದು. ಸಾಮಾನ್ಯ ವಸ್ತುಗಳಿಂದ ಅಸಾಮಾನ್ಯ ಸೃಷ್ಟಿಯನ್ನು ವಿರಚಿಸುವುದು. ಈ ದೃಷ್ಟಿಯಿಂದ ನೋಡಿದಾಗ ಸಕಲ ವಿಶ್ವವ್ಯಾಪಾರಗಳೂ ಸಹ ಯಜ್ಞಮಯವಾಗಿ ಗೋಚರಿಸತೊಡಗುವುವು. ನಮ್ಮ ಸುತ್ತಣ ಪ್ರಕೃತಿಯಲ್ಲಿ ಎಡೆಬಿಡದೆ ಯಜ್ಞ ತತ್ವವು ಕ್ರಿಯಾಶೀಲವಾಗಿರುವುದನ್ನು ಗಮನಿಸಬಹುದು.

ಈ ಪೃಥ್ವಿಯ ಮೇಲಣ ಸಮಸ್ತ ಜೀವರಾಶಿಗಳೂ ಆಹಾರವನ್ನು ಸೇವಿಸುತ್ತವೆ. ಅವುಗಳ ಜಠರದಲ್ಲಿರುವ ವೈಶ್ವಾನರ ಅಗ್ನಿಯು ಅನ್ನವನ್ನು ಪಚನ ಮಾಡಿ ಪ್ರಾಣವನ್ನಾಗಿ ಪರಿವರ್ತಿಸುತ್ತದೆ. ಪ್ರಾಣವು ದಹಿಸಿ ಮನಸ್ಸಾಗಿ ಪರಿವರ್ತಿತವಾಗುತ್ತದೆ. ಇದು ಸಕಲ ಪ್ರಾಣಿಗಳಲ್ಲಿ ನಿರಂತರವಾಗಿ ನಡೆಯುವ ಯಜ್ಞ ಕ್ರಿಯೆ. ನಮಗೆ ಆಹಾರವನ್ನು ಒದಗಿಸುವ ಸಸ್ಯ ಸಂಕುಲಗಳು ಮಣ್ಣು, ನೀರು, ಗೊಬ್ಬರ ಮತ್ತು ಗಾಳಿ ಇತ್ಯಾದಿಗಳನ್ನು ಸ್ವೀಕರಿಸಿ ಸೌರಾಗ್ನಿಯ ಸಹಾಯದಿಂದ ನಯನ ಮನೋಹರವಾದ ಸೌಂದರ್ಯಭರಿತ ಪತ್ರ ಪುಷ್ಪ ಸಮುದಾಯವನ್ನು; ರಸಭರಿತವಾದ ಫಲರಾಶಿಯನ್ನು ಜೀವಸಂಕುಲದ ಉಳಿವಿಗೆ ಆಧಾರವಾದ ಕಾಳುಕಡಿಗಳನ್ನು ತಯಾರಿಸುತ್ತವೆ, ಈ ಭೂಮಂಡಲದ ಜೀವ ಪ್ರಪಂಚದ ಯಜ್ಞಚಕ್ರವು ನಿರಂತರವಾಗಿ ಸುತ್ತಲು ಸಹಾಯಕವಾಗುವಂತೆ ಸೂರ್ಯನು ಸಮುದ್ರದ ನೀರನ್ನು ಸೇದಿ ಮೋಡಗಳಾಗಿಸಿ ಮಳೆಯನ್ನು ಸುರಿಸುವನು. ಹೀಗೆ ಪ್ರಾಕೃತಿಕ ಅಗಾಧ ಯಜ್ಞಕರ್ಮವು ತನ್ನ ನಿಯತಿಗನುಗುಣವಾಗಿ ಕರ್ತವ್ಯಶೀಲವಾಗಿರುವುದು.

ಗೀತೆಯ ಈ ಮುಂದಿನ ಶ್ಲೋಕಗಳು ಇದನ್ನೇ ಪ್ರತಿಪಾದಿಸುತ್ತವೆ :

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥ ೧೫.೧೪

ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ ।
ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥ ೯.೧೯

ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।
ಕರ್ಮಜಾನ್ವಿದ್ಧಿ ತಾನ್ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ ॥ ೪.೩೨

ಈ ರೀತಿಯಾಗಿ ಆಧಿಭೌತಿಕವಾಗಿ ನಡೆಯುತ್ತಿರುವ ಯಜ್ಞವು ಮಾನಸಿಕವಾಗಿ, ಆಧ್ಯಾತ್ಮಿಕವಾಗಿ ಜರುಗುವ ಪರಿಯನ್ನು ಗೀತಾವಾಕ್ಯಗಳಲ್ಲಿ ಗಮನಿಸೋಣ :

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥
ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।
ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥
ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥
ಯದೃಚ್ಛಾಲಾಭ ಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥ ೪. ೧೯, ೨೦, ೨೧, ೨೨

ಯಾವನ ಕರ್ಮಗಳು, ಕಾಮಸಂಕಲ್ಪ ವರ್ಜಿತವಾಗಿ ಜ್ಞಾನವೆಂಬ ಆಗ್ನಿಯಿಂದ ಸುಡಲ್ಪಟ್ಟಿರುವುವೋ ಅವನೇ ಪಂಡಿತನು; ಕರ್ಮಫಲಾಸಕ್ತಿ ಇಲ್ಲದೆ ನಿರಾಶ್ರಯನೂ, ನಿತ್ಯತೃಪ್ತನೂ ಆದವನು ಕರ್ಮ ಮಾಡುತ್ತಿದ್ದರೂ ಬದ್ಧನಲ್ಲ; ಆಸೆಯನ್ನು ತೊರೆದು, ವಿಷಯಪಾಶಗಳನ್ನು ಹರಿದು ಕೇವಲ ಶರೀರ ರಕ್ಷಣೆಗಾಗಿ ಮಾಡುತ್ತಿರುವ ಕರ್ಮಗಳು ಅನಿಷ್ಟವನ್ನು ಉಂಟು ಮಾಡುವುದಿಲ್ಲ; ತಾನಾಗಿ ಬಂದುದರಲ್ಲಿ ತೃಪ್ತಿ, ದ್ವಂದ್ವರಹಿತತೆ, ಮಾತ್ಸರ್ಯವಿಲ್ಲದಿರುವಿಕೆ, ಸಿದ್ಧಿ ಅಸಿದ್ಧಿಗಳನ್ನು ಸಮವೆಂದು ಭಾವಿಸುವುದು ಈ ರೀತಿ ಇರುವವನು ಕರ್ಮ ಮಾಡಿದರೂ ಬದ್ಧನಲ್ಲ. ಹೀಗೆ ಮಾನಸಿಕ ಕಿಲ್ಬಿಷಗಳನ್ನು ಕಳೆದು ಆತ್ಮವಂತನಾಗುವ ಪ್ರಕ್ರಿಯೆಗಳೇ ಮಾನಸಿಕ ಯಜ್ಞದ ಲಕ್ಷಣಗಳು.

ಯಜ್ಞತತ್ವದ ಪರಮಾರ್ಥವನ್ನು ಈ ಶ್ಲೋಕದ ಮೂಲಕ ಭಗವದ್ಗೀತೆಯು ವಿಶದೀಕರಿಸಿರುವುದು ಹೀಗೆ :

ಬ್ರಹ್ಮಾರ್ಪಣಂ ಬ್ರಹ್ಮ ಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥ ೪.೨೪

ಬ್ರಹ್ಮಾರ್ಪಣ ಬುದ್ಧಿಯಿಂದ ಬ್ರಹ್ಮವೆಂಬ ಅಗ್ನಿಯಲ್ಲಿ ಬ್ರಹ್ಮವೆಂಬ ಹವಿಸ್ಸನ್ನು ಬ್ರಹ್ಮವೆಂಬ ಹೋಮದಲ್ಲಿಯೇ ಹೋಮ ಮಾಡಿ ಬ್ರಹ್ಮವೆಂಬ ಕರ್ಮದಲ್ಲಿ ಬ್ರಹ್ಮನಾಗುವವನೇ ಶ್ರೇಷ್ಠ ಪುರುಷನು.

ಈ ವಿವರಣೆಗಳು ಹೀಗೆಯೇ ಮುಂದುವರಿದು ಅತ್ಯಂತ ಸುಂದರ ದೃಷ್ಟಾಂತ, ಉಪಮೆಗಳ ಮುಖಾಂತರ ಮನುಷ್ಯನು ನಡೆಸಬೇಕಾಗಿರುವ ಮಾನಸಿಕ ಯಜ್ಞದ ಅನೇಕ ಮುಖಗಳನ್ನು ವಿಶದೀಕರಿಸುತ್ತ ನಮ್ಮನ್ನು ಜ್ಞಾನದ ಬೆಳಕಿನೆಡೆಗೆ ಕರೆದೊಯ್ಯುವುದೇ ಗೀತೆಯ ಉದ್ದೇಶ. ಯಾವ ಯಾವ ರೀತಿಯ ಯಜ್ಞಗಳು ಮನುಷ್ಯನ ಮನಸ್ಸನ್ನು ಮತ್ತು ಪ್ರಾಣಗಳ ಮಂಡಲಗಳಲ್ಲಿ ನಡೆದಿರುವುದೆಂಬುದನ್ನು ಭಗವದ್ಗೀತೆ ವಿವರಿಸುವ ಪರಿಯನ್ನು ನೋಡಿ :

ಶ್ರೋತ್ರಾದಿ ಇಂದ್ರಿಯಗಳನ್ನು ಸಂಯಮವೆಂಬ ಆಗ್ನಿಯಲ್ಲಿ ಹೋಮ ಮಾಡುವರು, ಶಬ್ದಾದಿ ವಿಷಯಗಳನ್ನು ಇಂದ್ರಿಯಾಗ್ನಿಗಳಲ್ಲಿ ಹೋಮ ಮಾಡುವರು. ಮತ್ತೆ ಕೆಲವರು ಸಕಲೇಂದ್ರಿಯಗಳನ್ನು; ಪ್ರಾಣಕರ್ಮಗಳನ್ನು ಜ್ಞಾನದಿಂದ ಆತ್ಮಸಂಯಮವೆಂಬ ಯೋಗಾಗ್ನಿಯಲ್ಲಿ ಹೋಮ ಮಾಡುವರು:

೧. ದ್ರವ್ಯ ಯಜ್ಞ : ನ್ಯಾಯಮಾರ್ಗದಿಂದ ಅರ್ಜಿಸಿದ ಧನವನ್ನು ಲೋಕಸಂಗ್ರಹಕ್ಕಾಗಿ ವ್ಯಯಿಸುವುದು. ಅರ್ಹರಾದ ಆದರೆ ನಿರ್ಗತಿಕರಾದ ವಿದ್ಯಾರ್ಥಿಗಳಿಗೆ ಅವರ ವಿದ್ಯಾರ್ಜನೆಗೆ ಸಹಾಯ ಮಾಡುವುದು, ಅವರ ಅನ್ನವಸನಾದಿಗಳಿಗೆ ಏರ್ಪಾಟು ಮಾಡುವುದು, ಅಶಕ್ತರಿಗೆ ನೆರವಾಗುವುದು, ತಮ್ಮ ಧನದಿಂದ ಸಮಾಜದ ಉನ್ನತಿಗೆ ಶ್ರಮಿಸುವ ಎಲ್ಲ ಕಾರ್ಯಗಳೂ ಸಹ ದ್ರವ್ಯಯಜ್ಞವೇ.
೨. ತಪೋಯಜ್ಞ : ಆತ್ಮಕಲ್ಯಾಣಕ್ಕಾಗಿ ಕೈಗೊಳ್ಳುವ ತಪಸ್ಸು ಮತ್ತು ಧ್ಯಾನಗಳು.
೩. ಯೋಗಯಜ್ಞ : ಚಿತ್ತವೃತ್ತಿ ನಿರೋಧಕ್ಕಾಗಿ ಮಾಡುವ ಪ್ರಯತ್ನಗಳು.
೪. ಸ್ವಾಧ್ಯಾಯ ಜ್ಞಾನಯಜ್ಞ : ಅಧ್ಯಯನವು ಮತ್ತು ಜ್ಞಾನಪ್ರಸಾರವೂ ಒಂದು ಯಜ್ಞ.

ಈ ರೀತಿಯ ಯಜ್ಞಗಳನ್ನು ಧೃಡವ್ರತರಾದವರು ಮಾಡುವರು.

ಪುನಃ ಕೆಲವರು ಪ್ರಾಣವನ್ನು ಅಪಾನದಲ್ಲಿ, ಅಪಾನದಲ್ಲಿ ಪ್ರಾಣವನ್ನು (ಪ್ರಾಣಾಯಾಮದ ಮುಖಾಂತರ) ಹೋಮಿಸಿ ಪ್ರಾಣಾಪಾನಗತಿಯನ್ನು ನಿರೋಧಿಸಿ ಕುಂಭಕವೆಂಬ ಯಜ್ಞವನ್ನು ಮಾಡುವರು.

ಮಿತಾಹಾರ ವಿಹಾರ ಉಳ್ಳವರಾಗಿ ಯಜ್ಞ ತತ್ವವನ್ನು ಅರಿತು ಬ್ರಹ್ಮಮುಖದಲ್ಲಿ ನಡೆಯುತ್ತಿರುವ ಯಜ್ಞಕರ್ಮಗಳನ್ನು ಸಮೀಕರಿಸಿಕೊಂಡು, ಈ ಲೋಕದ ಯಜ್ಞ ಕರ್ಮಗಳನ್ನು ಮುಂದುವರಿಸಿಕೊಂಡು ಹೋಗುವವರು ಬ್ರಹ್ಮನನ್ನೇ ಹೊಂದುವರು. ಸಮಸ್ತ ಯಜ್ಞಗಳೂ ಜ್ಞಾನಯಜ್ಞದಲ್ಲಿಯೇ ಪರಿಸಮಾಪ್ತಿ ಹೊಂದುವುವು.

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।
ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿನ್ದತಿ ॥ ೪.೩೮

ಅಂತಿಮವಾಗಿ ಭಗವದ್ಗೀತೆಯ ಸಂದೇಶ ಯಜ್ಞದ ಕುರಿತು ಹೀಗೆ :

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇ ವಚ ।
ನ ತು ಮಾಮಭಿಜಾನನ್ತಿ ತತ್ತ್ವೇನಾತಶ್ಚ್ಯವನ್ತಿ ತೇ ॥ ೯.೨೪

ಸರ್ವ ಯಜ್ಞಗಳ ಭೋಕ್ತೃವೂ ಮತ್ತು ಪ್ರಭುವೂ ನಾನೇ, ಆದರೆ ಯಥಾರ್ಥವಾಗಿ ತಿಳಿಯದವರಿಗೆ ತತ್ತ್ವವು ಅರಿವಿಗೆ ಬಾರದು.

● ●

ಸಿ. ಸೋಮಶೇಖರಯ್ಯ : ಸೊಸೈಟಿ ಹಿಂಭಾಗ, ಚೋಳಚಗುಡ್ಡ, ಚಿತ್ರದುರ್ಗ - ೫೭೭ ೫೦೧

ತುಂಟ ಮಂಗನ ಕತೆಯೂ ಡಾರ್ವಿನ್ನನ ವಿಕಾಸವಾದವೂ

ಚಂದ್ರಗೌಡ ಕುಲಕರ್ಣಿ

ಒಂದು ತುಂಟ ಮಂಗ ಇತ್ತು. ಅಚೀಕ ಇಚೀಕ ಜಿಗಿದಾಡುವಾಗ ಅದರ ಬಾಲದಾಗ ಮುಳ್ಳು ಮುರಿತು. ಹಜಾಮನ ಹತ್ತಿರ ಹೋಗಿ "ನನ್ನ ಬಾಲದನ್ನ ಮುಳ್ಳ ತಗಿ" ಅಂತು. ಅವ್ನ ತಗಿಯಾಕ ಹೋದ. ಪಕ್ಕನ ಬಾಲ ಮುರದು ತುಂಡಾತು. ಆಗ ಮಂಗ ಹಜಾಮಗ "ನನ್ನ ಬಾಲ ಕೊಡತಿಯೋ ಏನ್ ನಿನ್ನ ಕತ್ತಿ ಕೊಡತಿಯೋ" ಅಂತು. ಹಜಾಮ ಕತ್ತಿ ಕೊಟ್ಟ.

ಹೀಂಗ ಮುಂದ ಹೋತು. ಅಲ್ಲಿ ಕುಂಬಾರ ಗಡಿಗಿ ಮಾಡಿ ಕೈಲೆ ಬಡಿದು ತೀಡಾಕ ಹತ್ತಿದ್ದ. ಅವ್ನನ್ನ "ಕೈಲೆ ಯಾಕ ತೀಡತಿ, ನನ್ನ ಕತ್ತಿ ತಗೋ" ಅಂತು. ಪಾಪ ಕುಂಬಾರ ಕತ್ತಿ ತಗೊಂಡು ತೀಡಾಕ ಹೋದ. ಪಟ್...ನ ಕತ್ತಿ ಮುರದ ಹೋತು. ಮಂಗ "ನನ್ನ ಕತ್ತಿ ಕೊಡತಿಯೋ ಏನ್ ನಿನ್ನ ಗಡಿಗಿ ಕೊಡತಿಯೋ" ಅಂತು. ಕುಂಬಾರ ಗಡಿಗಿ ಕೊಟ್ಟ.

ಗಡಿಗಿ ತಗೊಂಡು ಮುಂದ ಹೋತು. ಅಲ್ಲಿ ಮುದುಕ ಸೌತೆ ಬಳ್ಳಿಗೆ ಬಗಸೀಲೆ ನೀರ ಹಾಕತಿದ್ದ. "ಯಜ್ಜ, ಯಜ್ಜ, ಬಗಸೀಲೆ ಯಾಕ ನೀರ ಹಾಕತಿ. ಈ ಗಡಿಗಿ ತಗೋ" ಅಂತು. ಅಜ್ಜ ಗಡಿಗಿ ತಗೊಂಡು ಸೌತೆ ಬಳ್ಳಿಗೆ ನೀರ ಹಾಕಾಕ ಹತ್ತಿದ. ನಾಕ ಸಲ ಹಾಕೂವರಾಗ ಗಡಿಗಿ ಒಡದು ಹೋತು. ಮಂಗ, "ನನ್ನ ಗಡಿಗಿ ಕೊಡತಿಯೋ ಏನ್ ನಿನ್ನ ಸೌತೆಕಾಯಿ ಕೊಡತಿಯೋ" ಅಂತು. ಮುದುಕ ಎಳಿ ಎಳಿ ಸೌತೆಕಾಯಿ ಕೊಟ್ಟ.

ಅಲ್ಲೇ ಮುಂದಕ ಹೋಗುದರಾಗ, ದನ ಕಾಯೋ ಹುಡುಗರು, ಸಿಂಬಳ, ಒಣಖಾರ ಹಚಗೊಂಡ ತಂಗಳ ರೊಟ್ಟಿ ತಿನ್ನಾಕ ಹತ್ತಿದ್ದರು. "ಒಣ ರೊಟ್ಟಿ ಯಾಕ ತಿಂತೀರಿ, ಈ ಸೌತೆಕಾಯಿ ಕಡಕೊಂಡ ತಿನ್ನರಿ" ಅಂತ ಮಂಗ ಸೌತೆಕಾಯಿ ಕೊಟ್ಟಿತು. ಹುಡುಗೂರು ರೊಟ್ಟಿ ಕೂಡ ಸೌತೆಕಾಯಿ ತಿಂದವು. ಆಗ ಮಂಗ, "ನನ್ನ ಸೌತೆಕಾಯಿ ಕೊಡತಿರೋ ಏನ್ ನಿಮ್ಮ ಎತ್ತ ಕೊಡತಿರೋ" ಅಂತು. ಹುಡುಗರು "ಎಂಟ ಎತ್ತಿನ್ಯಾಗ ಒಂದ ಕುಂಟ ಕಂಟಲೆತ್ತ ಐತಿ ತಗೋ" ಅಂತ ಕೊಟ್ಟರು.

ಕುಂಟ ಎತ್ತ ಹತಗೊಂಡ ಮುಂದ ಹೊಂಟಿತ್ತು. ಅಲ್ಲಿ ಒಬ್ಬಾವ್ನ ಡೊಂಬರಾಟದವ ಅಚೀಕ-ಇಚೀಕ ತನ್ನ ಗಂಟ ಹೊತಗೊಂಡ ಹೊಂಟಿದ್ವ. ಅವ್ನನ್ನ ನೋಡಿ ಮಂಗ "ಹೆಗಲ ಮ್ಯಾಲ ಹೊತಗೊಂಡ ಹೊಂಟಿ, ನನ್ನ ಎತ್ತ ತಗೋ" ಅಂತು. ಡೊಂಬರಾಟದಾವ್ನ ಎತ್ತ ಮ್ಯಾಲ ಹತ್ತಿ ನಾಕ ಹೆಜ್ಜಿ ಹೋಗಿದ್ದಿಲ್ಲ, ಎತ್ತ ಬಿದ್ದ ಸತ್ತ ಹೋತು. ಆಗ ಮಂಗ "ನನ್ನ ಎತ್ತ ಕೊಡತಿಯೋ ಏನ್ ನಿನ್ನ ಡೋಲ ಕೊಡತಿಯೋ" ಅಂತು. ಡೊಂಬರವ್ನ ಡೋಲ ಕೊಟ್ಟ.

ಡೋಲ ತಗೊಂಡ ಗಿಡದಾಗ ಹತ್ತಿ ಕುಂತ ಮಂಗ–

ಬಾಲ ಹೋಗಿ ಕತ್ತಿ ಬಂತು ಡುಂ...ಡುಮಕ್ಕ
ಕತ್ತಿ ಹೋಗಿ ಗಡಿಗಿ ಬಂತು ಡುಂ...ಡುಮಕ್ಕ
ಗಡಿಗಿ ಹೋಗಿ ಸೌತೆಕಾಯಿ ಬಂದ್ವು ಡುಂ...ಡುಮಕ್ಕ
ಸೌತಕಾಯಿ ಹೋಗಿ ಎತ್ತು ಬಂತು ಡುಂ...ಡುಮಕ್ಕ
ಎತ್ತು ಹೋಗಿ ಡೋಲ ಬಂತು ಡುಂ...ಡುಮಕ್ಕ

ಎಂದು ಹಾಡಿ ನೀರಾಗ ಬಿದ್ದು ಸತ್ತು ಹೋತು.

* * *

ಬಾಲ್ಯದಲ್ಲಿ ನಾವೆಲ್ಲ ಕೇಳಿದ, ಕೇಳಿದ ಅನಂತರ ಮತ್ತೊಬ್ಬರಿಗೆ ಹೇಳದೆ ಇರಲಾರದ ಕತೆ ಇದು. ತುಂಟತನದ ಮಂಗ ಮಕ್ಕಳನ್ನು ಅಷ್ಟೇ ಅಲ್ಲ ದೊಡ್ಡವರನ್ನೂ ಅಯಸ್ಕಾಂತದಂತೆ ಸೆಳೆಯುವ ಶಕ್ತಿಯುಳ್ಳದ್ದು. ಒಂದು ಸಂಗತಿಯಿಂದ ಮತ್ತೊಂದು ಸಂಗತಿಗೆ ಮಿಂಚಿನ ಸಂಚಲನ ಮಾಡುವ ಈ ಕತೆಗೆ ವಿಶಿಷ್ಟ ಶಕ್ತಿ ಇದೆ. ಪ್ರತಿ ಹಂತದಲ್ಲೂ ಮಂಗ ಏನು ಮಾಡೀತು? ಎಂತಹ ಸಮಸ್ಯೆ ಒಡ್ಡೀತು? ಯಾವ ಪೇಚಿನಲ್ಲಿ ಸಿಗಸೀತು? –ಎಂದು ತುದಿಗಾಲಲ್ಲಿ ನಿಂತು ನಿರೀಕ್ಷಿಸುವಂತೆ ಪ್ರೇರೇಪಿಸುತ್ತದೆ. ಒಂದು ಕ್ಷಣ ಮೈಮರೆತರೂ ಕತೆಯ ಕೊಂಡಿ ಕಳಚಿಕೊಂಡೀತು ಎಂದು ಜಾಗರಗೊಳಿಸುತ್ತದೆ. ನಮ್ಮನ್ನು ಕತೆಯೊಳಗಿನ ಪಾತ್ರವೇ ಆಗುವಷ್ಟರ ಮಟ್ಟಿಗೆ ತನ್ಮಯಗೊಳಿಸುತ್ತದೆ.

ಈ ಕತೆಯೊಳಗಿನ ಎಲ್ಲ ಘಟಕಗಳಿಗೆ ಮತ್ತೆ ಬೇರೆ ಏನಾದರೂ ಅರ್ಥವಿದೆಯೆ? ಇದ್ದರೆ ಅದು ಎಂತಹದು? ಈ ಪ್ರಶ್ನೆಗಳು ನನ್ನನ್ನು ಕಾಡಿವೆ. ಕುತೂಹಲಿಯನ್ನಾಗಿ ಮಾಡಿವೆ. ಬೇರೆ ಬೇರೆ ಜನಪದ ಕತೆ, ಶಿಶುಪ್ರಾಸ, ಆಟಗಳಿಗೆ ಇರುವ ಜನಪದರ ಅರ್ಥವಂತಿಕೆಯನ್ನು ಇಲ್ಲಿಯೂ ಅನ್ವಯ ಮಾಡಿ ನೋಡಿದಾಗ ಆಶ್ಚರ್ಯ ಕಾದಿತ್ತು! ನನಗಾದ ಅಶ್ಚರ್ಯವನ್ನೇ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಮಂಗ ಮಾನವನಾಗಿ ರೂಪ ತಾಳುವಾಗಿನ ಮೊದಲ ಹಂತವೇ ಬಾಲವನ್ನು ಕಳೆದುಕೊಳ್ಳುವ ಕ್ರಿಯೆ. ಡಾರ್ವಿನ್ನನ ವಿಕಾಸವಾದದ ಅರಿವು ನಮ್ಮ ಜನಪದರಿಗಿತ್ತೆ? ತನ್ನೊಳಗಿನ ವಿಕಸಿತ ಅರಿವೇ ಹಜಾಮನ ಸ್ವರೂಪ. ಹಜಾಮ ಕತ್ತಿಯಿಂದ ಸಂಸ್ಕಾರ ನೀಡಿ ಮಂಗನನ್ನು ಮಾನವನನ್ನಾಗಿಸಲು ಪ್ರಯತ್ನಿಸುತ್ತಾನೆ. ಹೀಗೆ ಹಜಾಮನಿಂದ ಪ್ರೇರೇಪಿತವಾದ ಮಂಗ ಒಂದು ಮನೋಸ್ಥಿತಿಯಲ್ಲಿ ಮಾನವನಾಗಲು ಒಪ್ಪಿದರೂ ಇನ್ನೊಂದು ರೀತಿಯಲ್ಲಿ ಒಪ್ಪಲು ಸಿದ್ಧವಿರುವುದಿಲ್ಲ. ಆದ್ದರಿಂದಲೇ ಮಂಗತನವನ್ನು ಮುಂದುವರಿಸುತ್ತದೆ. ಮಂಗನ ಈ ವೈರುದ್ಧ್ಯವನ್ನು ಅದ್ಭುತ ರೀತಿಯಲ್ಲಿ ನಿಭಾಯಿಸಲಾಗಿದೆ, ಧ್ವನಿಪೂರ್ಣಗೊಳಿಸಲಾಗಿದೆ!

ಮುಂದುವರಿದ ಮಂಗ– ಸೃಷ್ಟಿಕರ್ತ– ಕುಂಬಾರನ ಹತ್ತಿರ ಹೋಗುತ್ತದೆ. ಅವನಿಂದ ಸಂಸ್ಕರಿಸಲ್ಪಟ್ಟ ಗಡಿಗೆಯನ್ನು ಪಡೆಯುತ್ತದೆ. ಬಾಲವನ್ನು ಕಳೆದುಕೊಂಡ ಮಂಗ ಪರಿಪೂರ್ಣತೆ ಪಡೆಯುವುದು ಕುಂಬಾರನಲ್ಲಿ. ಗಡಿಗೆಯನ್ನೇನೋ ಪಡೆಯಿತು. ಆದರೆ ಅದರ ಸದುಪಯೋಗ ಪಡೆಯಿತೆ? ಇಲ್ಲ. ಮುದುಕ ಗಡಿಗೆಯನ್ನು ಬಳಸುವ ಸಂದರ್ಭದಲ್ಲಿಯೇ ಅವನ ಮಿತಿಯನ್ನು ಸೂಚಿಸಲಾಗಿದೆ. ತನ್ನ ಸಂಸಾರದ ಸವಿ ಬಳ್ಳಿಗೆ ನೀರು ಹಾಕಲು ಮಾತ್ರ ಬಳಸುತ್ತಾನೆ. ಹಾಗೆ ಬಳಸುವಾಗಲೇ ಗಡಿಗೆ ಒಡೆದು ಹೋಗುತ್ತದೆ. ದೇಹಕ್ಕೆ ಸಾವಿದೆ ಎಂಬುದು ಗೊತ್ತಿದ್ದರೂ ಬರೀ ಸಂಸಾರದ ಚಿಂತೆಯಲ್ಲಿಯೇ ಮುಳುಗಿರುತ್ತಾನೆ, ಈ ಮುದುಕ.

ಎಳೆಯ ಸೌತೆಕಾಯಿಗಳು ಸಂಸಾರದ ಜೀವನಕ್ಕೆ ದೊರೆತ ಪ್ರತಿಫಲಗಳು. ದೈವ ಸಾಕ್ಷಾತ್ಕಾರಕ್ಕಾಗಿ ಬಳಕೆಯಾಗಬೇಕಾದ ದೇಹ ಆ ಸಾಧನವಾಗಿ ಬಳಕೆಯಾಗುವುದಿಲ್ಲ. ಮುಂದಿನ ತಲೆಮಾರಿನ ಮಕ್ಕಳೂ ಸಹ– ದನ ಕಾಯುವ ಹುಡುಗರು– ಸಿಂಬಳ, ಒಣಖಾರ ತಿನ್ನುತ್ತ ಸಂಸಾರದ ಅನುಭವ- ಜಂಜಾಟ- ದಲ್ಲಿ ಮುಳುಗಿ ಹೋಗುತ್ತಾರೆ. ಅನಂತರದ ಸ್ಥಿತಿಯಲ್ಲಿಯೂ ಜೀವ ಕುಂಟುವ ಎತ್ತಾಗುತ್ತದೆಯೇ ವಿನಃ ಪೂರ್ಣರೂಪದ ಸಾಧನವಾಗುವುದಿಲ್ಲ. ಸಂಸಾರಕ್ಕಾಗಿ –ಎಂಟೆತ್ತಿನ ಕಮತದ ಐಹಿಕ ಸುಖಭೋಗದಲ್ಲಿ– ದುಡಿದು ದುಡಿದು ದಣಿದು ಹೋಗುತ್ತದೆ. (ಎಂಟೆತ್ತಿನ ಕಮತದ ಮನೆಯಲ್ಲಿ– ಒಕ್ಕಲುತನದ ಸರಕು ಹೊರಲು– (ಕುದುರೆಯಂತೆ) ಕಂಟಲೆತ್ತು ಇರುತ್ತಿತ್ತು.) ಈ ಕುಂಟುವ ಎತ್ತು ಡೊಂಬರಾಟದವನಂತೆ ಹಿಂದು-ಮುಂದಿನ ಎರಡೂ ಭಾರಗಳನ್ನು (ಇಹ– ಪರದ ಸಂಕೇತ) ಸಮತೂಕ ಮಾಡಿಕೊಳ್ಳಬೇಕಿತ್ತು. ಆದರೆ ಮಾಡಿಕೊಂಡಿಲ್ಲ.

ಅನಂತರ ಮಂಗ ಡೊಂಬರಾಟದವನ 'ಡೋಲು' ತೆಗೆದುಕೊಂಡರೂ ಹದ ಮಾಡಿ ಬಾರಿಸುವಲ್ಲಿ ವಿಫಲವಾಗುತ್ತದೆ. ಶಿವನಾಮ ನುಡಿಯುವ ಸಾಧನವಾಗಿಸುವಲ್ಲಿಯೂ ಮಂಗ ಸೋಲುತ್ತದೆ. ಕೊನೆಗೆ ನೀರಲ್ಲಿ ಬಿದ್ದು ಸಾಯುವುದರೊಂದಿಗೆ ಅನಂತ ಪಯಣದ ಒಂದು ಹಂತ ತಲುಪುತ್ತದೆ.

ಒಟ್ಟು ಮನುಷ್ಯನ ವಿಕಾಸದ ವಿವಿಧ ಹಂತಗಳನ್ನು, ವೈರುದ್ಧ್ಯಗಳನ್ನು ಮಂಗ ಮತ್ತು ವ್ಯಕ್ತಿ-ಸನ್ನಿವೇಶಗಳ ಮುಖಾಮುಖಿಯಲ್ಲಿ ಅನನ್ಯವಾಗಿ ಅಭಿವ್ಯಕ್ತಿಸಲಾಗಿದೆ. ಒಮ್ಮೆ ಹೊಂದಾಣಿಕೆ, ಸಹಕಾರ ಇನ್ನೊಮ್ಮೆ ಘರ್ಷಣೆಗಳ ಮೂಲಕ ದ್ವಂದ್ವತನವನ್ನು ಕುತೂಹಲಕಾರಿಯಾಗಿ ನಿಭಾಯಿಸಲಾಗಿದೆ. ವಿಕಾಸವಾದದ ಹಂತಕ್ಕಿಂತಲೂ ಮುಂದೆ ಹೋಗಿ

ಜೀವನದ ಸಾರ್ಥಕತೆಯ ಕಡೆಗೆ ಬೆರಳು ಮಾಡುತ್ತದೆ. ಈ ಕತೆಯ ಅರ್ಥಗ್ರಹಿಕೆಗೆ ಪೂರಕವಾದ ಸಂಕೇತಗಳು ಹೀಗಿವೆ :

ಮಂಗ- ಚಪಲತನದ ಮನುಷ್ಯ. ಬಾಲ ಮುರಿದ ಕ್ರಿಯೆ- ಮಂಗನಿಂದ ಮಾನವನೆಂಬ ಡಾರ್ವಿನ್ನನ ವಿಕಾಸವಾದಕ್ಕಿರುವ (ಜನಪದರ) ವಾಚಿಕ ಪರಂಪರೆಯ ಆಧಾರ. ಹಜಾಮ- ಕಾಡುಮನುಷ್ಯನನ್ನು ಸಂಸ್ಕರಿಸುವವ. ಕತ್ತಿ- ಸಂಸ್ಕಾರ ನೀಡುವ ಸಾಧನ. ಕುಂಬಾರ- ಗಡಿಗೆ ಮಾಡುವವ, ಸೃಷ್ಟಿಕರ್ತ. ಗಡಿಗೆ- ಕಾಯ, ದೇಹ. ಮುದುಕ- ಸಂಸಾರದ ಜಂಜಾಟದಲ್ಲಿ ನಲುಗಿದವ, ವಂಶದ ಕುಡಿ ಸವಿಯಾದ ಬಳ್ಳಿಗೆ ನೀರುಣಿಸುವವ. ಸೌತೆಬಳ್ಳಿ- ಸಂಸಾರ ಭವಾವಳಿ, ವಂಶಾವಳಿ, ಸೌತೆಕಾಯಿ- ಮಕ್ಕಳು-ಮೊಮ್ಮಕ್ಕಳು. ಸಿಂಬಳ- ಸಂಸಾರದ ಹೊಲಸು. ಕುಂಟ ಎತ್ತು- ಸಂಸಾರಕ್ಕೆ ದುಡಿದು ದುಡಿದು ದಣಿದ ವ್ಯಕ್ತಿ. ಡೊಂಬರಾಟದವ- ಸಂಸಾರ- ಪಾರಮಾರ್ಥಿಕಗಳನ್ನು ಸರಿಯಾಗಿ ತೂಗಿಸುವವ. ಡೋಲು- ತೊಗಲಿನ ದೇಹ ಶಿವನಾಮ ನುಡಿಯುವ ಸಾಧನವಾಗಬೇಕೆಂಬುದಕ್ಕೆ ಪ್ರತೀಕ. ನೀರಲ್ಲಿ ಮುಳುಗುವುದು- ಅನಂತ ಪಯಣದಲ್ಲಿ ಸಾಗುವ ಜೀವ ಸಾವನ್ನು ಪಡೆಯುವ ಒಂದು ಬಗೆ.

● ●

ಚಂದ್ರಗೌಡ ಕುಲಕರ್ಣಿ : ಚಿಲಿಪಿಲಿ, ಖಾಸ್ಗತನಗರ, ತಾಳಿಕೋಟಿ - ೫೮೬ ೨೧೪

ಫ್ಯಾಷನ್ : ಕೆಲವು ಅನ್ನಿಸಿಕೆಗಳು

ಪ್ರಸನ್ನ

ಫ್ಯಾಷನ್ ಎಂಬುದು ಸಮಕಾಲೀನ ಸಂಸ್ಕೃತಿಯ ಬಹುಮುಖ್ಯ ಅಭಿವ್ಯಕ್ತಿಗಳಲ್ಲಿ ಒಂದು. ಫ್ಯಾಷನ್ ಅದೆಷ್ಟು ಸಮಕಾಲೀನವೆಂದರೆ, ಅದಕ್ಕೆ ಹಿಂದಿರುವುದಿಲ್ಲ ಮುಂದಿರುವುದಿಲ್ಲ. ಏನಿದ್ದರೂ ಇಂದಿನ ಕಾಳಜಿ ಮಾತ್ರ. ಹಾಗೆಂದೇ ಒಮ್ಮೆ ಆಗಿ ಹೋದ ಓಬೀರಾಯನ ಕಾಲದ ಉಡುಗೆಯೊಂದು ಮತ್ತೆ ಚಾಲನೆಗೆ ಬಂದುಬಿಡುತ್ತದೆ ಅಥವಾ ಈವತ್ತಿನ ಜನಪ್ರಿಯ ಉಡುಗೆಯೊಂದು ನಾಳಿನ ಹೊತ್ತಿಗೆ ಮಾಯವಾಗಿ ಬಿಟ್ಟಿರುತ್ತದೆ. ಹಾಗೆಂದು ಫ್ಯಾಷನ್‌ಗಳು ವಿನಾಕಾರಣ ಹುಟ್ಟುತ್ತವೆ ಅಥವಾ ಸಾಯುತ್ತವೆ ಎಂದು ತಿಳಿದರೆ ತಪ್ಪಾದೀತು. ಎಲ್ಲ ಫ್ಯಾಷನ್ನುಗಳ ಹಿಂದೆಯೂ ಗಟ್ಟಿಯಾದ ಒಂದು ಕಾರಣ ಇದ್ದೇ ಇರುತ್ತದೆ, ಥಟ್ಟನೆ ಗೋಚರಿಸುವುದಿಲ್ಲ ಅಷ್ಟೆ.

ಫ್ಯಾಷನ್ನಿಗೂ ಯೌವನಕ್ಕೂ ವಿಚಿತ್ರವಾದ ನಂಟಿದೆ. ಹಾಗೆಯೇ ಬಂಡಾಯಕ್ಕೂ ಫ್ಯಾಷನ್ನಿಗೂ ನಂಟಿದೆ. ಯೌವನಸ್ಥ ಬಂಡಾಯವೇ ಫ್ಯಾಷನ್ ಎನ್ನಬಹುದೋ ಏನೋ. ಹಾಗಾಗಿ ಯುವಕ ಯುವತಿಯರು ತಮ್ಮ ಬಂಡಾಯಕ್ಕಾಗಿ ತೊಟ್ಟುಕೊಳ್ಳುವ ಯುದ್ಧದುಡುಗೆ ಗಳು ಫ್ಯಾಷನ್ನಿನ ವಸ್ತ್ರಗಳು ಎಂದರೆ ತಪ್ಪಾಗಲಾರದು. ಆದರಿದು ವಿಚಿತ್ರವಾದ ಹೋರಾಟ, ಇದೊಂದು ಆಂತರಿಕ ಹೋರಾಟ. ಅವರದ್ದೇ ಹಿರಿಯರೊಟ್ಟಿಗೆ ಹಾಗೂ ಪರಂಪರೆಯೊಟ್ಟಿಗೆ ಯುವಕರು ನಡೆಸುವ ಹೋರಾಟವಿದು. ಹಾಗಾಗಿ ಅಪ್ಪ ಅಮ್ಮಂದಿರು ಅಜ್ಜ ಅಜ್ಜಿಯರೇ ಈ ಹೋರಾಟದಲ್ಲಿ ಶತ್ರುಪಕ್ಷ.

ಈಚೆಗೆ ನನ್ನ ಮಗನ ಫ್ಯಾಷನ್ನಿನ ಹೋರಾಟವನ್ನು ನಾನು ಗಮನಿಸುತ್ತಿದ್ದೇನೆ. ಉದಾಹರಣೆಗೆ ಅವನು ತೊಡುವ ಪ್ಯಾಂಟುಗಳು ಅವನಿಗಿಂತ ಉದ್ದವಿರುತ್ತದೆ, ಹಾಗೂ ಬುಡದಲ್ಲಿ ಅಗಲವಿರುತ್ತದೆ. ಉದ್ದದ ಅತಿಯನ್ನವನು ತುಂಡರಿಸುವುದಿಲ್ಲ ಅಥವಾ ಮಡಿಚಿಕೊಳ್ಳುವುದೂ ಇಲ್ಲ. ಅದು ಹಾಗೆಯೇ ಹಿಮ್ಮಡಿಗೆ ಸಿಕ್ಕಿಕೊಂಡು ನೆಲ ಸಾರಿಸುವಂತೆ ಬಿಟ್ಟಿರುತ್ತಾನೆ. ಅದು ಕಿತ್ತು ಹರಿದು ಕೆಸರು ಮೆತ್ತಿಕೊಂಡು ವಿಲಾಪಿಸುತ್ತಿರುತ್ತದೆ. ಇದು ಇತ್ತೀಚಿನ ಫ್ಯಾಷನ್ ಅಂತೆ. ಮಿಕ್ಕಂತೆ ತಾರ್ಕಿಕನಾಗಿ ನಡೆದುಕೊಳ್ಳುವ ಅವನು ತನ್ನ ಪ್ಯಾಂಟಿನ ಬಗ್ಗೆ ಮಾತ್ರ ಅತಾರ್ಕಿಕನಾಗಿಯೇ ನಡೆದುಕೊಳ್ಳುತ್ತಾನೆ.

ಫ್ಯಾಷನ್ನಿನ ಹಿಂದಿರುವ ಸಾಮಾಜಿಕ ಒತ್ತಾಸೆಯನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಜೀನ್ಸ್ ಪ್ಯಾಂಟು ಒಳ್ಳೆಯ ಉದಾಹರಣೆಯಾಗಿದೆ. ಜೀನ್ಸ್ ಪ್ಯಾಂಟಿನ ಉಗಮವೇ ಕುತೂಹಲಕಾರಿಯಾದದ್ದು. ಈಗ್ಗೆ ನೂರೈವತ್ತು ವರ್ಷಗಳಿಗೂ ಹಿಂದೆ ಅಮೇರಿಕೆಯ ಲೀವೀಸ್ ಕಂಪೆನಿ ಜೀನ್ಸ್ ಪ್ಯಾಂಟುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತು. ಅಮೇರಿಕೆಯ ಯುವಕರ ನಡುವೆ ಜೀನ್ಸ್ ಅಪಾರ ಜನಪ್ರಿಯತೆ ಪಡೆಯಿತು. ಅಂದಿನಿಂದ ಇಂದಿನ ವರೆಗೆ ಜೀನ್ಸ್ ಪ್ಯಾಂಟಿನ ಜನಪ್ರಿಯತೆ ಅಬಾಧಿತವಾಗಿ ಮುಂದುವರಿದಿದೆ. ಜೀನ್ಸ್‌ನ ಜನಪ್ರಿಯತೆಗೆ ಕಾರಣ ಅದೊಂದು 'ಕೆಲಸದ ಉಡುಗೆ' ಎಂಬುದಾಗಿದೆ.

ಟ್ವೀಡ್‌ಗಳು ಫ್ಲಾನಲ್‌ಗಳು ಇತ್ಯಾದಿ ಹೆಚ್ಚು ನಯವಾದ ಹಾಗೂ ದುಬಾರಿಯಾದ ಮೇಲ್ವರ್ಗದ ವಸ್ತುಗಳಿಗಿಂತ ಭಿನ್ನವಾಗಿ ಜೀನ್ಸ್ ಇತ್ತ ಕಡೆ ಒರಟು ವಸ್ತ್ರವೂ ಹೌದು ಅತ್ತ ಯುವಕ ಯುವತಿಯರ ಸ್ಟೈಲಿಸ್ಟ್ ಸೌಂದರ್ಯ ಪ್ರತೀಕವೂ ಹೌದು. ಜೀನ್ಸ್‌ನಂತೆಯೇ ಜನಪ್ರಿಯವಾದ ಮತ್ತೊಂದು ವಸ್ತುವಿದೆ. ಆದರದು ಉಡುಗೆಯಲ್ಲ ತಿನಿಸು; ಪಾವ್ ಭಾಜಿ. ಪಾವ್ ಭಾಜಿ ಕೂಡಾ ಬೀದಿ ಬದಿಯ ಬಡವರ ಆಹಾರವಾಗಿದ್ದದ್ದು, ಇಂದು ಮೇಲ್ವರ್ಗದವರ ಹೋಟೆಲುಗಳ ಮೆನು ಕಾರ್ಡುಗಳನ್ನು ಹೊಕ್ಕು ಕುಳಿತಿದೆ.

ಮುಂಬಯಿಯ ಗಿರಣಿ ಕಾರ್ಮಿಕರು ರಾತ್ರಿ ಪಾಳಿ ಮುಗಿಸಿಕೊಂಡು ಕಾರ್ಖಾನೆಯ ಗೇಟು ದಾಟಿದರೆಂದರೆ ರಸ್ತೆಯ ಎರಡೂ ಬದಿಗೆ ತಳ್ಳುವ ಗಾಡಿಗಳು ನಿಂತಿರುತ್ತಿದ್ದವು. ತಳ್ಳುವ ಗಾಡಿಯವರು ತಮ್ಮದೇ ಮಾದರಿಯ 'ಮಿಸಳ ಭಾಜಿ'ಯೊಂದನ್ನು ಹಸಿದ ಕಾರ್ಮಿಕರಿಗೆ ಉಣಿಸುತ್ತಿದ್ದರು. ಮುಂಬಯಿಯ ಬೇಕರಿಗಳಲ್ಲಿ ತಯಾರಾಗುವ 'ಪಾವ್' (ಸಣ್ಣ ಬನ್ನುಗಳು) ಹಾಗೂ ತವೆಯ ಮೇಲೆ ಕಾಯಿಸಿ ಉಣಬಡಿಸುವ ಭಾಜಿ. ಭಾಜಿ ನೀರಾದರೆ ರಸ್ತೆಯಲ್ಲಿ ನಿಂತುಕೊಂಡು ತಿನ್ನುವುದು ಕಷ್ಟ ಎಂಬ ಕಾರಣಕ್ಕಾಗಿ ಭಾಜಿಯನ್ನು ತವೆಯ ಮೇಲೆ ಕಾಯಿಸುವಾಗಲೇ ಸೌಟಿನಿಂದ ಅರೆದು ಅರೆದು ದಪ್ಪ ಮಾಡಲಾಗುತ್ತಿತ್ತು. ಅದೇ ಒಂದು ಸ್ಟೈಲ್ ಆಯಿತು. ಎಲ್ಲ ತಿನಿಸುಗಳೂ ಬಾಯಿಗೆ ರುಚಿಯಾಗಿರುವಷ್ಟೇ ಕಣ್ಣಿಗೆ ಆಕರ್ಷಕವಾಗಿರಬೇಕು, ಸಾಧ್ಯವಾದರೆ ತಯಾರಿಕೆಯ ವಿಧಾನ ನಾಟಕೀಯವಾಗಿರಬೇಕು. ಆಗ ಪದಾರ್ಥ ಜನಪ್ರಿಯವಾಗುತ್ತದೆ. ಪಾವ್ ಭಾಜಿಯ ಯಶಸ್ಸಿನ ಗುಟ್ಟಿದು.

ಪಾವ್ ಭಾಜಿ ಶ್ರೀಮಂತರ ಕಣ್ಣಿಗೆ ಬಿತ್ತು! ಅವರಿಗೆ ಪಂಚತಾರಾ ಹೋಟೆಲುಗಳ ತಿನಿಸು ಬೇಸರ ಬಂದಾಗ ತಿನ್ನಲಿಕ್ಕೊಂದು ಹಾದಿ ಬದಿಯ ತಿನಿಸಾಗಿ ಪಾವ್ ಭಾಜಿ ಜನಪ್ರಿಯವಾಯಿತು. ಇಂದು ಪಾವ್ ಭಾಜಿ ಇಡೀ ದೇಶವನ್ನು ಆವರಿಸಿಕೊಂಡಿದೆ, ಪಂಚತಾರಾ

ಹೋಟೆಲುಗಳ ಒಳಹೊಕ್ಕಿವೆ. ಮುಂಬಯಿಯ ಪಾವ್ ಭಾಜಿ, ಚೀನ ದೇಶದ ಮಂಚೂರಿಯಾ ಪ್ರಾಂತ್ಯದ ಗೋಬಿ ಮಂಚೂರಿ, ಗುಜರಾತಿಗಳ ಗೋಲ್‌ಗೊಪ್ಪ, ಮದರಾಸಿಗಳ ವಡ ಸಾಂಬಾರ್ ಎಲ್ಲವೂ ಇದೇ ರೀತಿ, ಬಡವರ ನೆರೆಮನೆಯಿಂದ ದೂರದ ಅರಮನೆಗೆ ಹಾರಿದ 'ಫ್ಯಾಷನಬಲ್' ಸಂಗತಿಗಳು.

ನಮ್ಮ ಹೆಣ್ಣುಮಕ್ಕಳು ಸೀರೆಗಳಿಗೆ ಬದಲಾಗಿ ಸಲ್ವಾರ್ ಕಮೀಜ್ ಹಾಗೂ ಶರಾಯಿಗಳನ್ನು ಆಯ್ಕೆ ಮಾಡಿಕೊಂಡಿರುವುದು ಕೂಡ ಸಾಮಾಜಿಕ ಪ್ರತಿರೋಧವೇ ಹೌದು. ಸಲ್ವಾರ್ ಕಮೀಜ್ ಹಾಗೂ ಶರಾಯಿಗಳು ಕೂಡಾ ನಮ್ಮ ಹೆಂಗಸರಿಗೆ ಕೆಲಸಮದುಗೆಗಳೇ ಹೌದು. ವ್ಯಕ್ತಿತ್ವಕ್ಕೆ ಮತ್ತೆ ಮತ್ತೆ ಬಂದು ಸುತ್ತಿಕೊಳ್ಳುವ 'ನೈತಿಕ ಬಂಧನ'ವಾದ ಹದಿನೆಂಟು ಮೊಳದ ಸೀರೆಗೆ ಬದಲಾಗಿ ಮೈಗೆ ಮುತ್ತಿಡುವ ಶರಾಯಿ ಬಿಡುಗಡೆಯ ಪ್ರತೀಕವಾಗಿ ಕಂಡಿತು.

ಯೌವನದಲ್ಲಿ ಬಿಡುಗಡೆಗೆ ಎರಡು ಆಯಾಮಗಳಿರುತ್ತವೆ. ಒಂದು ಕೆಲಸ, ಸಹಜತೆ, ಉಪಯುಕ್ತತೆ ...ಇತ್ಯಾದಿ ಸಾರ್ವಜನಿಕ ಆಯಾಮವಾದರೆ ಮತ್ತೊಂದು ಖಾಸಗಿ ಆಯಾಮ; ರತಿಯ ಆಕರ್ಷಣೆ. ಇವೆರಡೂ ಸಂಗತಿಗಳು ಒಂದೇ ಪದಾರ್ಥದಲ್ಲಿ ಲಭ್ಯವಾದಾಗ ಆ ಪದಾರ್ಥ ಅಪಾರ ಜನಪ್ರಿಯತೆ ಗಳಿಸುತ್ತದೆ. ನಮ್ಮ ಹೆಣ್ಣುಮಕ್ಕಳ ಆಯ್ಕೆಯನ್ನೇ ತೆಗೆದುಕೊಳ್ಳಿ. ಕೆಲಸಕ್ಕೆ ಹೋಗಿ ಬರುವುದೆಂದರೆ ಮನೆಯ ಬಂಧನದಿಂದ ಹೊರಬರುವುದು, ಇತರೆ ಗಂಡು ಹೆಣ್ಣುಗಳ ಜೊತೆ ಬೆರೆಯುವುದು.

ಮಡಿವಂತರು ಏನೇ ಹೇಳಲಿ ಯೌವನದ ಈ ತುಡಿತಗಳು (ಫ್ಯಾಷನ್ ಸೇರಿದಂತೆ) ಆರೋಗ್ಯಕರವಾದದ್ದೇ ಹೌದು. ಆದರೆ ಫ್ಯಾಷನ್ ಜಗತ್ತಿನಲ್ಲಿ ನಮ್ಮನ್ನು ಆತಂಕಕ್ಕೆ ಈಡು ಮಾಡಬಲ್ಲ ಮೂರನೆಯ ಸಂಗತಿಯೊಂದಿದೆ, ಅದು ಆರೋಗ್ಯವಾದದ್ದೂ ಅಲ್ಲ ಅಥವಾ ಅನುಮಾನಾತೀತವಾದದ್ದೂ ಅಲ್ಲ. ಅದು ಮಾರುಕಟ್ಟೆ. ಮಾರುಕಟ್ಟೆ ಎಂಬುದು ನಮ್ಮ ನಿಗ್ರಹದಲ್ಲಿದ್ದಾಗ ಉಪಯುಕ್ತ ಸಂಸ್ಥೆ ನಿಜ. ಆದರೆ ನಿಗ್ರಹ ಮೀರಿದಾಗ ರಾಕ್ಷಸ ಸಂಸ್ಥೆಯೂ ಆಗಬಲ್ಲದು. ಎಲ್ಲ ಫ್ಯಾಷನ್ನುಗಳನ್ನೂ ಹುಟ್ಟುಹಾಕುವುದು ಮಾರುಕಟ್ಟೆಯೇ ಹೌದು.

ಯುವಕರಲ್ಲಿ ಸುಪ್ತವಾಗಿರುವ ಬಂಡಾಯ ಪ್ರಜ್ಞೆ ಹಾಗೂ ಬಿಸಿ ರಕ್ತಗಳಿಗೆ ವಸ್ತ್ರ ಪ್ರತೀಕಗಳನ್ನು ಒದಗಿಸುವ ಮೂಲಕ ಹಣ ಮಾಡುತ್ತದೆ ಮಾರುಕಟ್ಟೆಯ ಶಕ್ತಿಗಳು. ಮಾರುಕಟ್ಟೆಯೂ ಸಹಿತ ಆಯಾ ಸಮುದಾಯಗಳ ಮಿತಿಯೊಳಗೆ ವ್ಯವಹರಿಸುವಷ್ಟು ಕಾಲ ಸರಿಯಾಗಿಯೇ ಇರುತ್ತವೆ. ಆದರೆ ಅಂತರ್‍ರಾಷ್ಟ್ರೀಯ ಫ್ಯಾಷನ್ ಎಂಬುದು ಕೋಟ್ಯಂತರ ಡಾಲರುಗಳ ಬೃಹತ್ ಜಾಲ. ಈ ಜಾಲಕ್ಕೆ ಯಾವುದೇ ಒಂದು ಸಮುದಾಯ ಅಥವಾ ರಾಷ್ಟ್ರ ಅಥವಾ ಧರ್ಮ ಅಥವಾ ನೈತಿಕತೆಗಳ ಮಿತಿಯಿಲ್ಲ. ಸಮಕಾಲೀನ ಸಮುದಾಯಗಳ ಫ್ಯಾಷನ್ ಅನ್ನು ರೂಢಿಸುತ್ತಿರುವುದು ಈ ಜಾಲವಾಗಿದೆ. ಅಂತರ್‍ರಾಷ್ಟ್ರೀಯ ಫ್ಯಾಷನ್ನಿನ ಜಾಲ ಗಾಬರಿ ಹುಟ್ಟಿಸಬಲ್ಲ ಸಂಗತಿ.

ಫ್ಯಾಷನ್ ಟಿ.ವಿ.ಗಳನ್ನು ನೋಡಿದವರಿಗೆ ನನ್ನ ಮಾತು ಅರ್ಥವಾದೀತು. ರ್‍ಯಾಂಪುಗಳ ಮೇಲೆ ನಡೆಯುವ ಅರೆಬತ್ತಲು ದೇಹಗಳ ಮೆರವಣಿಗೆಗೆ ಆದಿಯಿಲ್ಲ ಅಂತ್ಯವಿಲ್ಲ, ಆ ದೇಹಗಳಿಗೆ ಕಣ್ಣು ಕಿವಿ ಅಥವಾ ಮನಸ್ಸು ಇದೆ ಎಂದು ಅನ್ನಿಸುವುದೇ ಇಲ್ಲ. ಇರುವುದೇನಿದ್ದರೂ ದೇಹ ಮಾತ್ರ... ಪ್ರತಿ ಆರು ತಿಂಗಳಿಗೊಮ್ಮೆ ಫ್ಯಾಷನ್ನುಗಳು ಬದಲಾಗಬೇಕು ಸಿದ್ಧ ಉಡುಪುಗಳ ಉದ್ಯಮ ಲಾಭ ಮಾಡಬೇಕು. ಇದು ಮೆರವಣಿಗೆಯ ಹಿಂದಿರುವ ಚಾಲಕ ಶಕ್ತಿ. ಇಲ್ಲಿ

ಎಲ್ಲವೂ ತಲೆ ಕೆಳಗು. ಯುವ ಜನತೆಯ ಬಂಡಾಯ ಪ್ರವೃತ್ತಿ ಫ್ಯಾಷನ್ನುಗಳನ್ನು ಸೃಷ್ಟಿಸುವ ಬದಲಾಗಿ ಮಾರುಕಟ್ಟೆಯ ಶಕ್ತಿಗಳು ಹುಸಿ ಬಂಡಾಯದ ಪ್ರತೀಕಗಳನ್ನು ಪ್ರತಿ ಆರು ತಿಂಗಳಿಗೊಮ್ಮೆ ಬಿಡುಗಡೆ ಮಾಡುತ್ತವೆ, ಯೌವನದ ಸಹಜ ಆಕರ್ಷಣೆಯನ್ನು ಹಸಿ ಕಾಮುಕತೆಯನ್ನಾಗಿಸಿ ಮುಖಕ್ಕೆ ರಾಚಲಾಗುತ್ತದೆ.

ರ‍್ಯಾಂಪುಗಳ ಮೇಲಣ ಮೆರವಣಿಗೆಯಲ್ಲಿ ಈಗ ಬಚ್ಚಿಡಲಿಕ್ಕೆ ಏನೂ ಉಳಿದಿಲ್ಲ. ಬಚ್ಚಿಡುವುದೇನೂ ಇರದಿದ್ದಾಗ ರತಿಯ ಸಹಜ ಆಕರ್ಷಣೆಯೂ ಇರುವುದಿಲ್ಲ. ಇದೊಂದು ಆಧುನಿಕ ದುರಂತವೇ ಸರಿ. ದೇಹ ಬತ್ತಲಾಗಿಸಿದ ಆಧುನಿಕ ಫ್ಯಾಶನ್ ರತಿಯ ಆಕರ್ಷಣೆಯನ್ನೂ ಬರಡಾಗಿಸಿ ಬಿಟ್ಟಿದೆ.

ಈ ಲೇಖನ ಮುಗಿಸುವ ಮುಂಚೆ ಕನ್ನಡ ವಿಮಶೆಯ ಬಗ್ಗೆ ಒಂದು ಮಾತು. ಕನ್ನಡ ವಿಮರ್ಶೆ ಸಾಹಿತ್ಯ ವಿಮರ್ಶೆ ಮಾತ್ರವೇ ಆಗಿ ಕುಳಿತಿದೆ. ಸಾಹಿತ್ಯ ವಿಮರ್ಶೆ ಕೃತಿ ವಿಮರ್ಶೆ ಮಾತ್ರವೇ ಆಗಿ ಕುಳಿತಿದೆ. ವಿಮರ್ಶೆ ಎಂಬುದು ವಿಶಾಲ ಅರ್ಥದಲ್ಲಿ ಸಮಕಾಲೀನ ಸಂಸ್ಕೃತಿಯ ವಿಶ್ಲೇಷಣೆಯಾಗಬೇಕು. ಇಲ್ಲದಿದ್ದರೆ ವಿಮರ್ಶೆ ಮೂಲೆಗುಂಪಾಗುತ್ತದೆ. ಹಾಗೂ ಸಂಸ್ಕೃತಿ ಕ್ಷೇತ್ರ ಕಳೆ ಬೆಳೆದ ಹೊಲದಂತಾಗುತ್ತದೆ.

●●

ಪ್ರಸನ್ನ : ಕವಿ ಕಾವ್ಯ ಟ್ರಸ್ಟ್, ಹೆಗ್ಗೋಡು - ೫೭೭ ೪೧೭ ತಾ. ಸಾಗರ

ಕೇಶವಿನ್ಯಾಸ

ಶೈಲಾ ಛಬ್ಬಿ

ಪುರಾಣ ಕಾಲದಿಂದಲೂ ಸ್ತ್ರೀ-ಪುರುಷರು ವಿಧವಿಧವಾದ ಕೇಶಶೃಂಗಾರವನ್ನು ಮಾಡುತ್ತ ತಮ್ಮ ಸೌಂದರ್ಯವನ್ನು ವರ್ಧಿಸಿಕೊಳ್ಳುತ್ತ ಬಂದದ್ದನ್ನು ನಾವು ಅರಿತಿದ್ದೇವೆ. ಪುರಾಣ ಕಾಲದಲ್ಲಿ ನಮ್ಮ ದೇವಿ-ದೇವತೆಯರು ಋಷಿಮುನಿಗಳು ಬಗೆಬಗೆಯ ಶಿಖೆಗಳನ್ನು ಕಟ್ಟುತ್ತಿದ್ದರು. ಅವನ್ನು ನೆತ್ತಿಯ ಮೇಲೆ ಇಲ್ಲವೆ ನೆತ್ತಿಯ ಎಡಕ್ಕೋ, ಬಲಕ್ಕೋ ಬಿಗಿಯುತ್ತಿದ್ದರು. ಬೇಲೂರು-ಹಳೆಬೀಡಿನ ಶಿಲಾಬಾಲಿಕೆಯರನ್ನು ಕಂಡಾಗ ಅವರ ಮೈಮಾಟದ ಜೊತೆಗೆ ಅವರ ಕೇಶವಿನ್ಯಾಸದ ಸುತ್ತಲೂ ನಮ್ಮ ಗಮನ ಹರಿಯುತ್ತದೆ. ಅವರ ಕೇಶಶೃಂಗಾರವನ್ನು ಕುರಿತು ಶಾಂತಾದೇವಿ ಮಾಳವಾಡರು ಸಾಕಷ್ಟು ಅಧ್ಯಯನ ನಡೆಸಿ 'ಮಹಿಳೆಯರ ಅಲಂಕಾರ' ಎಂಬ ಪುಸ್ತಕವನ್ನೇ ಬರೆದಿದ್ದಾರೆ. ಕಾವ್ಯದಲ್ಲಿ ಹಾಗೂ ಶಿಲ್ಪದಲ್ಲಿ ಕೇಶವಿನ್ಯಾಸದ ಕುರಿತು ಸಮಗ್ರ ಅಧ್ಯಯನ ನಡೆಸಿ ಅಲ್ಲಿ ಬರುವ ಬಿಡಿ ಮುಡಿ, ಬಳಲ್ಮುಡಿ, ಎಳಲ್ಮುಡಿ, ಸಡಿಲ್ಮುಡಿ, ಮುತ್ತಿನಮುಡಿ, ಸೋರ್ಮುಡಿ, ಪದಿರ್ಮುಡಿ, ಸಿರಿಮುಡಿ, ಗೋಡಂಬಿಮುಡಿ, ಕಿರೀಟಮುಡಿ, ಜಡೆಮುಡಿ, ಸೋಗೆದುರುಂಬು, ತಕ್ಕೆದುರಿಂಬು... ಮುಂತಾಗಿ ಮುಡಿಗಳ ವಿವರ ವರ್ಣನೆಯನ್ನೇ ಕೊಟ್ಟಿದ್ದಾರೆ. ಅಬ್ಬಬ್ಬಾ, ಎಂಥೆಂತಹ ವೈವಿಧ್ಯಮಯ ಕೇಶವಿನ್ಯಾಸಗಳವು! ನಮ್ಮ ಕವಿಗಳೇನು ಕಡಿಮೆಯೆ? "ಮುಡಿಗೆ ನವಿಲ್ಗಳಂದವನೆ ಪೋಲ್ವ" ಎಂದು ನವಿಲಿನ ಗರಿಯಂತಿರುವ ಕೇಶಾಲಂಕಾರವನ್ನು ವರ್ಣಿಸಿದ್ದಾರೆ. ನಿಜ, ಇಂದಿನವರಿಗಿಂತ

ಹಿಂದಿನವರಿಗೇ ಕೇಶಶೃಂಗಾರದ ಬಗ್ಗೆ ಹೆಚ್ಚಿನ ಆಸಕ್ತಿ, ಪರಿಣತಿ ಹಾಗೂ ಕಲಾವಂತಿಕೆ ಇತ್ತು ಎಂಬುದು ವೇದ್ಯವಾಗುತ್ತದೆ.

ನಮ್ಮ ಹಾಲಕ್ಕಿ ಗೌಡತಿಯರು, ಆದಿವಾಸಿ ಮಹಿಳೆಯರು ಕಟ್ಟುವ ತುರುಬು ಕೂಡ ವಿಶಿಷ್ಟವಾದವುಗಳೇ. ನಮ್ಮಲ್ಲಿ ಅನೇಕ ಹಿರಿಯ ಮಹಿಳಾಮಣಿಯರು ಸದಾ ತುರುಬು ಹಾಕುವದು ಸರ್ವೇಸಾಮಾನ್ಯ. ಈಗ ನಲವತ್ತು ವರುಷಗಳಾಚೆ ಹೆರಳಂಬಾಡಿ ಹಾಕಿಕೊಳ್ಳುವದೂ ರೂಢಿಯಲ್ಲಿತ್ತು. ಮೊದಲಿಗೆ ಹೆರಳು ಹಾಕಿಕೊಂಡು ನಂತರ ಅದನ್ನು ಕಲಾತ್ಮಕವಾಗಿ ಅಕಡಾಗಳಿಂದ ಶೃಂಗರಿಸುತ್ತಿದ್ದರು. ನಾಗರ ಹೆಡೆಗಳಂತೆಯೂ ವಿನ್ಯಾಸ ಮಾಡಿಕೊಳ್ಳುತ್ತಿದ್ದರು. ನಮ್ಮ ಸಿನೆಮಾ ತಾರೆಯರೂ ನವನವೀನ ಕೇಶಾಲಂಕಾರವನ್ನು ಮಾಡಿಕೊಳ್ಳುತ್ತಿದ್ದರು. ಮೀನಾಕುಮಾರಿಯಂಥವರ ಸಾದಾ ತುರುಬಿನಿಂದ ಹಿಡಿದು ಮುಮತಾಜಳ ಚಿತ್ರವಿಚಿತ್ರ ಮುಡಿಯ ವರೆಗೆ ಅದು ಮುಂದುವರಿದಿತ್ತು. ಶರ್ಮಿಲಾ, ಆಶಾ ಪರೇಖ್, ಸಾಹಿರಾ ಬಾನು, ರಾಖೀ, ರೇಖಾ, ಮುಮತಾಜ ಮುಂತಾದವರ ತಲೆಗಿಂತ ತುರುಬುಗಳೇ ದೊಡ್ಡವಿರುತ್ತಿದ್ದವು. ತಲೆಯ ಮೇಲೆ ಕಬ್ಬಿಣ ಬುಟ್ಟಿಯನ್ನು ಹಾಕಿಕೊಂಡಿದ್ದಾರೆಯೇ ಎಂಬ ಅನುಮಾನ ಬರುತ್ತಿತ್ತು. ತಲೆ ಹಾಗೂ ತುರುಬನ್ನು ವೀಕ್ಷಿಸಿದಾಗ ಬಿಂದಿಗೆಯ ಮೇಲೆ ಕೊಡ ಇಟ್ಟರೆ ಹೇಗೆ ಕಾಣಬಹುದೋ ಹಾಗೆ ಹೋಲುತ್ತಿತ್ತು. ಮೂಗಿಗಿಂತ ಮೂಗುತಿ ಭಾರವೆಂಬಂತೆ. "ಕೇಶಭಾರಮಂ ಪೊತ್ತಿರಲಾರ್ಪಳೇ ಕುಸುಮಕೋಮಳೆ" ಎನ್ನುವಂತೆ ಮುಡಿಭಾರವಿರುತ್ತಿತ್ತು. ಅವರು ಇಂಥ ಭಾರವಾದ ತುರುಬನ್ನು ಹೊತ್ತು ಹೇಗೆ ಅಡ್ಡಾಡುತ್ತಾರೆ? ಹೇಗೆ ನಿಭಾಯಿಸುತ್ತಾರೆ? ತಲೆನೋವು ಬಾರದೆ ಅಥವಾ ಆ ತುರುಬು ಸಮತೋಲ ಕಾಯ್ದುಕೊಳ್ಳದೆ ಬಿದ್ದು ಹೋಗುವುದಿಲ್ಲವೆ ಎಂಬ ಆಶಂಕೆಗಳು ನನ್ನಂತೆ ಅನೇಕರಲ್ಲಿ ಮೂಡಿರಲು ಸಾಕು. ಆದರೆ ಅವೆಲ್ಲ 'ವಿಗ್'ಗಳಂತೆ. ನಾನಾ ವಿನ್ಯಾಸದ 'ವಿಗ್'ಗಳನ್ನು ಧರಿಸಿ ಅವರು ತಮ್ಮ ಅಂದವನ್ನು ಇಮ್ಮಡಿಗೊಳಿಸುತ್ತಿದ್ದರು.

ಜಡೆ ಹೆಣೆದುಕೊಳ್ಳುವದು ಇಂದಿಗೂ ಪ್ರಚಲಿತವಿರುವ ಕೇಶವಿನ್ಯಾಸ. ನಮ್ಮ ಪೌರಾಣಿಕ ಹಾಗೂ ಐತಿಹಾಸಿಕ ಮಹಿಳೆಯರು ಆಕರ್ಷಕವಾಗಿ ಜಡೆ ಹೆಣೆದುಕೊಳ್ಳುತ್ತಿರುವದು ನಮಗೆ ತಿಳಿದ ವಿಷಯ. ರಾಣಿಯರಿಗೆ ಹೆರಳು ಹಾಕಲು ಸೇವಕಿಯರೇ ಇರುತ್ತಿದ್ದರು. ಜಡೆಯಲ್ಲಿ ನಾಗರಜಡೆ, ಪೆಟ್ಟಿಗೆಜಡೆ, ಇರುವೆಜಡೆ, ಮೊಗ್ಗಿನಜಡೆ, ಬಿಗಿಜಡೆ, ಸಡಿಲಜಡೆ ಮುಂತಾದ ವೈವಿಧ್ಯವನ್ನು ಕಾಣುತ್ತೇವೆ. ಉದ್ದ ಹಾಗೂ ಘನವಾದ ಜಡೆಯು ಸೌಂದರ್ಯದ ಪ್ರತೀಕವಾಗಿತ್ತು. ನಾಗವೇಣಿ, ನೀಳವೇಣಿ, ಫಣಿವೇಣಿ ಎಂದು ಕವಿಗಳು ಅವರನ್ನು ಹಾಡಿ ಹೊಗಳಿದ್ದಾರೆ. ಡಿ.ವಿ.ಜಿ.ಯವರು ತಮ್ಮ 'ಅನ್ತಃಪುರ ಗೀತೆ'ಯಲ್ಲಿ 'ಕೇಶವನ ರಾಣಿಯರ್ ಶುಕವಾಣಿಯರ್ ಫಣಿವೇಣಿಯರ್' ಎಂದು ಪ್ರಶಂಸಿಸಿದ್ದಾರೆ. ಈ ನೀರೆಯರ ಕೂದಲು ಎಷ್ಟು ಉದ್ದವಾಗಿತ್ತೆಂದರೆ "ನೆಲಕ್ಕೆಸೆವ ನಿಡುಜಡೆಯ ನೀಟಿನ ನೀರೆಯರು" ಎಂಬ ಕವಿವರ್ಣನೆಯೂ ಕೇಳಿಬರುತ್ತದೆ. ಕೆಲ ಕವಿಗಳು ಸ್ತ್ರೀಯರ ಘನವಾದ ಕೇಶರಾಶಿಯನ್ನು ದಟ್ಟವಾದ ಕಪ್ಪುಮೋಡಗಳಿಗೆ ಹೋಲಿಸಿದ್ದಾರೆ. ಗಿಡ್ಡ ಕೂದಲಿನ ವನಿತೆಯರು ಕೂದಲಿಗೆ ಚೌರಿ (ಗಂಗಾವನ) ಜೋಡಿಸಿ ಉದ್ದ ಮಾಡಿಕೊಂಡು ಖುಶಿಪಡುತ್ತಿದ್ದರು. ದಕ್ಷಿಣದ ಚಲನಚಿತ್ರ ನಾಯಕಿಯರು ತೊಡೆ ಮುಟ್ಟುವಂತೆ ಉದ್ದ ಹೆರಳು ಹೆಣೆದುಕೊಂಡು ಅದಕ್ಕೆ

ಗೊಂಡೆ (ಕುಚ್ಚು) ಕಟ್ಟಿಕೊಂಡು ಒಂದು ಕಿಲೋ ಮಲ್ಲಿಗೆಯ ಮಾಲೆಯನ್ನು ಧರಿಸುತ್ತಿದ್ದರು. ಜಾವಳ ತೆಗೆಯದ ಗಂಡುಮಕ್ಕಳಿಗೆ ಉದ್ದವಾದ ಕೇದಿಗೆಯ ಇಲ್ಲವೆ ಮಲ್ಲಿಗೆಯ ಜಡೆ ಹೆಣೆದು ಫೋಟೊ ತೆಗೆಸುವ ಪದ್ಧತಿ ಇಂದಿಗೂ ಕೆಲ ಭಾಗಗಳಲ್ಲಿ ರೂಢಿಯಲ್ಲಿದೆ.

ಕಾಲಕ್ರಮೇಣ ನೀರೆಯರಿಗೆ, ನಾರಿಯರಿಗೆ ಜಡೆ ಒಂದು ತೊಡಕಾಗಿ, ಭಾರವಾಗಿ, ಜವಾಬ್ದಾರಿಯಾಗಿ ತೋರತೊಡಗಿತು. ಕೂದಲನ್ನು ಮೊಟಕುಗೊಳಿಸಿ 'ಪೋನಿಟೇಲ್'ಎಂದು ಕುದುರೆಮರಿಯ ಬಾಲದಂತೆ ಬಿಡಹತ್ತಿದರು. ಈಗಲೂ ಇದು ಪ್ರಚಾರದಲ್ಲಿದ್ದು ಪೊನಿಟೇಲಿಗಳು ನಡೆದಾಗಲೆಲ್ಲ ಆ ಟೇಲು ಆಚೆಗೊಮ್ಮೆ ಈಚೆಗೊಮ್ಮೆ ಹೊಯ್ದಾಡಿ ತನ್ನ ಅಸ್ತಿತ್ವವನ್ನು ಎದ್ದುಗಾಣಿಸುತ್ತವೆ. ತಲೆಯ ಹಿಂಭಾಗಕ್ಕಷ್ಟೇ ಅಲ್ಲದೆ ಮುಂಭಾಗದಲ್ಲೂ ಕತ್ತರಿಸಿ ಸಾಧನಾ ಕಟ್, ಪೂಜಾಭಟ್ ಕಟ್ ಎಂದು ಏನೇನೋ ಕಟ್ ಮಾಡಿಕೊಂಡು ಹಣೆ-ಕಣ್ಣು ಗಳನ್ನು ಕೇಶದಿಂದ ಆವೃತ ಮಾಡಿಕೊಂಡು ಬಿಡುತ್ತಾರೆ. ಅವರಿಗೆ ಇದರಿಂದ ಎಡಚೆಡಚಾಗುವು ದಿಲ್ಲವೆ? ನೋಡುವಾಗ ಅಡ್ಡಿಯಾಗುವುದಿಲ್ಲವೆ? ಮೆಣ್ಣುಗಣ್ಣಿನ ದೋಷ ಉಂಟಾಗದೆ? ಎಂದು ನಾನು ಚಡಪಡಿಸುತ್ತೇನೆ.

ಈಗಿನ ಕೆಲ ನವಯುವತಿಯರು ತಮ್ಮ ದೀರ್ಘ ಕೇಶವನ್ನು ಮುಡಿಯಂತೆ ಕಟ್ಟಿಕೊಳ್ಳದೆಯೂ, ಜಡೆಯಂತೆ ಹೆಣೆದುಕೊಳ್ಳದೆಯೂ ಹಾಗೇ ಝಿಪರಿ ಬಿಟ್ಟು ಅಡ್ಡಾಡುವ ದನ್ನು ಕಾಣುತ್ತೇವೆ. ಝಿಪರಿ ಬಿಟ್ಟುಕೊಳ್ಳುವದೇ ಇವರ ಕೇಶವಿನ್ಯಾಸ ಇರಬಹುದು. ಇವರ ಕೂದಲು ಮೇಲಿಂದ ಮೇಲೆ ಅವರ ಮುಖಕಮಲವನ್ನು, ನಯನಾರವಿಂದವನ್ನು ಭ್ರಮರದಂತೆ ಮುತ್ತುತ್ತಿರುತ್ತದೆ (ಬಹುಶಃ ಅದನ್ನು ವೀಕ್ಷಿಸುವ ಯುವಕರು ಅಯ್ಯೋ ನನಗಾದರೂ ಅವಳ ತಲೆಗೂದಲಾಗುವ ಭಾಗ್ಯ ಸಿಗಬಾರದಿತ್ತೇ ಎಂದು ಹಲುಬುತ್ತಿರಲು ಸಾಕು). ಆಗೆಲ್ಲ ಅವರು ಪದೇ ಪದೇ ಕೂದಲನ್ನು ಹಿಂದಕ್ಕೆ ತಳ್ಳಿಕೊಳ್ಳುತ್ತಿರುತ್ತಾರೆ. ಆದರೆ ಅವರು ಕೈಬಿಡುವದೇ ತಡ ಅದು ಮೊಂಡುತನ ಮಾಡಿ ಮತ್ತೆ ಮುಂದೆ ಬಿದ್ದಿರುತ್ತದೆ. ತರುಣಿಯರು ಕೆಲಸ ಮಾಡುವುದಕ್ಕಿಂತ ಕೂದಲನ್ನು ಯಥಾಸ್ಥಿತಿಯಲ್ಲಿಡುವುದರಲ್ಲೇ ಕಾಲ ಕಳೆಯುತ್ತಾರೆ. ಇದೂ ಒಂದು ಫ್ಯಾಶನ್ನೆ? ಈ ಝಿಪರಿಯವರ ಅವಸ್ಥೆ ನೋಡಲಾರದೆ ನಾನೇ ಹೋಗಿ ಅವರ ಕೂದಲಿಗೆ ಗಂಟು ಬಿಗಿದೊ ಅಥವಾ ಜಡೆ ಹೆಣೆದೊ ಬರಬೇಕೆನ್ನುವಷ್ಟು ಬೇಚೈನಿಯಾಗುತ್ತದೆ.

ಕೂದಲು ಮೊಟಕುಗೊಳ್ಳುತ್ತ ಬಾಬ್‌ಕಟ್ ಬಂದದ್ದು ಈಗ ಇತಿಹಾಸ. ಆದರೆ ಈ ಬಾಬ್‌ಕಟ್ಟೂ ಎಷ್ಟೋ ಹೆಂಗಳೆಯರಿಗೆ ತೊಂದರೆದಾಯಕವೆನಿಸಿ ಅವರು ಬಾಯ್‌ಕಟ್ಟಿಗೆ ವಲಸೆ ಹೋಗುತ್ತಿದ್ದಾರೆ. ಇದನ್ನು ಕಂಡಾಗಲೆಲ್ಲ ನನಗೆ ಹೀಗೆನಿಸುತ್ತದೆ –ಯಾವಾಗ ಈ ವಿಷಯದಲ್ಲಿ ಸಾಂಪ್ರದಾಯಿಕ ಹಾಗೂ ಗ್ರಾಮೀಣ ಹಿನ್ನೆಲೆಯಿಂದ ಬಂದ ರಾಜಕಾರಣಿ ಮಾಯಾವತಿಯಂಥವರು ಇಂಥ ಕೇಶವಿನ್ಯಾಸಕ್ಕೆ ಶರಣಾಗಿದ್ದಾರೆ ಅಂದ ಮೇಲೆ ಬಾಯ್‌ಕಟ್ ಇನ್ನೂ ಪ್ರಚುರಗೊಳ್ಳಲು ಹೆಚ್ಚಿನ ಪ್ರೇರಣೆ ಬೇಕೆ?

ಅಂದಿನ ನಾರಿಯರು ಹಾಕಿಕೊಳ್ಳುತ್ತಿದ್ದರು
ನಾಗರಜಡೆ, ಕೇದಿಗೆಜಡೆ ಮೊಗ್ಗಿನ ಜಡೆ
ಸಿರಿಮುಡಿ ಪೂಮುಡಿ ಬಿಡಿಮುಡಿ ಜಡೆಮುಡಿ
ಇಂದಿನವರಿಗೆ ಬರಿ ಕ್ರಾಪೇ ಸಾಕು ಬಿಡಿ.

ಎಂದು ಹೇಳಬೇಕಾಗುತ್ತದೆ. ಸ್ತ್ರೀಸಹಜ ಸೌಂದರ್ಯವನ್ನು ಬಿಟ್ಟುಕೊಟ್ಟು ಗಂಡಿನಂತೆ ಕೂದಲು ಕತ್ತರಿಸಿಕೊಳ್ಳುವದರಲ್ಲಿ ಯಾವ ಸೌಂದರ್ಯವಿದೆ ಕಾಣೆ. ಒಮ್ಮೆ ಒಬ್ಬ ಪಟ್ಟಣಿಗ ಉದ್ದಜಡೆಗೆ ಮರುಳಾಗಿ ಹಳ್ಳೀಹುಡುಗಿಯನ್ನು ಮದುವೆಯಾದ. ಆಕೆ ಪಟ್ಟಣ ಸೇರಿದ ಮೇಲೆ ಇತರ ಯುವತಿಯರಂತೆ ತಾನೂ ಕೂದಲು ಮೊಟಕುಗೊಳಿಸುವ ಶೋಕಿಗೆ ಬಿದ್ದಳು.

"ನೋಡಿ, ನಾನೂ ಬಾಯ್‌ಕಟ್ ಮಾಡಿಸಿಕೊತೀನಿ" ಎಂದು ಗಂಡನಿಗೆ ಮನದ ಬಯಕೆಯನ್ನು ಅರುಹಿದಳು. ಆತನಾದರೋ ಕೇಶಪ್ರೇಮಿ. ಹೇಗೆ ಒಪ್ಪಿಯಾನು? "ನಿನ್ನ ಜಡೆ ನೋಡಿ ಮದುವೆಯಾದೆನೆ ಹೊರತು ನಿನ್ನ ಮೊಗ ನೋಡಿ ಅಲ್ಲ" ಎಂದು ನಿಷ್ಠುರವಾಗಿ ಹೇಳಿಬಿಟ್ಟ. ಕೋಪೋದ್ರಿಕ್ತಳಾದ ಆಕೆ "ಹಾಗಾದರೆ ಇಟ್ಟುಕೊಳ್ಳಿ ಇದನ್ನೇ" ಎಂದು ತನ್ನ ನೀಳಕೇಶವನ್ನು ನಿರ್ದಯದಿಂದ ಕರಕರನೆ ಕತ್ತರಿಸಿ ಅವನ ಕೈಗಿತ್ತುಬಿಟ್ಟಳು.

ಛೇ, ಬಾಯ್‌ಕಟ್ಟಿಗೆ ಒಂದು ಪಕಳೆ ದೇವರ ಹೂ ಮುಡಿಯುವಷ್ಟೂ ಭಾಗ್ಯವಿಲ್ಲವಲ್ಲ ಎಂದು ಖೇದವಾಗುತ್ತದೆ. ಹೂವಿನ ಜಡೆ ಹೆಣೆದುಕೊಳ್ಳುವದಂತೂ ದೂರದ ಮಾತೇ ಸರಿ. ಬಹುಶಃ ವನಿತೆಯರ ಕೇಶಕರ್ತನದ ಆಸೆಯನ್ನು ಪೂರೈಸಲೆಂದೇ ಇಂದು ಬ್ಯೂಟಿ ಪಾರ್ಲರುಗಳು ನಾಯಿಕೊಡೆಯಂತೆ ಎಲ್ಲೆಲ್ಲೂ ತಲೆಯೆತ್ತಿ ನಿಂತಿವೆ ಎಂದು ತೋರುತ್ತದೆ. ಸದ್ಯ ನಮ್ಮ ಹೆಣ್ಣುಮಕ್ಕಳು ಗಾಂಧೀಕಟ್ಟಿಗೆ ಇಳಿಯದಿದ್ದರೆ ಪುಣ್ಯ.

ನಾವು ಕಾಲೇಜು ವಿದ್ಯಾರ್ಥಿಯಾಗಿದ್ದಾಗಿನ ಮಾತಿದು. ಒಬ್ಬ ನೀಳಜಡೆಯ ಚೆಲುವೆ ಒಂದು ಮುಂಜಾವು ಬಾಬ್‌ಕಟ್ಟಿನಲ್ಲಿ ಕಾಲೇಜಿನಲ್ಲಿ ಪ್ರತ್ಯಕ್ಷಳಾದಳು. ಆ ವರ್ಷ ಆಕೆಗೆ ಫಿಶ್‌ಪಾಂಡ್ ಹೀಗೆ ಬಂದಿತ್ತು :

ಇಂದಾಯಿತು ಇಂದಿರಾ ಕಟ್
ನಾಳೆ ಆಗುವುದು ಗಾಂಧೀ ಕಟ್ಟೇ?
(ಅವು ಇಂದಿರಾ ಗಾಂಧೀ ಆಡಳಿತದ ದಿನಗಳಾಗಿದ್ದವು.)

ಶಬಾನಾ ಆಜ್‌ಮೀ 'ವಾಟರ್' ಸಿನೆಮಾ ಶೂಟಿಂಗದ ಸಲುವಾಗಿ ತನ್ನ ತಲೆ ಬೋಳಿಸಿಕೊಂಡ ನೆನಪು ಇನ್ನೂ ಹಸಿಹಸಿಯಾಗೇ ಇದೆ. ಸದ್ಯ ಆಕೆ ಮಾಡಿದಳು ಎಂದು ಅದೂ ಒಂದು ಫ್ಯಾಶನ್ ಆಗಿ ಆಚರಣೆಯಲ್ಲಿ ಬರಲಿಲ್ಲ ಅದೇ ಪುಣ್ಯ. ಹಾಗೇನಾದರೂ ಫ್ಯಾಶನ್ ಬಂದಿದ್ದರೆ ಎಲ್ಲ ಹುಡುಗಿಯರೂ ತಿರುಪತಿಗೆ ಕೇಶ ಮುಡಿಪು ಕೊಟ್ಟುಬರುವ ಆಂಧ್ರದ ಹೆಣ್ಣುಗಳಂತೆ ಕಾಣುತ್ತಿದ್ದರು.

ಗಾಂಧೀ ಕಟ್ ಎಂದಾಕ್ಷಣ ನನಗೊಂದು ಮೋಜಿನ ಪ್ರಸಂಗ ನೆನಪಿಗೆ ಬರುತ್ತದೆ. ನನ್ನ ಚಿಕ್ಕಪ್ಪನಿಗೆ ತಲೆಗೂದಲು ಬೆಳೆದಿತ್ತು. ಅಜ್ಜಿ ಅವನಿಗೆ "ಹೋಗೋ, ಹಜಾಮತಿ ಮಾಡಿಸಿಕೊಂಡು ಬಾ" ಎಂದು ನಾಪಿತನಲ್ಲಿಗೆ ಕಳಿಸಿದಳು. ಸಲೂನು ಹತ್ತಿರದಲ್ಲೇ ಇತ್ತು. ಚಿಕ್ಕಪ್ಪ ಹೋಗುವಾಗ "ಅಮ್ಮಾ ಹಜಾಮನಿಗೆ ಏನು ಹೇಳಲಿ? ಯಾವ ಕಟ್ ಮಾಡಿಸಿಕೊಳ್ಳಲಿ" ಎಂದು ಕೇಳಿದಾಗ "ಛಂದಾಗಿ ಗಾಂಧೀ ಕಟ್ ಮಾಡು ಅನ್ನು" ಎಂದು ಹೇಳಿ ಕಳಿಸಿದಳು. ಗಾಂಧೀ ಪ್ರಭಾವವು ದಟ್ಟವಾಗಿರುವ ದಿನಗಳವು. ಕ್ಷೌರ ಮುಗಿಸಿಕೊಂಡು ಅಳುತ್ತ ಮಗ ಹಿಂತಿರುಗಿದಾಗ ಆಕೆಗೂ ಆಘಾತವಾಯಿತು. ಮಗ ಅಳುವದನ್ನು ಕಂಡು ಅಲ್ಲ, ಮಗನ ತಲೆ ಕಂಡು. "ಯಾಕೋ, ತಲಿ ಪೂರಾ ಬೋಳಿಸಿಕೊಂಡು ಬಂದಿ ಖೋಡಿ?

ನಾನು, ನಿಮ್ಮಪ್ಪ ಇನ್ನೂ ಜೀವಂತ ಇದ್ದೇವಿ" ಎಂದು ಬೈದಾಗ "ಗಾಂಧೀ ಕಟ್ ಮಾಡಿಸಿಗೊ ಅಂತ ನೀನs ಹೇಳದಿ ಅಲಾ. ಗಾಂಧೀ ಕಟ್ ಅಂದ್ರ ಹಿಂಗs ಅಂತ ಹಜಾಮ ಹೇಳದಾ" ಎಂದು ಚಿಕ್ಕಪ್ಪ ಮತ್ತೆ ಅಳತೊಡಗಿದ. ಗಾಂಧೀ ಕಟ್ಟಿನ ವಿನ್ಯಾಸ ಅರಿಯದ ಅಜ್ಜಿಯ ಫಜೀತಿಯಾಗಿತ್ತು. ಎಲ್ಲರೂ ಅವಳನ್ನು ಬಯ್ಯುವವರೇ.

ಆಫ್ರಿಕಾದ ತರುಣಿಯರ ಕೇಶವಿನ್ಯಾಸವೇ ಒಂದು ವಿಶಿಷ್ಟ ಬಗೆ. ಟಗರಿನಂತಹ ತಲೆಗೂದಲನ್ನು ಸಣ್ಣಸಣ್ಣ ಭಾಗಗಳಾಗಿ ಮಾಡಿ ಸಾವಿರಾರು ಜಡೆ ಹೆಣೆದು ಕಟ್ಟಿಕೊಳ್ಳುವ ಶೈಲಿಗೆ ಯಾರಾದರೂ ಬೆರಗಾಗಬೇಕು. ಆ ಹೆರಳು ಹೆಣೆವವರ, ಹೆಣೆಸಿಕೊಳ್ಳುವವರ ಅಸೀಮ ಸಂಯಮವನ್ನು ನಾವು ಮೆಚ್ಚಿಕೊಳ್ಳಲೇಬೇಕು. ಒಮ್ಮೆ ಜಡೆ ಹೆಣೆಸಿಕೊಂಡರೆ ಕೆಲವು ತಿಂಗಳ ತನಕ ಮತ್ತೆ ಆ ಕೆಲಸಕ್ಕೆ ಕೈ ಹಚ್ಚಿದರೆ ಕೇಳಿ. ಕೂದಲಿಗೆ ವಿವಿಧ ಬಣ್ಣ ಬಳಿಯುವ ಹೊಚ್ಚ ಹೊಸ ಫ್ಯಾಶನ್ ಈಗ ಬಹಳ ಚಾಲ್ತಿಯಲ್ಲಿದೆ. ಅಂತೂ ಫ್ಯಾಶನ್‌ಪ್ರಿಯರ ಕೈಯಲ್ಲಿ ಕೂದಲು ಯಾವ ಯಾವ ಪರಿವರ್ತನೆಗೆ ಗುರಿಯಾಗಬೇಕೊ ದೇವರೇ ಬಲ್ಲ.

ಕೇಶಶೃಂಗಾರದಲ್ಲಿ ಪುರುಷರೂ ಹಿಂದೆ ಬಿದ್ದಿಲ್ಲ. ಪೂರ್ವಕಾಲದಿಂದಲೂ ನಮ್ಮ ಋಷಿಮುನಿಗಳು, ಸಂನ್ಯಾಸಿಗಳು, ಬಾಬಾಗಳು ಅರಣ್ಯದಂತೆ ಕೂದಲು ಬೆಳೆಸುವ ಪರಿಪಾಠವನ್ನಿಟ್ಟುಕೊಂಡಿದ್ದಾರೆ. ಋಷಿಗಳು ತಪೋನಿರತರಾದಾಗ ಅದೆಷ್ಟು ಪಕ್ಷಿಗಳು ಅವರ ತಲೆಯಲ್ಲಿ ಗೂಡುಕಟ್ಟಿ ಮೊಟ್ಟೆಯಿಟ್ಟು ಮರಿಮಾಡಿವೆಯೋ! ನಮ್ಮ ಜಟಾಜೂಟಧಾರಿ ಶಿವನಂತೂ ತಲೆಯಲ್ಲಿ ಗಂಗೆಯನ್ನೇ ಹೊತ್ತುಬಿಟ್ಟಿದ್ದಾನೆ. ನಾರದ ಮೊದಲಾದವರು ಶಿಖೆಯನ್ನು ಕಟ್ಟಿ ಮಾಲೆಗಳಿಂದ ಅದನ್ನು ಅಲಂಕರಿಸುತ್ತಿದ್ದರು. ಬಹುಶಃ ಇಂಥ 'ಶಿಖಾ'ಮಣಿಗಳಿಂದಲೇ 'ನಖಶಿಖಾಂತ' ಬೆವೆತ/ಕಂಪಿಸಿದ ಮುಂತಾದ ನುಡಿಗಟ್ಟುಗಳು ಉತ್ಪತ್ತಿಯಾಗಿರಬಹುದು. ಪುರೋಹಿತರು, ಆಚಾರ್ಯರು ನೆತ್ತಿಯ ಹಿಂಭಾಗದಲ್ಲಿ ಮಾತ್ರ ದುಂಡಾಕೃತಿಯಲ್ಲಿ ಕೂದಲು ಬೆಳೆಸಿ ಅದನ್ನು ಗಂಟು (ಚಂಡಿಕೆ) ಕಟ್ಟುತ್ತಿದ್ದರು ಹಾಗೂ ಉಳಿದ ಭಾಗವನ್ನು ಪೂರ್ತಿಯಾಗಿ ಬೋಳಿಸಿಕೊಳ್ಳುತ್ತಿದ್ದರು. ಇಂದಿಗೂ ತೀರ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಇದು ರೂಢಿಯಲ್ಲಿದೆ. ಇದನ್ನು ಚಾಣಕ್ಯ ಕಟ್ ಎನ್ನೋಣವೇ?

ನಮ್ಮ ರಾಜಮಹಾರಾಜರು ಬಾಬ್‌ಕಟ್ಟಿನಷ್ಟು ಉದ್ದದ ಕೂದಲು ಬೆಳೆಸಿರುತ್ತಿದ್ದರು. ಇಂದಿನ ನೃತ್ಯಗುರುಗಳೂ ಇದೇ ಮಾದರಿಯನ್ನು ಅನುಸರಿಸುತ್ತಾರೆ. ಆದರೆ ಬರಬರುತ್ತ ಗಂಡಸರು ಇಂದು ನಾವು ನೋಡುತ್ತಿರುವಂತಹ ಕೇಶವಿನ್ಯಾಸಕ್ಕೆ ತಿರುಗಿದರು.

ಬದಲಾವಣೆಯೇ ಪ್ರಕೃತಿಧರ್ಮ. ಇಂದಿನ ಹುಡುಗಿಯರಿಗೆ ಹುಡುಗರಂತೆ ಕಾಣುವ ಹವ್ಯಾಸವಿದ್ದರೆ ಗಂಡುಗಳಿಗೆ ಹೆಣ್ಣುಗಳಂತೆ ಕಾಣುವ ಬಯಕೆ. ಈ ಬಯಕೆ ಈಡೇರಿಸಿಕೊಳ್ಳು ವಲ್ಲಿ ಕೇಶವಿನ್ಯಾಸ ಪ್ರಧಾನ ಪಾತ್ರ ವಹಿಸಿದೆ. ಇಲ್ಲದಿದ್ದರೆ ಪಾಪ್ ಸಿಂಗರ್‌ಗಳಾದ ಮೈಕೆಲ್ ಜಾಕ್‌ಸನ್, ಹರಿಹರನ್, ಲೆಸ್ಲಿ ಲುಯಿಸ್, ಬಾಲಿ ಬ್ರಹ್ಮಭಟ್, ಸುಖಬೀರ್ ಮತ್ತು ಜಾಹೀರಾತು ಜಗತ್ತಿನ ರೂಪದರ್ಶಿಗಳು ಪೋನಿಯಂತೆ ಉದ್ದ ಕೂದಲು ಬಿಟ್ಟು ಪೋನಿಟೇಲ್ ಕಟ್ಟುತ್ತಿದ್ದರೆ? ಡೆವಿಡ್ ಬೇಕಮ್‌ನಿಗಂತೂ ಪೋನಿಯ ಮೇಲೊಂದು ಪೋನಿ ಕಟ್ಟುವ ಹುಚ್ಚು! (ಡೇವಿಡ್ ಬೇಕಮ್‌ನಿಗೆ ಪದೇ ಪದೇ ಬದಲಾಗುವ ಹೇರ್‌ಸ್ಟೈಲ್ ಬೇಕು. ಒಮ್ಮೆ ಪೋನಿಟೇಲ್ ಆದರೆ ಮತ್ತೊಮ್ಮೆ ಕೂದಲು ಇದೆಯೋ ಇಲ್ಲವೋ ಎನ್ನುವಷ್ಟು ಸಣ್ಣ)

ಒಂದು ಕಾಲಕ್ಕೆ ತಲೆ ಬೋಳಿಸುವದು ತಿರುಪತಿ ತಿಮ್ಮಪ್ಪನ ಮುಡಿಪಾಗಿದ್ದುದು ಇಲ್ಲವೆ ತಂದೆ-ತಾಯಿ ತೀರಿದಾಗ ಮಾಡಿಕೊಳ್ಳುವ ಶ್ರಾದ್ಧಕರ್ಮವಾದದ್ದು ಈಗ ಒಂದು ಫ್ಯಾಶನ್ ಆಗಿ ರೂಪುಗೊಂಡಿದೆ. ಇಲ್ಲದಿದ್ದರೆ ಆ್ಯಂಡ್ರಿ ಅಗಾಸೆಯಂಥ ವಿಶ್ವದ ಅಗ್ರಗಣ್ಯ ಟೆನಿಸ್ ಆಟಗಾರ ಕೇಶಮುಂಡನ ಮಾಡಿಸಿಕೊಳ್ಳುತ್ತಿದ್ದನೆ? ಬೆಕಮ್ ಕಟ್ ಮಾಡಿಸಿಕೊಂಡು ಬೋಳು ತಲೆಯ ಮೇಲೆ ರಾಷ್ಟ್ರಧ್ವಜವನ್ನು ಚಿತ್ರಿಸಿಕೊಂಡು ಅಂತಾರಾಷ್ಟ್ರೀಯ ಕ್ರಿಕೆಟ್ ಟೂರ್ನಮೆಂಟಿನಲ್ಲಿ ತಮ್ಮ ದೇಶಾಭಿಮಾನವನ್ನು ಮೆರೆಯಲು ಇದೊಂದು ಸದವಕಾಶವನ್ನು ಕಲ್ಪಿಸಿಕೊಟ್ಟಿದೆ.

ಬೋಳು ತಲೆಯ ಫ್ಯಾಶನ್ ಬಂದಿರುವದರಿಂದ ನನ್ನ ಪತಿಯಂಥ ಬೊಕ್ಕ ತಲೆಯವರಿಗೆ ದುಃಖಿಸುವ ಪ್ರಮೇಯವಿಲ್ಲ. ಆದರೆ One man's food is another man's poison ಎನ್ನುವಂತೆ ಹಿಪ್ಪಿಕಟ್, ಸಂಜಯ ದತ್ ಕಟ್ ಬಂದಾಗ ಕ್ಷೌರಿಕರ ಹೊಟ್ಟೆ ಮೇಲೆ ಕಾಲು ಹಾಕಿದಂತಾದದ್ದು ಈಗ ಬೋಳು ತಲೆಯ ಫ್ಯಾಶನ್ನಿನಿಂದಾಗಿ ನಾಪಿತರಿಗೇನೋ ಕೈತುಂಬ ಕೆಲಸ. ಆದರೆ ಶಾಂಪೂ ಹಾಗೂ ಹೇರ್ ಆಯಿಲ್ ಕಂಪನಿಯವರ ಆದಾಯಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗಿದೆ.

ವಿಶ್ವಕಪ್ ಫುಟ್‌ಬಾಲ್ ಗೆದ್ದ ಬ್ರಾಝಿಲ್ ತಂಡದ ನಾಯಕ ರೊನಾಲ್ಡೋನ ಕೇಶವಿನ್ಯಾಸ ಮಗುವಿನ ಜಾವಳ ಬಿಟ್ಟಂತೆ ಇದ್ದರೆ ಪ್ರಪಂಚದ ಅಗ್ರಮಾನ್ಯ ಟೆನಿಸ್ ಆಟಗಾರ್ತಿ ವಿಲಿಯಮ್ಸ್ ಸಹೋದರಿಯರಾದ ಸರೀನಾ ಹಾಗು ವೀನಸ್‌ರು ವಿಚಿತ್ರ ಕೇಶವಿನ್ಯಾಸದಿಂದಲೂ ಜನರನ್ನು ತಮ್ಮತ್ತ ಸೆಳೆದುಕೊಳ್ಳುತ್ತಾರೆ. ಇವರ ತಲೆಯಲ್ಲಿ ಒಂದು ಸಾಲು ಕೂದಲು ಇನ್ನೊಂದು ಸಾಲು ಬೋಳು— ಹೊಲದಲ್ಲಿ ಸಸಿ ಎದ್ದಾಗ ಒಂದು ಸಾಲು ಹಸಿರು, ಇನ್ನೊಂದು ಸಾಲು ಭೂಮಿ ಕಾಣುತ್ತಿರುತ್ತದಲ್ಲ ಹಾಗೆ. ಈಗ ಈ ವಿನ್ಯಾಸದಿಂದ ಸಾಕಷ್ಟು ಆಟಗಾರರು, ಅವರ ಅಸಂಖ್ಯ ಅಭಿಮಾನಿಗಳು, ಟಿ.ವಿ. ಕಲಾವಿದರು ಪ್ರಭಾವಕ್ಕೊಳಗಾಗಿದ್ದಾರೆ. ಅಪಾಚಿ ಇಂಡಿಯನ್ನನ ತಲೆಗೂದಲನ್ನು ನೋಡಿಯೇ ಆನಂದಿಸಬೇಕು.

ಕಳೆ ವರ್ಷ ಆಸ್ಟ್ರೇಲಿಯಾ ತಂಡವು ೧೧-೧೨ ಟೆಸ್ಟ್ ಮ್ಯಾಚ್‌ಗಳನ್ನು ಆಡಿ ಸತತವಾಗಿ ಗೆದ್ದು ದಾಖಲೆ ಮಾಡಿತ್ತು. ಆದರೆ ಭಾರತದ ಜೊತೆ ಸೋತಾಗ ನಿರಾಶೆ-ಹತಾಶೆ ಹಾಗೂ ಅವಮಾನಗಳಿಂದಾಗಿ ಎಲ್ಲ ೧೧ ಆಟಗಾರರೂ ತಲೆ ನುಣ್ಣಗೆ ಬೋಳಿಸಿಕೊಂಡರಂತೆ.

ಬೈಬಲ್ಲಿನ ಓಲ್ಡ್ ಟೆಸ್ಟಾಮೆಂಟ್‌ನಲ್ಲಿ ಬರುವ 'ಸ್ಯಾಮ್‌ಸನ್ ಆ್ಯಂಡ್ ಡಿಲೈಲಾ' ಎಂಬ ಕಥೆಯಲ್ಲಿ ಸ್ಯಾಮ್‌ಸನ್ನಿನ ಶಕ್ತಿ ಅವನ ತಲೆಗೂದಲಿನಲ್ಲಿತ್ತಂತೆ. ಅದೇ ರೀತಿ ಒಂದು ಕಾಲದಲ್ಲಿ ವಿಖ್ಯಾತವಾದ ಕಮಲಾ ಸರ್ಕಸ್ಸಿನಲ್ಲಿ ಕಮಲಾ ಎಂಬಾಕೆ ತನ್ನ ತಲೆಗೂದಲಿನಿಂದ ಕಾರನ್ನು ಜಗ್ಗುತ್ತಿದ್ದಳಂತೆ. ತಲೆಗೂದಲಿನ ಇಂಥ ಶಕ್ತಿಪ್ರದರ್ಶನ ಇಂದಿಗೂ ಹಳ್ಳಿಗಳಲ್ಲಿ ಅಪರೂಪಕ್ಕೊಮ್ಮೆ ಕಾಣಿಸಿಕೊಳ್ಳುತ್ತದೆ. ಆದರೆ ಬಾಯ್‌ಕಟ್, ಕ್ರ್ಯೂ(crew)ಕಟ್ ಹಾಗೂ ಗಾಂಧೀ ಕಟ್‌ಗಳಲ್ಲಿ ಇಂಥ ಶಕ್ತಿಪ್ರದರ್ಶನಕ್ಕೆಲ್ಲಿ ಆಸ್ಪದ?

ಭಾರತದಲ್ಲಿ ಧರ್ಮದ ಹಾಗೂ ದೇವರ ಹೆಸರಿನಲ್ಲಿ ಕೂದಲು ಬೆಳೆಸುವುದು ಯಾ ಬೋಳಿಸುವುದು ಕೇಶಕ್ಕಿರುವ ಮಹತ್ವವನ್ನು ಸಾರಿ ಹೇಳುತ್ತದೆ. ರಾಣಿಯರು

ತಲೆಗೂದಲಿನಿಂದಲೂ ತಮ್ಮ ಭಾವನೆಗಳನ್ನು ವ್ಯಕ್ತಗೊಳಿಸುತ್ತಿದ್ದುದನ್ನು ನಾವು ಕೇಳಿದ್ದೇವೆ. ಪ್ರಸನ್ನಚಿತ್ತದಲ್ಲಿದ್ದಾಗ ವಿವಿಧ ಕೇಶಾಲಂಕಾರವನ್ನು ಮಾಡಿಕೊಳ್ಳುತ್ತಿದ್ದ ಅವರು ಕೋಪಾವಿಷ್ಟರಾದಾಗ ಕೂದಲು ಹರಡಿಕೊಳ್ಳುತ್ತಿದ್ದರು. ದ್ರೌಪದಿ ಹಾಗೂ ಚಾಣಕ್ಯರು ಪ್ರತಿಜ್ಞೆಯ ಪ್ರತೀಕವಾಗಿ ತಮ್ಮ ಬಿಚ್ಚಿದ ಮುಡಿ ಹಾಗೂ ಚಂಡಿಕೆಯನ್ನು ಪ್ರತಿಜ್ಞೆ ಈಡೇರುವ ವರೆಗೂ ಕಟ್ಟಿಕೊಳ್ಳಲಿಲ್ಲ. ಪರೀಕ್ಷೆಯ ಫಲಿತಾಂಶ ಬರುವ ವರೆಗೂ ಕೇಶಕರ್ತನ ಮಾಡಿಸಿಕೊಳ್ಳುವುದಿಲ್ಲವೆಂದು ಕೆಲ ಕಾಲೇಜ್ ಹುಡುಗರು ಪಣ ತೊಟ್ಟಿರುತ್ತಾರೆ. ಇಲ್ಲವೆ ಹರಕೆ ಹೊತ್ತಿರುತ್ತಾರೆ. ಪಂಕ್ ಸ್ಟೈಲ್ ಇದು ಉಡಾಳ ಹುಡುಗರಿಗಾಗಿಯೇ ಮೀಸಲಾದ ವಿನ್ಯಾಸ.

ಇದೆಲ್ಲ ನೋಡಿದಾಗ 'Face is the index of mind' ಎನ್ನುವಂತೆ ನನಗೆ ಏಕೋ 'Hairstyle can also be the index of mind' ಎಂಬ ಸತ್ಯ ಗೋಚರಿಸುತ್ತದೆ. ಆದಕಾರಣ ನಾನು ಈ ಬಗ್ಗೆ ಸಂಶೋಧನೆ ಮಾಡುವ ಆಲೋಚನೆಯಲ್ಲಿದ್ದೇನೆ. ಆದರೆ ಇದು ಬಹಳ ಖರ್ಚಿನ ಬಾಬತ್ತು.

ನಿಮ್ಮಲ್ಲಿ ಯಾರಾದರೂ ನನ್ನ ಸಂಶೋಧನೆಯನ್ನು ಪ್ರಾಯೋಜಿಸುತ್ತೀರಾ? •

● ●

ಶೈಲಾ ಛಬ್ಬಿ : ೧೨, ಮೇಘನಂದನ, ತೇಜಸ್ವಿನಗರ, ಧಾರವಾಡ - ೫೮೦ ೦೦೨

ಹೇ! ರಕ್ಷಕ

ನಾರಾಯಣ ಕಂಗಿಲ

ಕಾಫ್ಕಾನ ಸಣ್ಣಕತೆ ಆಧರಿತ ನಾಟಕ

ಪಾತ್ರಗಳು : ರಕ್ಷಕ, ರೈತ, ಕಕ್ಷಿದಾರರು

ದೃಶ್ಯ : ೧

ರಂಗ ಸೂಚನೆ :

೧. ನ್ಯಾಯದೇಗುಲದ ಬೃಹತ್ ಹೆಬ್ಬಾಗಿಲು. ಅದರ ಎದುರು ನಿರಂತರ ನಿಂತಿರುವ ರಕ್ಷಕ ಭಟ. ಕೈಯಲ್ಲಿ ತನ್ನ ಎರಡು ಪಾಲಷ್ಟು ಯಾ ಬಾಗಿಲಿನಷ್ಟು ಎತ್ತರಕ್ಕೆ ಅಧಿಕಾರವನ್ನು ಸೂಚಿಸುವ ಈಟಿ ಕೈಯಲ್ಲಿ ಹಿಡಿದಿರುವನು. ಮುಖದ ಮೇಲಿನ ಬೃಹತ್ ಮೀಸೆ ಆತನ ಅಧಿಕಾರದ ಠೀವಿಯನ್ನು ಸೂಚಿವಂತಿದೆ.

೨. ಆಗಾಗ ಕಾಲದ, ವರ್ಷಗಳ ಬದಲಾವಣೆಯ ಸೂಚನೆಯಾಗಿ ಬೇರೆ ಬೇರೆ ಮತ ಧರ್ಮಗಳ ಪ್ರಾರ್ಥನೆ, ಸುಪ್ರಭಾತ, ಸಹಸ್ರನಾಮಾವಳಿ ಇತ್ಯಾದಿ ಕೇಳಿ ಬರುವುದು. ಬೇರೆ ಬೇರೆ ಸದ್ದುಗಳು (ಹಕ್ಕಿಗಳು, ಗಾಳಿ, ಮಿಂಚು, ಸಿಡಿಲು, ಬಸ್ಸು, ರೈಲು, ವಿಮಾನ, ಸೈರನ್, ಹೊಸವರ್ಷದ ಸಂಗೀತ ಇತ್ಯಾದಿ) ಹಿನ್ನೆಲೆಯಲ್ಲಿ ಬರುತ್ತವೆ. ಈ ಸದ್ದುಗಳು ಇದೇ ಕ್ರಮದಲ್ಲಿ ನಾಟಕ ಬೆಳೆಯುತ್ತ ಹೋದಂತೆ ಇದ್ದರೆ ಒಳ್ಳೆಯದು. ಅದು ಬಿಟ್ಟರೆ ನಾಟಕ ಗಂಭೀರ ಮೌನದಲ್ಲಿ ಸಾಗುತ್ತದೆ. ಮೌನದ ಕ್ರೂರ ವ್ಯಂಗ್ಯವಾಗಿ ಬೇರೆ ಬೇರೆ ಸದ್ದುಗಳು ಹುಟ್ಟುತ್ತವೆ. ಪ್ರೇಕ್ಷಕರಿಗೆ ಮೌನದ ಅಗತ್ಯ/ಅರ್ಥ ಆಗಬೇಕು. ನಾಟಕ ದೀರ್ಘ ಮೌನವನ್ನು ಉಪಯೋಗಿಸಿಕೊಳ್ಳುವುದರಿಂದ ಮೌನವೂ ಇಲ್ಲಿ ಪ್ರಮುಖ ಪಾತ್ರವಾಗಿದೆ.

೩. ಇಡೀ ನಾಟಕದಲ್ಲಿ ನಿರಂತರ ಗಡಿಯಾರದ ಟಿಕ್ ಟಿಕ್ ಸದ್ದು ಮತ್ತು ಆಗಾಗ ಹೊಡೆಯುತ್ತಿರುವ ಡಣ್ ಡಣ್ ಶಬ್ದ ಕಾಲದ ಅನಂತತೆ ಮತ್ತು ಸಂಕೀರ್ಣತೆಯನ್ನು ಮನದಟ್ಟು ಮಾಡುವಂತಿರಬೇಕು.

೪. ನಾಟಕದಲ್ಲಿ ಆಗಾಗ ರೈತನು ಸಮಯ ಕಳೆಯಲಿಕ್ಕಾಗಿ ಅಸಂಗತವಾದ ನಡೆವಳಿಕೆಗಳನ್ನು ಮಾಡುವನು. (ಉದಾ : ಬೀಡಿ, ನಶ್ಯ ಸೇದುವನು, ನಿದ್ದೆ ತೂಗುವನು, ಆಕಳಿಸುವನು, ಮಲಗುವನು, ಏಳುವನು, ಕಿವಿಗೆ ಕಡ್ಡಿ ಹಾಕುವನು.)

೫. ಕಕ್ಷಿದಾರನು ಹೆಬ್ಬಾಗಿಲ ಹೊರಬದಿಯಿಂದ ಒಳಗೆ ಹೊರಗೆ ಹೋಗಿ ಬರುತ್ತಿರುವುದು ಇಲ್ಲಿಯ ವೈರುದ್ಧ್ಯವನ್ನು ಸೂಚಿಸುತ್ತದೆ.

೬. ರೈತನು ತನ್ನೊಡನೆ ದೊಡ್ಡ ಸುರುಳಿ ಸುತ್ತಿದ ಹಗ್ಗ, ಆಂಡ್ರಕ್ಸ್ ಎಂದು ಬರೆದ ವಿಷದ ಡಬ್ಬ, ಇತರ ಪಾತ್ರೆ ಸಾಮಾನುಗಳು ತನ್ನೊಡನೆ ಹೊತ್ತು ಬರುವನು.

೭. ನಾಟಕದ ಆರಂಭದಲ್ಲಿ ರಕ್ಷಕ ಈಟಿ ಹಿಡಿದು ಗಂಭೀರವಾಗಿ ನಿಂತಿರುವನು. ರೈತನು ಪ್ರವೇಶಿಸಿ ಹೊತ್ತು ತಂದ ವಸ್ತುಗಳನ್ನು ಪ್ರೇಕ್ಷಕರಿಗೆ ಸ್ಪಷ್ಟ ಕಾಣಿಸುವಂತೆ ರಂಗದ ಒಂದು ಭಾಗದಲ್ಲಿ ಇರಿಸುವನು.

ರೈತ ನ್ಯಾಯದೇಗುಲದ ಬಾಗಿಲ ಹತ್ತಿರ ಬಂದು ಸ್ವಲ್ಪ ಸ್ವಲ್ಪವೇ ಇಣುಕುವನು.

ರಕ್ಷಕ : (ರೈತನನ್ನು ಉದ್ದೇಶಿಸಿ) ಅದ್ಯಾಕೆ ಹಂಗೆ ಇಣುಕುತ್ತಾ ಇದ್ದೀಯಾ? ಏನು ಬೇಕಾಗಿತ್ತು!

ರೈತ : (ಹೆದರಿದವನಂತೆ ತಲೆ, ಮೈಯೆಲ್ಲಾ ಕೆರೆಯುತ್ತಾ) ಸ್ವಲ್ಪ ಒಳಗೆ ಹೋಗ್ಬೇಕಾಗಿತ್ತು.

ರಕ್ಷಕ : ಈಗ ಅಸಾಧ್ಯ.

ರೈತ : ಅಲ್ಲಪ್ಪ, ಬೆಳಗ್ಗಿಂದ ಕಾಯ್ತಾ ಇದ್ದೀನಿ.

ರಕ್ಷಕ : ಅದಕ್ಕೇನಂತೆ, ಈಗಂತು ಸಾಧ್ಯವಿಲ್ಲ.

ರೈತ : ಅಂದ್ರೆ ಆಮೇಲಾದ್ರು ಬಿಡ್ತೀಯೇನು?

ರಕ್ಷಕ : ಆಮೇಲೆ ನೋಡೋಣ.

ರೈತ ಪುನಃ ದೇಹವನ್ನು ಪೂರ್ತಿ ಕುಗ್ಗಿಸಿ ಬಗ್ಗಿ ಬಗ್ಗಿ ಒಳಗಿನ ದೃಶ್ಯ ಏನಾದ್ರು ಕಾಣಿಸುವುದೋ ಎಂದು ಹಣಿಕಿ ನೋಡುವನು. ರೈತ ಕುತೂಹಲದಿಂದ ಇಣುಕುವುದನ್ನು ನೋಡಿ ರಕ್ಷಕನಿಗೆ ತಮಾಷೆ ಎನಿಸುವುದು. ರೈತನನ್ನು ತುಂಬಾ ಹೊತ್ತು ನೋಡುತ್ತಿದ್ದು ಕೊನೆಗೆ—

ರಕ್ಷಕ : ಒಳಗೆ ಏನಿದೆಯಂತ ಹಾಗೆ ಇಣುಕ್ತಾ ಇದ್ದೀಯಾ? ಈ ಬಾಗಿಲಲ್ಲಿ ನನ್ನ ಆಜ್ಞೆಯೇ ನಡೆಯೋದು. ನಾನು ಬಿಟ್ಟರೆ ಮಾತ್ರ ನಿನಗೆ ಒಳಗಿನ ವರೆಗೆ ಪ್ರವೇಶ. ಗೊತ್ತೇನು.

ರೈತ : (ಆಶ್ಚರ್ಯದಿಂದ) ಅಷ್ಟು ಅಧಿಕಾರಾನ ನಿನಗೆ?

ರಕ್ಷಕ : ಮತ್ತೇನೂಂತ ತಿಳಿದಿದ್ದೀಯ? (ಅತಿಶಯೋಕ್ತಿಯಲ್ಲಿ ಮಾತನಾಡುವನು) ಇಲ್ಲಿ ಹಜಾರದೊಳಗೆ ಹಜಾರ ಒಂದೊಂದು ಹಜಾರಕ್ಕೆ ಒಂದೊಂದು ಬಾಗಿಲು. ಒಂದೊಂದು ಬಾಗಿಲಿಗೂ ಒಬ್ಬ ರಕ್ಷಕ.

ರೈತ : ಅ... ವ್ವ... ವ್ವ... ವ್ವ... (ಎಂದು ಬಾಯಿ ಬಡಿಯುವನು.)

ರಕ್ಷಕ : ಯಾಕೆ ಹಾಗೆ ಬೊಬ್ಬೆ ಹೊಡೆಯುತ್ತಿದ್ದೀಯ?

ರೈತ : ಒಳಗೆ ಒಂದೊಂದು ಬಾಗಿಲಿಗೆ ಒಬ್ಬೊಬ್ಬ ರಕ್ಕಸ ಅಂದ್ಯಲ್ಲ ಅದಕ್ಕೆ.

ರಕ್ಷಕ : (ಕೋಪದಿಂದ) ಏನಂದೆ?

ರೈತ : ಒಳಗೆ ಒಬ್ಬೊಬ್ಬ... ರಕ್ಕಸ.

ರಕ್ಷಕ : ನೀನು ಹೀಗೆ ನೋಡಿದರೆ ಅವರು ರಕ್ಕಸರೇ ಆಗ್ತಾರೆ. ಕೇಳಿಲ್ಲಿ. ಒಬ್ಬನಿಗಿಂತ ಒಬ್ಬ ಭೀಕರ! (ವ್ಯಂಗ್ಯದಿಂದ) ರಕ್ಷಕ!

ರೈತ : ರಕ್ಷಕ! (ವ್ಯಂಗ್ಯವನ್ನು ಪುನಃ ಉತ್ಪ್ರೇಕ್ಷೆಗೊಳಿಸಿ ಮಾತನಾಡುವನು.)

ರೈತ : (ಹೆದರುತ್ತ) ಹಂಗಂತೀಯಾ, ನಾನಿಲ್ಲೇ ಕೂತಿರ್ತೇನೆ. ನೀನು ಹೇಳಿದಾಗ ಒಳ ಹೋಗ್ತೇನೆ.

ರಕ್ಷಕ : ಆಸನ ತೋರಿಸಿ ಹ್ಞೂ ಎಂದು ಕುಳಿತುಕೊಳ್ಳುವಂತೆ ಸೂಚಿಸುವನು.

ರೈತನು ಕುಳಿತುಕೊಳ್ಳುವನು. ಬೆಳಕು ಮಿತವಾಗಿರುತ್ತದೆ. ರೈತನು ರಕ್ಷಕನಿಗೆ ವಶೀಲಿಗಾಗಿ ತಾನು ತಂದ ವಸ್ತುಗಳಲ್ಲಿ ಕೆಲವನ್ನು ಕೊಡುತ್ತಿರುವನು ಮತ್ತು ಆಗಾಗ ಅಸಂಗತ ನಡೆವಳಿಕೆಗಳನ್ನು ಸಮಯ ಕಳೆಯಲು ಮಾಡುತ್ತಿರುವನು. ಆಗಾಗ ಆಕಳಿಸುವನು. ಹಲವಾರು ಸದ್ದುಗಳು ಮತ್ತೆ ಮೌನ. ಮೌನದೆಡೆಯಿಂದ ಟಿಕ್ ಟಿಕ್ ಸದ್ದು. ರೈತನು ಸರದಿಗಾಗಿ ಕಾಯುತ್ತಿರುವಾಗ ದೀರ್ಘ ಮೌನ. ಹೆಬ್ಬಾಗಿಲ ಮೇಲೆ ಇರುವ ಗಡಿಯಾರ ನೋಡುವನು. ಅದು ಚಲಿಸದೆ ನಿಂತಿದೆ. ಆಕಾಶ ನೋಡುವನು. ರೈತನ ಚಲನೆ ಬಹಳ ನಿಧಾನಗತಿಯಲ್ಲಿರುತ್ತದೆ. ನಂತರ ಮೆಲ್ಲನೆ ಎದ್ದು ರಕ್ಷಕನನ್ನು ಸಮೀಪಿಸಿ–

ರೈತ : ನಾನು ಬಂದು ಎರಡು ತಿಂಗಳು ಕಳೆದಿದೆ. (ರಕ್ಷಕನು ಕೇಳಿಸದವನಂತೆ ಗಂಭೀರ ವಾಗಿರುವನು) (ಪುನಃ) ಈ ದಿನ ಒಳಗೆ ಹೋಗಬಹುದೆ?

ರಕ್ಷಕ : ಈ ದಿನ ಸಾಧ್ಯವಿಲ್ಲ.

ರೈತ : ಹೇಗಾದರೂ ಮಾಡಪ್ಪ. (ಅತ್ತು ಗೋಗರೆಯುವನು.)

ರಕ್ಷಕ : ಸಾಧ್ಯವಿಲ್ಲ.

ರೈತ : ಸ್ವಲ್ಪ ಕರುಣೆ ತೋರಿಸಯ್ಯ. ಅಯ್ಯಾ ಅಯ್ಯಾ... (ಎಂದು ಯಾಚಿಸುವನು.)

ರಕ್ಷಕ : ನೀನು ಕಾಯಬೇಕಾಗುತ್ತದೆ.

ರೈತ : (ಜಗಳ ಆಡುತ್ತ) ಯಾಕೆ ಸಾಧ್ಯವಿಲ್ಲ? ಎರಡು ತಿಂಗಳೆಂದು ನಾನು ಸುಳ್ಳು ಹೇಳಿದೆ. ಈಗ ನಾಲ್ಕು ತಿಂಗಳೇ ಕಳೆದಿದೆ. ನಾನು ತಂದ ತಿಂಡಿಯೆಲ್ಲಾ ಮುಗಿದಿದೆ. ಅದರಲ್ಲಿ ನೀನು ಬೇರೆ ಪಾಲು ತಗೊಂಡಿದ್ದೀಯ.

ರಕ್ಷಕ : ನಾನು ತಗೊಂಡಿದೀನಾ?

ರೈತ : ಮತ್ತಿನ್ನೇನು? ನೀನು ದಿನಾ ತಿಂದು ತೇಗ್ತಾ ಇದ್ದೀಯ. ನಾನು ನಿನ್ನ ಮುಖ ನೋಡ್ತಾ ಇದ್ದೆ.

ರಕ್ಷಕ : ನೀನೇ ಕೊಟ್ಟೆ.

ರೈತ : ನೀ ತಗೊಂಡಿಲ್ವ.

ರಕ್ಷಕ : ನಿನಗೆ ಬೇಸರಾಗ್ಬಾರದೂ ಎಂದು ತಗೊಂಡೆ ಅಷ್ಟೆ.

ರೈತ : ಹೇಗೂ ತಿಂದಿದೀಯಲ್ಲ.

ರಕ್ಷಕ : ತಿಂದ್ರೇನಂತೆ!? ಇಲ್ಲಿ ನಾನೊಬ್ನೇ ಅಲ್ವಲ್ಲ ತಿಂದದ್ದು.

ರೈತ : ಮತ್ತೆ!

ರಕ್ಷಕ : ಎಲ್ಲರೂ.

ರೈತ : ಆ... (ಎಂದು ಆಶ್ಚರ್ಯಗೊಂಡು ಬಾಯಿ ಬಿಡುವನು. ಸ್ವಲ್ಪ ಹೊತ್ತು ಬಿಟ್ಟ ಬಾಯಿ ಬಿಟ್ಟಂತೆಯೇ ಇರುವುದು.)

ರೈತ : ಮತ್ತೆ ಒಳಗೆ ಬಿಡಯ್ಯಾ.

ರಕ್ಷಕ : ನೀನು ಎಂತಹ ಮನುಷ್ಯನಯ್ಯ? ನೀನು ಎಲ್ಲಿಯವನು?

ರೈತ : ಪಕ್ಕದ ಹಳ್ಳಿಯವನು.

ರಕ್ಷಕ : ಇಲ್ಲಿಗೆ ಯಾಕೆ ಬಂದೆ?

ರೈತ : ನನ್ನ ಜಮೀನಿನ ಅರ್ಜಿಯ ವಿಲೇವಾರಿಗೆ.

ರಕ್ಷಕ : (ಆತನನ್ನು ಅರ್ಧಕ್ಕೆ ತಡೆದು) ನಿನ್ನನ್ನು ಒಳಗೆ ಬಿಡೋದಕ್ಕೆ ಸಾಧ್ಯವೇ ಇಲ್ಲ. (ಖಡಾಖಂಡಿತವಾಗಿ ಹೇಳುವನು.)

ರೈತನು ರಕ್ಷಕನಿಗೆ ವಶೀಲಿಗಾಗಿ ತಾನು ತಂದ ಇನ್ನು ಉಳಿದ ವಸ್ತುಗಳನ್ನು ಕೊಟ್ಟಾಗ ಸಂತೋಷದಿಂದ ಸ್ವೀಕರಿಸುವನು. ಆನಂತರ–

ರಕ್ಷಕ : (ವ್ಯಂಗ್ಯದಿಂದ) ನೋಡಪ್ಪ. ಇದೆಲ್ಲ ತಗೊಂಡೆನಲ್ಲ ನೀನು ಬೇಜಾರು ಮಾಡ್ತೀಯಾ ಅಂತ ತೆಗೊಳ್ತಾ ಇದ್ದೀನಿ ಅಷ್ಟೆ. (ಮತ್ತೆ ಗಂಭೀರನಾಗುವನು. ಉಳಿದ ಸಾಮಾನುಗಳು ಹಗ್ಗ ಮತ್ತು ವಿಷ. ಅವುಗಳನ್ನು ನೋಡಿ) ಅಲ್ಲಿ ಉಳಿದಿವೆಯಲ್ಲ. ಅವು ಹಸಿವೆಗಾಗಿ ಇರೋದೇ.

ರೈತ : ಹಸಿವೆಗೆ ಬದಲಾಗಿ.

ರಕ್ಷಕ : ಬದಲಾಗಿ.

ರೈತ : (ಹಗ್ಗ ಹಾಕಿಕೊಳ್ಳುವಂತೆ ನಟಿಸಿ) ಇದಕ್ಕೆ... (ಎನ್ನುವನು.)

ರಕ್ಷಕ : ಛೆ... ಛೆ... ಛೆ... ಹೇಗೂ ಇಷ್ಟು ವರ್ಷ ಕಾದೆಯಲ್ಲ. ಇನ್ನು ಸ್ವಲ್ಪ ಸಮಯ ಕಾಯಿ ಅಷ್ಟೆ. (ಪುನಃ ತನ್ನ ಗಂಭೀರ ಮುಖಮುದ್ರೆಯಲ್ಲಿ ನಿಲ್ಲುವನು.)

ರೈತ : (ತನ್ನಷ್ಟಕ್ಕೆ, ರಕ್ಷಕನಿಗೂ ಕೇಳುವಂತೆ ದುಃಖದಿಂದ) ಇನ್ನೆಷ್ಟು ವರ್ಷವೆಂದು ಕಾಯಲಿ. ಮಕ್ಕಳೂ ಮುದುಕ ಆಗಲಿಕ್ಕೆ ಹತ್ಯಾರೆ!

ರೈತನು ಸಮಯ ಕಳೆಯಲಿಕ್ಕಾಗಿ ಅಸಂಗತವಾದ ನಡವಳಿಕೆಗಳನ್ನು ಮಾಡುವನು. ಬೀಡಿ, ನಶ್ಯ ಸೇದುವನು, ನಿದ್ದೆ ತೂಗುವನು, ಆಕಳಿಸುವನು, ಮಲಗುವನು, ಏಳುವನು, ಕಿವಿಗೆ ಕಡ್ಡಿ ಹಾಕುವನು, ಸೊಳ್ಳೆಗಳನ್ನು, ನೊಣಗಳನ್ನು ಓಡಿಸುವನು. ದಿನಗಳು ತಿಂಗಳುಗಳು ವರ್ಷಗಳಾಗಿ ಕಳೆಯುತ್ತವೆ. ಆದರೆ ರಕ್ಷಕ ಕಲ್ಲಿನಂತೆ ಸ್ಥಿರವಾಗಿರುವನು. ದಿನದಿಂದ ದಿನಕ್ಕೆ ರೈತನ ವಯಸ್ಸು ಹೆಚ್ಚಾಗುತ್ತಾ ಮಾತುಗಳು ಸ್ವಗತವಾಗುತ್ತಾ ಹೋಗುತ್ತವೆ. ಒಮ್ಮೆ ರಕ್ಷಕನ ಮೈಮೇಲೆ ಕುಳಿತ ಸೊಳ್ಳೆಯನ್ನು ನೋಡಿ ಅಣಕಿಸಿ ಅದನ್ನು ಹಿಂಬಾಲಿಸಿ ಹಿಡಿದು ನಾಟಕೀಯವಾಗಿ ಅಭಿನಯಿಸುತ್ತ.

ರೈತ : ಎಲವೋ ಸೊಳ್ಳೆಯೆ, ಒಮ್ಮೆ ಈತನ ಕಿವಿಯಲ್ಲಿ ಗುಣಗುಣಿಸಿ ನನ್ನ ಅಹವಾಲು ಹೇಳಯ್ಯಾ, ಹೇಳಿ ಈತನ ಮನಸ್ಸು ಮೃದುಗೊಳಿಸಯ್ಯ. ಅಯ್ಯಾ ನೊಣ ಭೂಪತಿಯೇ, ಆ ಮನುಷ್ಯನು ಮೀಸೆ ತಿರುವುತ್ತಿರುವ ಸಮಯ, ನೀನು ಅಲ್ಲಿ ಹಾರಿ ಕುಳಿತು ನನ್ನ ಹೆಸರು ಒಂದು ಸಲ ಘೋಷಿಸಯ್ಯ. (ಅಭಿನಯಿಸಿ ತೋರಿಸುವನು. ಆತನಿಗೀಗ ಕಿವಿ ಕೇಳಿಸುವುದಿಲ್ಲ. ಕಿರಿಚಿಕೊಂಡು ಮಾತನಾಡುವನು. ಆಗಾಗ ಅ್ಞ... ಅ್ಞ... ಎಂದು ಕಿವಿಯ ಹತ್ತಿರ ಕೈಯಿಟ್ಟು ಮಾತಾಡುವನು.)

ರಕ್ಷಕ : ಅದೇನು ಬಡಬಡಿಸ್ತೀಯೋ ನೀನು.

ರೈತ : ನಾನು ಇಲ್ಲಿಗೆ ಬಂದು ವರ್ಷ ಐವತ್ತಾಯಿತು. (ಕೈಯಲ್ಲಿ ಅಭಿನಯಿಸಿ) ಇನ್ನು ಹೆಚ್ಚು ದಿನ ಬದುಕುವಂತೆ ಕಾಣ್ತಾ ಇಲ್ಲ.

ರಕ್ಷಕ : ಅದಕ್ಕೆ ನಾನೇನು ಮಾಡ್ಬೇಕು ಅಂತಿ.

ರೈತ : (ರಕ್ಷಕನಿಗೆ) ಇಲ್ಲಿ ಬಾ (ಎಂದು ಸನ್ನೆ ಮಾಡುವನು.)

ರಕ್ಷಕ : (ಹತ್ತಿರ ಬಂದು ಏನು ಎಂಬಂತೆ ಮುಖ ಸನ್ನೆ ಮಾಡುವನು.)

ರೈತ : (ದೊಡ್ಡದಾಗಿ) ನೀನು ಮಹಾ ಧೂರ್ತ ಇದೀಯ. ಇಷ್ಟು ವರ್ಷ ಕಾದರೂ ಒಳಗೆ ಹೋಗಲು ಬಿಟ್ಟಿಲ್ಲ. ನನಗೆ ಒಂದು ವಿಷಯ ಹೇಳು. ನನ್ನ ಹೊರತು ಇನ್ಯಾರು ಇಲ್ಲಿ ಬರೋದೇ ಇಲ್ವ! ಯಾಕೆ?

ರಕ್ಷಕ : ಈ ಬಾಗಿಲು ನಿನಗಾಗಿಯೇ ಮಾಡಿದ್ದು! ಇಗೋ ಅದನ್ನು ಮುಚ್ಚುತ್ತೇನೆ!!

ಬಾಗಿಲನ್ನು ಮುಚ್ಚುವನು. ಹಳ್ಳಿಗ ಅಲ್ಲಿಯೇ ಕುಸಿಯುವನು.

ಹಲವು ಪ್ರಾರ್ಥನೆಗಳು ಒಂದರೊಡನೊಂದು ಬೆರೆತು ಕೇಳಿಸುವುವು.

ಕ್ರಮೇಣ ಕತ್ತಲೆ.

● ● **ನಾರಾಯಣ ಕಂಗಿಲ** : ಶಿಲ್ಪ, ನೆಹರೂನಗರ, ಪುತ್ತೂರು-೫೭೪ ೨೦೩

ಪುಸ್ತಕ ಪರಿಶೀಲನೆ

೧. ನೆನಪು ಗರಿಬಿಚ್ಚಿದಾಗ : ಎಲ್. ವಿ. ಶಾಂತಕುಮಾರಿ

ಅನಿಕೇತನ ಪ್ರಕಾಶನ, ರಾಜು ಬಿಲ್ಡಿಂಗ್ ಹತ್ತಿರ, ದೇವನೂರು ರಸ್ತೆ, ವಿಜಯನಗರ, ತುಮಕೂರು, ಪ್ರ. ಮು. ೨೦೦೨, ಪು. ೧೭೬, ರೂ. ೧೦೦/-

ಇದು ಎಲ್. ವಿ. ಶಾಂತಕುಮಾರಿ ಅವರ ಚೊಚ್ಚಲು ಕೃತಿ. ಅದೂ ಅವರ ಇಳಿ ವಯಸ್ಸಿನಲ್ಲಿ ಬರೆದ ಬರಹ. ಅವರ ಮನೋಬಲದ ಬಗ್ಗೆ ಸಹಜವಾಗಿ ಗೌರವ ಮೂಡುತ್ತದೆ. ತಮ್ಮ ಬಾಲ್ಯ ಮತ್ತು ಯೌವನ ಕಾಲದ ೨೦ ಘಟನೆಗಳನ್ನು, ವ್ಯಕ್ತಿಚಿತ್ರಣಗಳನ್ನು ಈ ಸಂಕಲನದಲ್ಲಿ ಚಿತ್ರಿಸಿದ್ದಾರೆ. ಬರವಣಿಗೆಯ ರೀತಿ ಮೆಚ್ಚತಕ್ಕದ್ದಾಗಿದೆ. ಈ ಘಟನಾವಳಿಗಳಲ್ಲಿ ಕೆಲವೊಂದು ಲಲಿತಪ್ರಬಂಧಗಳಂತೆ ಕಂಡುಬಂದರೆ, ಇನ್ನು ಕೆಲವು ಕತೆಯಂತಿವೆ.

ತಿಪಟೂರು ನಗರದಲ್ಲಿ ಆಗಿನ ಕಾಲಕ್ಕೆ ಹೆಸರುವಾಸಿ ಲಾಯರ್ ಆಗಿದ್ದ ಅವರ ತಂದೆ ಲ. ವೆಂಕಟರಾಮಯ್ಯನವರ ಸುತ್ತ ಈ ಘಟನಾವಳಿ ಚಲಿಸುತ್ತ ವೆಂಕಟಯ್ಯನವರ ಮನೆಗೆ ಬರುತ್ತಿದ್ದ ಕಕ್ಷಿದಾರರ ಕುರಿತು ಸ್ಪಷ್ಟ ನಿರೂಪಣೆಯಿದೆ. ಅದರಲ್ಲೂ ಆಗಿನ ಕಾಲದ ಮಹಿಳಾ ಜೀವನದ ದಾರುಣತೆ ಮತ್ತು ಆ ದಾರುಣತೆಯಲ್ಲೂ ಅವರ ದಿಟ್ಟತನದ ಜೀವನರೀತಿಯನ್ನು ಮಾರ್ಮಿಕವಾಗಿ ಕಾಣಿಸಲಾಗಿದೆ. ಇವುಗಳಲ್ಲಿ "ಬಚ್ಚಲುಮನೆ ಗೋಡೆಗೆ ಮಮತೆಯ ಸಿಂಚನ" ಕೃತಿ ಓದಿದ ಮೇಲೆ ತಾಯಿಯ ನೋವಿನ ಪೂರ್ಣ ಸಾಕ್ಷಾತ್ಕಾರ ಆಗದಿರದು. ಎದೆ ಹಾಲುಣುವ ಮಗುವಿನ ಸಮೇತ ಪತಿಯು ಸುಬ್ಬಲಕ್ಷ್ಮಿಯನ್ನು ತ್ಯಜಿಸಿದಾಗ, ಆ ಪ್ರಕರಣ ಲಾಯರ್ ವೆಂಕಟರಾಮಯ್ಯನವರ ಬಳಿ ಬರುತ್ತದೆ. ಕಕ್ಷಿದಾರಳಾದ ಈಕೆ ಅವರ ಮನೆಯಲ್ಲೇ ಇರುತ್ತಾಳೆ. ಇಂದಲ್ಲ ನಾಳೆ ಮಗು ತನ್ನ ಮಡಿಲಿಗೆ ಬಂದೇ ಬರುತ್ತದೆ ಎಂಬ ದೃಢತೆಯಿಂದ ತನ್ನ ಮೊಲೆ ಹಾಲನ್ನು ಹಿಂಡಿ ತೆಗೆದು ಹಗುರ ಮಾಡಿಕೊಳ್ಳುವ ಪರಿ ಮನಸ್ಸಿನ ದೃಢಸಂಕಲ್ಪವನ್ನು ತೋರಿಸುತ್ತದೆ. ಕಡೆಗೆ ಆಕೆಯು ಗಂಡ ಮತ್ತು ಮಗುವನ್ನು ಕಂಡಾಗ, "ಆಕೆ ಮೊದಲು ತನ್ನ ಎದೆಗೆ ಮಗುವಿನ ತುಟಿಗಳನ್ನು ನೀಡಿ, ಸೆರಗಿನಲ್ಲಿ ಮರೆಯಾಗಿಸಿಕೊಂಡಳು." ಅಂತ ಓದುವಾಗ ತಾಯಿಯಾಗುವ ನೋವು ಯಾವ ಮಟ್ಟದ್ದು ಎಂಬುದು ಅರಿವಾಗುತ್ತದೆ.

'ಪುರದಮ್ಮ', 'ನಮ್ಮಜ್ಜಿ ಎಳೆವ ಬಾಳಬಂಡಿ', 'ಸೊಪ್ಪಿನ ಸಾಕಪ್ಪ', 'ಅಗಸರ ಪಾರ್ವತಿ' ಮುಂತಾದ ಬರಹಗಳು ದಟ್ಟವಾದ ವಿವರಗಳಿಂದ ಓದುಗನ ಮನಸ್ಸಿಗೆ ಮುದ ನೀಡುತ್ತವೆ.

—ಶ್ರೀಪತಿ ಮಂಜನಬೈಲು, ಅನಂತಮುರಳಿ, ೧೬೫. ಗುರುಪ್ರಸಾದನಗರ, ಬೆಳಗಾವಿ - ೮

೨. *ಮೌನ ಮೆರವಣಿಗೆ* : ಶಂಕರ ತಲ್ಲೂರ

ಚೇತನ ಸಹಕಾರಿ ಗ್ರಂಥಮಾಲೆ, ರಾಮತೀರ್ಥನಗರ, ಬೆಳಗಾವಿ-೧೫. ಪ್ರ.ಮು ೨೦೦೬, ಪು. ೬೪. ರೂ. ೫೦/-

ವಯಸ್ಸಿನಿಂದಲೂ, ಅನುಭವದಿಂದಲೂ ಸಾಕಷ್ಟು ದಾಗಿರಬಹುದಾದ ಕವಿಯೊಬ್ಬನ ೬ನೆಯ ಸಂಗ್ರಹವನ್ನು ಎದುರಿಗಿಟ್ಟುಕೊಂಡು, ಇಲ್ಲಿಯ ಮಾತುಗಳನ್ನು ಬರೆಯುವವಕ್ಕೆ, ಬರೆಯುವವನಿಗೇ ಬೇಸರ. ಹತ್ತರೊಡನೆ ಹನ್ನೊಂದನೆಯದು ಮಾತ್ರವೇ ಆಗಬಹುದಾದ, ಶಂಕರ ತಲ್ಲೂರ ಅವರ 'ಮೌನ ಮೆರವಣಿಗೆ' ಕೃತಿಯ ಬಗ್ಗೆ. ಯಾವುದೇ ದೃಷ್ಟಿಯಿಂದಲೂ, ಯಾವುದೇ ಬಗೆಯ ಪ್ರಶಂಸೆಯ ಮಾತುಗಳನ್ನಾಡುವದು ಸಾಧ್ಯವಿಲ್ಲ. ಉದಾಹರಣೆಗೆ ಇಲ್ಲಿಯ ಭಾಷೆಯ ಮಂಡನೆಯ ರೀತಿಯನ್ನು ನೋಡಬಹುದು. ಈ ಸಂಗ್ರಹದ ಮೊದಲ ಕವಿತೆ 'ಭಾರತಮಾತೆಯ ಕಿವಿಮಾತು' ರಚನೆಯ ಈ ಸಾಲುಗಳನ್ನು ನೋಡಬಹುದು. "ಫಲವತ್ತಾದ ವಿಶಾಲ ವನದಲ್ಲಿ/ಕಳ್ಳಿ, ಜಾಲಿ, ವಿಷಬಳ್ಳಿ ಬಿತ್ತಿ/ಬೇಲಿ ಬೆಳೆವುದು ತರವಲ್ಲ/ಅದಕೆ ಒಂದಾಗಿರಿ ನೀವೆಲ್ಲ" "ಒಂದಾದರೆ ನೀವು ಈಗಿಂದೀಗಲೇ/ನಿಮಗೂ ಬರುವದು ಆನೆಬಲ/ವೈರಿಯ ಆಟವು ನಡೆಯೊಲ್ಲ/ನಮ್ಮನು ಯಾರೂ ಕೆಣಕೊಲ್ಲ." ಈ ಸಂಗ್ರಹದಲ್ಲಿ, ಇಂತಹ 'ಕಾವ್ಯರೂಪ'ಗಳೇ ಹೆಚ್ಚು. ಒಂದು ತೀರ ಸಾಮಾನ್ಯ ಗದ್ಯ ಮಾತ್ರವಾಗಬಲ್ಲ ಸಾಲುಗಳನ್ನು ಕವಿತೆಯ 'ರೂಪ'ದಲ್ಲಿ ಇಟ್ಟಮಾತ್ರಕ್ಕೆ ಅದು ಕಾವ್ಯವಾಗುವದಿಲ್ಲ. ಈ ಸಂಗ್ರಹದ ಬೆನ್ನುಡಿಯಲ್ಲಿ ಚೆನ್ನವೀರ ಕಣವಿ ಅವರು (ಕೊಂಚ ಭರವಸೆಯಿಂದ?) ಪ್ರಸ್ತಾಪಿಸಿದ 'ಹೊಸ ಹಾದಿ' ಕವನದ ಸಾಲು ಕೆಲವು : "ಈ ನಿರಂತರ ನಿಯಮಿತ ಪರಿಭ್ರಮಣದ ಜಡು/ಗಡೆಗೆ ಇಂಧನವ ಸಂಚಯಿಸಿ ರಾಕೆಟ್ಟಿನೊಲು/ಭಂಗನೇ ನೆಗೆದು ಏರಿ ಮೇಲಕೆ ನೀನು/ಸತ್ತ್ವಯ ಸೆಳವಿನ ಆಳವಿನಿಂದ ಕಿತ್ತುಕೊಂಡು/ದೂರ ಬಹುದೂರ ಸಿಡಿದು ನಿಂದು ನಿರ್ಭಯದಿ/ನಿರಾಯಾಸ ತೇಲುವ ಆಸೆ ಇಲ್ಲವೆ ನಿನಗು/ತೊರೆದು ಅಧಿಕಾರದ ಅರಮನೆಯ ಎಲ್ಲ ಹಂಗು?"

ಒಂದು ಕವಿತೆಯನ್ನು ಹೇಗೆ ಬರೆಯಬೇಕು ಎಂಬಷ್ಟೇ ಗಂಭೀರವಾಗಿ, ಒಂದು ಕವಿತೆಯನ್ನು ಹೇಗೆ ಬರೆಯಬಾರದು ಎಂಬ ದಿಕ್ಕಿನಲ್ಲಿಯೂ ಆಲೋಚಿಸುವದು, ಶಂಕರ ತಲ್ಲೂರ ಅಂಥ ಕವಿಗಳು, ತಮ್ಮ ಉತ್ತಮ ಕಾವ್ಯ ಭವಿಷ್ಯಕ್ಕಾಗಿ ಮಾಡಬೇಕಾದ ಮೊದಲ ಕೆಲಸ.

೩. *ದೇವಬಾಗ* : ಚಂದ್ರಶೇಖರ ಪಾಟೀಲ

ತನುಮನ ಪ್ರಕಾಶನ, ತೃಪ್ತಿ-೪೨, 'ಜಿ' ಬ್ಲಾಕ್, ೩ನೇ ತಿರುವು, ರಾಮಕೃಷ್ಣನಗರ, ಮೈಸೂರು-೫೭೦ ೦೨೩, ಪ್ರ.ಮು ೨೦೦೩, ಪು ೮೪, ರೂ. ೪೫/-

ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಚಂದ್ರಶೇಖರ ಪಾಟೀಲರ ೧೦ ನೆಯ ಕವನ ಸಂಗ್ರಹ 'ದೇವಬಾಗ'. "ಸುಡುವ ಗುಡಿಸಲುಗಳ ಒಡಕು ಕನ್ನಡಿಗಳಲ್ಲಿ/ದೂರದ ಪಂಚತಾರಾ ಮಹಲುಗಳ ಜ್ಯೋತಿಗಳು/ಹಲ್ಲು ಕಿರಿಯುತ್ತಲೇ ಇವೆ" ಎಂಬ ಸಾಮುದಾಯಿಕ ಸಂತಾಪದ, ವಿಷಮತೆಯ ವ್ಯಂಗ್ಯ ಮಂಡನೆಯೊಂದಿಗೆ ಆರಂಭವಾಗುವ ಸಂಗ್ರಹ; "ಸಮಸಮಾಂತರ ನಡೆವ ಕವನದೆರಡೂ ಸಾಲು/ಶಬ್ದಾರ್ಥ ಹೊರೆ ಕಳಚಿ/ಮೌನದಲಿ ಸಂಗಮಿಸುವಂತೆ" ಒಂದು ನಿಲುಗಡೆಗೆ ಬರುವ ಮಧ್ಯದಲ್ಲಿ ಎಷ್ಟೆಲ್ಲ ಅರ್ಥಪೂರ್ಣ ವೈಚಾರಿಕ ಹಂತಗಳು, ಭಾವಶ್ರೀಮಂತಿಕೆಯ ನಿಲುವುಗಳು!

ಇಲ್ಲಿಯ ಸಾಕಷ್ಟು ಕವಿತೆಗಳು, ಆಕಾರದಲ್ಲಿ ಪುಟ್ಟವಾಗಿದ್ದರೂ (ಅನೇಕವುಗಳು), ಒಂದಿಲ್ಲೊಂದು ಬಗೆಯಿಂದ ಆಸ್ಫೋಟಕ ಗುಣ ಹೊಂದಿದವುಗಳು. ಮಿಂಚಿನಂತೆ ಕ್ಷಣಮಾತ್ರ ಹೊಳೆದರೂ ಬೆಳಕನ್ನು ಮಾತ್ರ ಶಾಶ್ವತವಾಗಿರಿಸುವಂತಹ ಅಪರೂಪ ಗುಣದವುಗಳು. ಉದಾಹರಣೆಗೆ, ಇಲ್ಲಿಯ 'ಸತ್ಯ ಎಂಬುದು' ಎಂಬ ಪದ್ಯವನ್ನೇ ನೋಡಬಹುದು. "ಸತ್ಯ ಎಂಬುದು/ಸೊಂಟಕ್ಕೆ ಕಟ್ಟಿಕೊಂಡ/

ಬಾಂಬು'' ಎಂದು, ಸತ್ಯದ ಸ್ಫೋಟಕ ಗುಣ ವಿಶ್ಲೇಷಣೆಯ, ನಿಜದ ನಿರೂಪಣೆ ಎಂಬಂತೆ ಆರಂಭವಾಗುವ ಕವಿತೆ, ``ಆ ಸ್ಫೋಟದ ಬೆಳಕಿನಲ್ಲಿ/ಒಮ್ಮೊಮ್ಮೆ/ಬೂದಿ/ವಿಭೂತಿಯಾಗಬಹುದು'' ಎಂದು ಕೊನೆಗೊಂಡಾಗ, ಸತ್ಯದ ನಿಶಿತತೆಗೆ ಒಂದು ಹೊಸ ಹೊಳಪನ್ನೇ ಒದಗಿಸಿಬಿಡುತ್ತದೆ. ಹಾಗೆಯೇ, `ಮುಖ' ಎಂಬ ಪದ್ಯ. ``ಮಗು/ಉಚ್ಚೆ ಹೊಯ್ದರೂ/ಮುಗಿಲು/ಅದರಲ್ಲಿ/ಮುಖ ನೋಡುಕೊಳ್ಳುತ್ತದೆ'' ಎನ್ನುವ ಈ ಪುಟ್ಟ ಪದ್ಯ ಆಕಾಶದಗಲದ ವಿಸ್ಮಯವನ್ನೇ ಅಂಗೈಯಲ್ಲಿ ಹಿಡಿದಿಟ್ಟು ಬಿಡುತ್ತದೆ.

ಯಾವುದೇ ವಾಸ್ತವದ 'ಮಿತಿಗೆ' ಕೊಟ್ಟ ಕಾವ್ಯರೂಪ 'ನಾವು ಒಂದೇ' ಎಂಬ ಪದ್ಯ. ಆರಂಭದ 'ಇಲ್ಲ' ಮತ್ತು ಕೊನೆಯ 'ಇಲ್ಲಗಳ' ಮಧ್ಯದಲ್ಲೇ 'ಹೌದು' ಎನ್ನುವಂತೆ ಬದುಕುವದೇ ಕಾಲ ಹಾಕಿಕೊಡುವ ಚೌಕಟ್ಟು. ('ಆಕಾಶಮುಖಿಯಾಗಿ' ನಡೆದರೂ 'ಮರಳುವದು ಮಣ್ಣಿಗೇ') ಪ್ರಾಸ ದಿಕ್ಕುಗಳ ಮಧ್ಯವೂ ಅರಳಿಕೊಂಡ ಅರ್ಥಪೂರ್ಣ ಕವಿತೆ 'ಹುಡುಕು'. ಬೆಂಕಿಯ ಕೊನೆಯಲ್ಲಿಯೇ ಅರಳುವ ತಂಪಿನಂತಹ ಅನುಭವದ ಪದ್ಯ 'ಬುದ್ಧ-ಚಂದ್ರ'.

ಸಂಗ್ರಹದ ತಲೆಬರಹವಾದ 'ದೇವಬಾಗ', ಕಾರವಾರದ ಕಡಲತೀರದ ಒಂದು ನಡುಗಡ್ಡೆ. ಭರತಿ ಓಹಟಿಗಳ ಭರಭರಾಟೆಯಲ್ಲಿ ಕ್ರಮೇಣ ಕರಗುತ್ತಿರುವ 'ದೇವಬಾಗ'ವನ್ನು ಕಂಡು ಕೊರಗುವ ಕವಿ ಮಿಡುಕು ಈ ಕವಿತೆಯ ಹೊರ ಪಾರ್ಶ್ವ. ಆದರೆ ಈ ಪದ್ಯದ ಮೈಯೊಳಗೆ, ಕವಿಯ ಮತ್ತು ದೇವಬಾಗದ ``ಈ ಸಂಬಂಧಕ್ಕೆ ಎಷ್ಟೊಂದು ಪದರುಗಳು.'' ಕವಿ ಮತ್ತು ದೇವಬಾಗ ಎರಡನ್ನೂ ಮೀರಿ ನಿನದಿಸುವ ಇಲ್ಲಿಯ ``ಕರುಳ ಬಳ್ಳಿಗೆ'' ಥಕ್ಕನೇ ಅಕ್ಷರರೂಪವೀಯಲಾಗದ ``ಎಷ್ಟೊಂದು ಚಿಗುರುಗಳು''. ಇಂಥ ಪದ್ಯಗಳಲ್ಲಿ; ``ಕತ್ತಲಲ್ಲಿ ಬೆತ್ತಲೆ'' ನಿಂತು ``ಬೆಳಕಿನ ಪದರು ಪದರು'' ಬಿಚ್ಚುವ 'ಶಬ್ದಗಳು' ನಿನದಿಸುವ ಧ್ವನಿಗಳು, ಮತ್ತೆ ಮತ್ತೆ ಮನದಲ್ಲಿ ರಿಂಗಣಗಳನ್ನು ಹುಟ್ಟಿಸುವಂತಹವು.

ಹೀಗೇ, ಹನಿ ಹನಿ ಇಂಗಿ ``ನೆನದೊಡಲ ಬಿರಿದು ಜುಳು ಜುಳು ಹರಿಯುವ'' ಅಥವಾ ``ಉಗಿಯಾಗಿ ಮೋಡವಾಗಿ ಆಕಾಶದಗಲ ಹರಿದಾಡುವ'' ಇಲ್ಲಿಯ ಜಲ ``ನಿಂತ ನೀರು'' ಅಲ್ಲ ಎಂಬುದನ್ನು ಈ ಸಂಗ್ರಹದ ಸಾಕಷ್ಟು ಕವಿತೆಗಳು ಸಾಬೀತು ಮಾಡುತ್ತವೆ.

ಕೊನೆಯದಾಗಿ ಇನ್ನೊಂದು ಮಾತು. ತಮ್ಮ ಕಾವ್ಯಗಳಲ್ಲಿ ಆಗೀಗ, ಕೆಲವರನ್ನು 'ಕುಟುಕು' ವದೂ ಪಾಟೀಲರ ಒಂದು ವಿಶಿಷ್ಟ ಗುಣ. ಸಾಮುದಾಯಿಕ ತೊಡಕು, ಅನಿಷ್ಟ, ಇಬ್ಬಂದಿತನ ಇತ್ಯಾದಿಗಳಿಗೆ ಕಾರಣವಾಗಬಲ್ಲ, ವ್ಯಕ್ತಿಗತ ಅವಗುಣ, ದ್ವಂದ್ವ, ದೌರ್ಬಲ್ಯ ಕೆಲವುಗಳಿಗೆ ಕೆಲವು ಬಗೆಯ 'ಕುಟುಕು' ಗಳು ಖಂಡಿತಕ್ಕೂ ಆವಶ್ಯಕ. ಆದರೆ, ಕೇವಲ ಕುಟುಕುವ ಮಾತ್ರಕ್ಕಾಗಿಯೇ ಕುಟುಕುವದು ಒಂದು 'ಚಟ' ಮಾತ್ರವಾಗಿ ಬಿಡುವ ಅಪಾಯವಿರುತ್ತದೆ. ನನ್ನ ಮೊದಲ ಮಾತಿಗೆ 'ಶರ್ಮ-೨೦೦೦' ಒಂದು ಉದಾಹರಣೆಯಾದರೆ, ನನ್ನ ಎರಡನೆಯ ಮಾತಿಗೆ 'ಚಹಾ-ಚೂಡಾ' ಉದಾಹರಣೆಯಾಗಬಹುದು.

``ವಿನಾಕಾರಣ/ಕುಡಿತವೇ ನಿಜವಾದ ಕುಡಿತ'' ಎನ್ನುತ್ತಾರೆ ಪಾಟೀಲರು. ಇನ್ನಾವ ಕಾರಣ ಇಲ್ಲವೆಂದುಕೊಂಡರೂ ಕುಡಿಯಬೇಕು ಎನ್ನುವದೇ ಒಂದು ಕಾರಣವಲ್ಲವೆ? ಎಷ್ಟೋ ಬಗೆಯ, (ವಿವಿಧ ಹಂತಗಳ, ವಿವಿಧ ಭಾವಗಳ) ಬೆಚ್ಚನೆಯ ಸ್ಪರ್ಶ ವಿನಿಮಯ ನಡೆಯುವ ಪ್ರೇಮದಲ್ಲಿಯೂ ಅಷ್ಟೇ ಅಲ್ಲವೆ? ಒಟ್ಟಾರೆ ಅಹುದಹುದೆನ್ನಬಹುದಾದ ಗುಣ ಅನೇಕಗಳನ್ನು ಹೊಂದಿದ, ಚಂಪಾ ಅವರ 'ದೇವಬಾಗ', ಇತ್ತೀಚಿನ ಉತ್ತಮ ಕಾವ್ಯಕೃತಿಗಳಲ್ಲಿ ಒಂದು.

—ದೇಶಪಾಂಡೆ ಸುಬ್ಬರಾಯ, ನೆಲೆ, ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ - ೫೮೦ ೦೦೮

೪. ಪುಷ್ಪಮಾಲೆ: ಹಜರತ್ ಜನಾಬ ಪೀರ ಶ್ರೀಗುರು ಸೈಯದ ಗೌಸಮದ್ನಿ

ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ-೧, ಪ್ರ.ಮು. ೨೦೦೩, ಪು. ೭೪, ರೂ. ೪೦/-

ವೀರಶೈವ ನೂತನ ಸಾಹಿತ್ಯರತ್ನಮಾಲೆಯ ೨೪ನೇ ಕೃತಿ 'ಪುಷ್ಪಮಾಲೆ'. ಇದು ಅನೇಕ ವಿಷಯಗಳಲ್ಲಿ ಅನನ್ಯ. ಸುಂದರವಾದ ಇಂಡೋ ಅರೇಬಿಕ್ ಚಿತ್ರ ಶೈಲಿಯ ಹೊದಿಕೆ ಚಿತ್ರ. ಒಳಗೆ

ಹುಬ್ಬಳ್ಳಿಯ ಸಮನ್ವಯ ಧರ್ಮತಾತ್ವಿಕ ಲೇಖಕನ ಕೈಬರಹದ (೮"X೧೨"ರ) ಛಾಯಾಪುಟಗಳು. ವಿಷಯ ಅಣ್ಣಿಗೇರಿಯ ಮುಸಲ್ಮಾನ ಬಂಧುಗಳಿಗೆ ತೋಂಟದಾರ್ಯ ಸ್ವಾಮಿಗಳು ಮಸೀದೆ ಕಟ್ಟಲು ಜಾಗ ಕೊಟ್ಟದ್ದು; ಅದಕ್ಕೆ ಕೃತಜ್ಞನುಡಿ ಪುಷ್ಪಮಾಲೆ.

ದಿವ್ಯ ಕುರಾನ್ ರೀತಿಯ ಆಲಂಕಾರಿಕ ಶೈಲಿಯಲ್ಲಿ ಪುಷ್ಪಮಾಲೆ ರಚಿತಗೊಂಡಿದೆ. ಲೇಖಕರು ಸಮರಸತತ್ವದ ಗುರುಗಳು. ಹೀಗಾಗಿ ತಮ್ಮ ಹೆಸರಿಗೆ ಪೀರ ಮತ್ತು ಶ್ರೀಗುರು ಎರಡನ್ನೂ ಬಳಸಿಕೊಂಡಿದ್ದಾರೆ. ಕ್ರಿ.ಶ. ೧೯೧೯ ಕ್ಕಿಂತ ಮೊದಲೇ ದಾನ ನೀಡಿ ತೋಂಟದಾರ್ಯ ಮಠ ಧರ್ಮಸಾಮರಸ್ಯ, ಸದ್ಭಾವನೆಯ ಪರಂಪರೆ ಮೆರೆದಿದೆ ಎಂಬುದನ್ನು ಎತ್ತಿ ತೋರಿದೆ. ಇದೇ ನಿಜವಾದ ಶರಣತತ್ವ. ಇಂದಿಗೆ ಶತಶತಮಾನಗಳ ಮೊದಲೇ ಧರ್ಮದ ನೈಜ ಆಚರಣೆಯನ್ನು ಗದುಗಿನ ತೋಂಟದಾರ್ಯ ಪೀಠ ಪರಂಪರೆ ಆಚರಿಸಿ ತೋರಿದೆ. ಈಗಿನ ಮಹಾಸ್ವಾಮಿಗಳಾದ ಡಾ. ತೋಂಟದ ಸಿದ್ಧಲಿಂಗ ಜಗದ್ಗುರುಗಳಿಗೆ ರಾಷ್ಟ್ರೀಯ ಕೋಮು ಸೌಹಾರ್ದತಾ ಪ್ರಶಸ್ತಿ ಬಂದುದು ಅವರ ಸಮರಸ ಸಾಧನೆಗಳಿಗೆ ಗರಿ ಇಟ್ಟಂತಾಗಿದೆ. ಪ್ರಸ್ತುತ ಪುಷ್ಪಮಾಲೆ ಸಂದರ್ಭೋಚಿತವಾದುದು ಮತ್ತು ಪರಂಪರೆಯಲ್ಲಿ ಮಠದ ತತ್ವಗಳು ಕೋಮುಸೌಹಾರ್ದಮಯವೇ ಎಂಬುದನ್ನು ಎತ್ತಿ ಹೇಳುವಂತಹದು.

ಶ್ರೀಮಠದ ೧೭ ನೇ ಪೀಠಾಧಿಪತಿ ಸಿದ್ಧೇಶ್ವರ ಮಹಾಸ್ವಾಮಿಗಳ ಮಹಾಕಾರ್ಯವನ್ನು ಅನನ್ಯವಾಗಿ ನೆನೆಯುವುದೇ ಈ ಕೃತಿಯ ಮುಖ್ಯ ಭೂಮಿಕೆ. ಅವರ ಸ್ತುತಿಪರವಾದ ಪದ್ಯಗಳ (ಉರ್ದೂ) ವಿವರಣೆ ಗದ್ಯ(ಕನ್ನಡ)ದಲ್ಲಿ ಮಾಡಲಾಗಿದೆ. ಈ ಗದ್ಯಾನುವಾದ ಭಾಷಾಂತರವನ್ನು ಹಜರತ್ ಖಾದರ ಪಾಚ್ಛಾಸಾ ಖಾಜಿ ಮುಳಗುಂದ ಅವರಿಂದಲೂ ಮಾಡಿಸಲಾಗಿದೆ. ೨೩ ಉರ್ದೂ ಶ್ಲೋಕಗಳಿಗೆ ಸುದೀರ್ಘ ವಿವರಣೆ ಇದೆ. ಶ್ಲೋಕ ವಿವರಣೆಯಲ್ಲಿ ಒಳ ಶ್ಲೋಕಗಳು ಅನುವಾದಗಳೂ ಇವೆ.

೫. *ಮಂದಹಾಸದ ಹಿಂದೆ : ನರಸಿಂಹ ಪರಾಂಜಪೆ*

ಸಮಾಜ ಪುಸ್ತಕಾಲಯ, ಧಾರವಾಡ-೫೮೦ ೦೦೧, ಪ್ರ.ಮು. ೨೦೦೩, ಪು. ೬೫, ರೂ. ೩೫/-

'ಮಂದಹಾಸದ ಹಿಂದೆ' ಕವನ ಸಂಕಲನ ನಿವೃತ್ತ ಇಂಜನಿಯರ್ ಪರಾಂಜಪೆಯವರ ಅವರ ೧೨ ನೆ ಕೃತಿಯಾಗಿದೆ. ೪೯ ಕವನಗಳು ೧೧ ಗೇಯಗೀತೆಗಳು ಒಟ್ಟು ೬೦ ಕವಿತೆಗಳು ಇಲ್ಲಿವೆ. ಪ್ರೇಮ, ಸಂಸಾರ, ಬದುಕಿನ ವಿರಸ, ಸರಸ, ದೇವ, ದೇವಲೀಲೆ, ಅಸ್ತಿತ್ವ –ಹೀಗೆ ಅವರ ಕವನಗಳ ವಿಚಾರವಸ್ತು ಕೆಲವೊಮ್ಮೆ ಬರೀ ಹೇಳಿಕೆಗಳ ಅವಸ್ಥೆಯ ಮೊಗ್ಗಾಗಿವೆ. ಕೆಲವೊಮ್ಮೆ ಸಂಪ್ರದಾಯ ಕುರಿತು ಆಕ್ರೋಶವಿದೆ. ತಮ್ಮ ಇಳಿವಯಸ್ಸನ್ನು ಅದಕ್ಕೆ ಹೊಂದಿಕೊಂಡ 'ಭಕ್ತಿ'ಯ ಪರಿವೇಶವನ್ನು ಅವರು ಇಲ್ಲಿ ಬಿಚ್ಚಿದ್ದಾರೆ. ಗೇಯಗೀತಗಳು ಷಟ್ಪದಿ ಚೌಪದಿಯ ರೂಪದಲ್ಲಿದ್ದ ಪ್ರಾಸವನ್ನು ಕಾಯ್ದಿವೆ. ಕವಿಗೆ ನಾಳೆ ಬರಲಿದೆ ಎಂಬ ಆಶಾವಾದವಿದೆ.

೬. *ದಾರೀಗೆ ಜತೆಯಿಲ್ಲ : ಜಿ. ಎಸ್. ಉಜ್ಜನಪ್ಪ*

ಸಿವಿಜಿ ಪಬ್ಲಿಕೇಷನ್ಸ್, ೭೦, ೨ನೇ ಮೇನ್, ಜಬ್ಬಾರಾ ಬ್ಲಾಕ್, ವೈಯಾಳಿಕಾವಲ್, ಬೆಂಗಳೂರು-೫೬೦ ೦೦೩, ಪ್ರ.ಮು. ೨೦೦೩, ಪು. ೮೮, ರೂ. ೮೦/-

ಎಂಟು ಕತೆಗಳು ಈ ಸಂಕಲನದಲ್ಲಿವೆ. ದೇಸಿಯ ಸೊಗಸು, ಸೊಗಡು ಎರಡನ್ನೂ ಭಾಷೆ ಮತ್ತು ಬದುಕು ಎರಡರಲ್ಲಿ ಸಮರ್ಥವಾಗಿ ಇಲ್ಲಿಯ ಕತೆಗಳು ಬಳಸಿಕೊಂಡಿವೆ. ಚಿತ್ರದುರ್ಗದ ಹಿರಿಯೂರಿನ ಪಟ್ಟಣೀಕರಣವಾಗದ ಜೀವನ ಮತ್ತು ನುಡಿಗಳೆ ಇಲ್ಲಿನ ಪ್ರಧಾನ ವಸ್ತು. ಸಾಮಾನ್ಯವೆಂದು ಕರೆಯುವ ಮೂರನೆ ಸ್ತರದ ಬದುಕು ಇಲ್ಲಿ ಬಿಂಬಿತಗೊಂಡಿದೆ. ಭಾರತೀಯ ಸಂದರ್ಭದಲ್ಲಿಯ 'ಅಜ್ಞಾನ' ಸ್ತ್ರೀಪರ ನೋಟಗಳನ್ನು ಕತೆಗಳು ಮೈಗೂಡಿಸಿಕೊಂಡಿವೆ. 'ದಾರೀಗೆ ಜತೆಯಿಲ್ಲ' ಎಂಬ ಕತೆ ಸಂಪ್ರದಾಯದಲ್ಲಿ ಸಿಕ್ಕು ನಲುಗಿದ ಹೆಣ್ಣು ಅದರಿಂದ ಸಿಡಿದೇಳುವ ರೋಷ, ಧೈರ್ಯಗಳನ್ನು ಬಿಂಬಿಸುತ್ತದೆ. 'ಗಾಂಧೀಜಿ ಹೇಳುತ್ತಿದ್ದರು, ಮಧ್ಯರಾತ್ರಿ ಒಂಟಿಯಾಗಿ ಹೆಣ್ಣೊಬ್ಬಳೆ ಅಲೆದಾಗ ಭಾರತಕ್ಕೆ ಸ್ವಾತಂತ್ರ್ಯ ಬಂದಂತೆ' ಎಂದು ಈ ಕತೆಯಲ್ಲಿ ನಾಯಕ ನೀರಸ ಗಂಡ, ಒತ್ತಾಯದ ಮದುವೆ ಇತ್ಯಾದಿ

ತಿರಸ್ಕರಿಸಿ ಸಿಡಿದೇಳುವದಿದೆ. 'ಪರಪಾಟ' ಸಣ್ಣಕತೆಯು ವೈಶಿಷ್ಟ್ಯವೆನಿಸಿದ ಕೊನೆಯ ಸ್ಫೋಟ ಸಮರ್ಥವೆನಿಸಿದೆ. ಕುಡುಕನ ಹೆಂಡತಿಯ ಬದುಕು 'ಕೆಂಪಕ್ಕಳ ಬಾದ್ಗೂರ' ಕತೆಯಲ್ಲಿದ್ದರೆ ಪವಾಡ ಒಪ್ಪುವವರಿಗೊಂದು ಕತೆ ಇದೆ. ಕತೆಗಳು ಅನಾವರಣಗೊಳಿಸುವದು ಸಮೃದ್ಧ ಸತ್ವಪೂರ್ಣ ದೇಸೀ ನುಡಿ ಮತ್ತು ಜನಪದ ಸಂಸ್ಕೃತಿಯನ್ನು ಭಾಷಾ ಅಭ್ಯಾಸಿಗರಿಗೂ ಇದೊಳ್ಳೆಯ ಆಕರ.

—ಬ. ಸೋ. ಗೊರವರ, ಕನ್ನಡ ಪ್ರಾಧ್ಯಾಪಕ, ಜೆ. ಟಿ. ಕಾಲೇಜ, ಗದಗ

೨. *ಸಂಸ್ಕೃತಿ ಶೋಧ* : ಡಾ. ರಾಜಶೇಖರ ಇಚ್ಚಂಗಿ

ಅಕ್ಕಮಹಾದೇವಿ ಪ್ರಕಾಶನ, ಚೈತ್ರ, ವಿವೇಕಾನಂದನಾಗರ, ಹುಕ್ಕೇರಿ, ಪ್ರ.ಮು. ೨೦೦೩, ಪು.೨೧೮, ರೂ.೧೫೦/-

ಕನ್ನಡ ಶೋಧನೆ ಮತ್ತು ವಿಮರ್ಶೆಗಳು ಮುಖ್ಯವಾಗಿ ಸಂಸ್ಕೃತಿ ಶೋಧದತ್ತ ಹೆಚ್ಚು ಒತ್ತು ನೀಡುತ್ತಲಿವೆ. ಅಸಾಧ್ಯ ವೇಗದ-ನವನಾಗರಿಕ ಜೀವನದ-ಯಾಂತ್ರಿಕತೆ ನಿರ್ಭಾವುಕತನ, ಶುಷ್ಕ ವೈಚಾರಿಕತೆಗಳು ನಮ್ಮ ಮೇಲೆ ಹೇರಿದ ತೀವ್ರ ಒತ್ತಡದಿಂದಾಗಿ ಬದುಕಿನ ಸುಪ್ತ ಚೇತನ 'ಸಂಸ್ಕೃತಿ'ಯತ್ತ ನಾವು ಮೊದಲು ಗಮನ ಹರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಇದು ಕಾಲದ-ಯುಗಧರ್ಮದ-ಅಗತ್ಯವೂ ಹೌದು.

ಡಾ. ರಾಜಶೇಖರ ಇಚ್ಚಂಗಿಯವರ 'ಸಂಸ್ಕೃತಿ ಶೋಧ' ಇಂತಹ ಮನೋಧರ್ಮವನ್ನೇ ಪ್ರತಿನಿಧಿಸುವ ಸಂಶೋಧನ-ವಿಮರ್ಶನ ಕೃತಿಯಾಗಿದೆ. ಸಾಂದರ್ಭಿಕವಾಗಿ ರಚಿತವಾದ ೧೯ ಲೇಖನಗಳನ್ನು 'ವಚನಸೌರಭ' ಮತ್ತು 'ಸಂಸ್ಕೃತಿಸೌರಭ' ಎಂಬ ಎರಡು ಭಾಗಗಳಲ್ಲಿ ಸಂಯೋಜಿಸಲಾಗಿದೆ.

'ವಚನಸೌರಭ'ದಲ್ಲಿ 'ವಚನಗಳಲ್ಲಿ ಮಾನವೀಯ ಮೌಲ್ಯ', 'ಸಾಮಾಜಿಕ ಪ್ರಜ್ಞೆ'ಯಂತಹ ಆಶಯಗಳ ಜೊತೆಗೆ ಉಪೇಕ್ಷಿತ ವಚನಕಾರರ ಬಗೆಗೆ– ದಾಸೋಹ ಸಂಗಣ್ಣ, ಅಮುಗಿ ದೇವಯ್ಯ ಮತ್ತು ರಾಯಮ್ಮ, 'ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ– ಬೆಳಕು ಚೆಲ್ಲುವ ಲೇಖನಗಳಿವೆ. 'ಕವಿಳಾಸಪುರ ಮತ್ತು ಬಸವಣ್ಣನವರ ವಂಶಾವಳಿ' ಇಲ್ಲಿಯ ವಿಶೇಷ ಲೇಖನ. ಈವರೆಗಿನ ಆಧಾರಗಳನ್ನೇ ಆಧರಿಸಿ ಈ ಲೇಖನದಲ್ಲಿ ಇಚ್ಚಂಗಿಯವರು ಕೆಲ ಸಂಗತಿಗಳ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. 'ಹಾಲಬಸವಿ ದೇವರು' ಮತ್ತು 'ಕವಿಳಾಸಪುರ'ಗಳ ಕುರಿತು ಅರ್ಜುನವಾಡದ ಶಾಸನದಲ್ಲಿ ಉಲ್ಲೇಖಿತ ಎಲ್ಲ ಅಂಶಗಳನ್ನು ಕ್ಷೇತ್ರಕಾರ್ಯದ ಮೂಲಕ ಸ್ಪಷ್ಟಪಡಿಸಿ ಹೊಸ ಹೊಳಹುಗಳಿಗೆ ಸೂಚನೆ ನೀಡಿದ್ದಾರೆ. 'ಅಮುಗಿ ದೇವಯ್ಯ'ನ ಕುರಿತು ವಿವೇಚಿಸುವಾಗ– 'ಅಮೋಘಸಿದ್ಧ'ನ ಪ್ರಸ್ತಾಪ ಮಾಡಿದ್ದಾರೆ. ಆ ದಿಶೆಯಲ್ಲಿ ಇನ್ನೂ ಹೆಚ್ಚು ಶೋಧಿಸಲು ಅವಕಾಶವಿದೆಯೆಂಬುದನ್ನು ತೋರಿಸಿಕೊಟ್ಟಿದ್ದಾರೆ.

'ಸಂಸ್ಕೃತಿ ಸೌರಭ'ದಲ್ಲಿ ವೈವಿಧ್ಯಮಯ ಲೇಖನಗಳಿವೆ. 'ಬೆಳಗಾವಿ ಜಿಲ್ಲೆಯ ಸಾಂಸ್ಕೃತಿಕ ಕ್ಷೇತ್ರಗಳು', 'ಸಂಸ್ಕೃತ ಮತ್ತು ಸಾಹಿತ್ಯ ಪೋಷಣೆಯಲ್ಲಿ ಮಠಮಾನ್ಯಗಳ ಪಾತ್ರ', 'ಹಿಂದೂ-ಮುಸ್ಲಿಂ ಸಮನ್ವಯ ಪ್ರತೀಕ : ಶಿರಹಟ್ಟಿ ಮಠ' ಮುಂತಾದ ಲೇಖನಗಳ ಜೊತೆ ಕೆಲವು ಅಭಿನಂದನ ಗ್ರಂಥಗಳಿಗಾಗಿ ಬರೆದ ಲೇಖನಗಳೂ ಸೇರಿವೆ. ಅಪರೂಪಕ್ಕೆನ್ನುವಂತೆ ವಿಜಯ ಸಾಸನೂರ ಅವರ ಪತ್ತೇದಾರಿ ಸಾಹಿತ್ಯದ ಕುರಿತೂ ಒಂದು ಲೇಖನವಿದೆ.

'ಸಂಸ್ಕೃತಿ ಸೌರಭ'ದ ಮುಖ್ಯ ಲೇಖನ 'ಬೆಳಗಾವಿ ಜಿಲ್ಲೆಯ ಸಾಂಸ್ಕೃತಿಕ ಕ್ಷೇತ್ರಗಳು' ಉಪೇಕ್ಷೆಗೊಳಗಾದ– ಅತಿ ಪರಿಚಯದಿಂದ ಅವಜ್ಞೆಗೊಳಗಾದ– ಸ್ಥಳೀಯ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಿ ಅವುಗಳ ಮಹತ್ವವನ್ನು ವಿಶದೀಕರಿಸಿದ್ದಾರೆ; ಜನರಲ್ಲಿ ಜಾಗೃತ ಪ್ರಜ್ಞೆ ಮೂಡುವಂತೆ ಮಾಡಿದ್ದಾರೆ.

ರಾಜಶೇಖರ ಇಚ್ಚಂಗಿಯವರು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಬಗೆಗಿರುವ ಕಾಳಜಿಯನ್ನು ಈ ಕೃತಿಯ ಮೂಲಕ ಸಮರ್ಪಕವಾಗಿ ಮತ್ತು ಸಮರ್ಥ ರೀತಿಯಲ್ಲಿ ಅಭಿವ್ಯಕ್ತಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಸಾಂದರ್ಭಿಕವಾಗಿ ಸಭೆ, ಸಮಾರಂಭ, ವಿಚಾರ ಸಂಕಿರಣ ಮತ್ತು ಅಭಿನಂದನ ಗ್ರಂಥಗಳಿಗೆಂದು ರಚಿತವಾಗಿರುವುದರಿಂದ ಲೇಖನಗಳಿಗೆ ಸಹಜವಾಗಿಯೇ ಕೆಲ ಮಿತಿ ಪರಿಮಿತಿಗಳಿವೆ.

—ಚಂದ್ರಗೌಡ ಕುಲಕರ್ಣಿ, ಚಿಲಿಪಿಲಿ, ಖಾಸ್ಗತನಗರ, ತಾಳಿಕೋಟಿ - ೫೮೬ ೨೧೪, ಜಿ. ವಿಜಾಪುರ

೮. ಬಗೆದಷ್ಟು ಬಾನು : ಅರುಂಧತಿ ರಮೇಶ್

ಪರಿಸರ ಸಾಹಿತ್ಯ, ಮಂಜೂಸ್ ಬುಕ್ಸ್, ೧ ನೇ ಮುಖ್ಯ ರಸ್ತೆ, ೧೨ 'ಎ' ತಿರುವು, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ-೪, ಪ್ರ.ಮು. ೨೦೦೨, ಪು. ೬೫, ರೂ. ೩೫/-

ಅಧ್ಯಾಪಕಿಯಾಗಿರುವ ಅರುಂಧತಿ ರಮೇಶ್ ಅವರ ಈ ಕೃತಿ ನಲ್ನುಡಿಗಳು ಮತ್ತು ನಾಟಕಗಳು ಎಂಬ ಉಪಶೀರ್ಷಿಕೆ ಹೊಂದಿದೆ. ಇಲ್ಲಿಯ ನಲ್ನುಡಿಗಳು ೨೦೦೦-೨೦೦೨ ರ ನಡುವಿನ ಅವಧಿಯಲ್ಲಿ ಚಿತ್ರದುರ್ಗ ಆಕಾಶವಾಣಿಯಿಂದ ಬೆಳಗಿನ ಜಾವ ಪ್ರಸಾರವಾದ ಅರುಂಧತಿಯವರ ವಿಚಾರ ಲಹರಿಗಳು. 'ನಾಟಕಗಳು' ಶಾಲಾಮಟ್ಟದಲ್ಲಿ ವಿದ್ಯಾರ್ಥಿಗಳ ಪ್ರಸ್ತುತಿಗಾಗಿ ಸಿದ್ಧಪಡಿಸಿದ ರಚನೆಗಳು.

ಒಂದು ವಿಷಯದ ಸುತ್ತ ಯೋಚನೆಗಳ ಲಹರಿಯನ್ನು ಹರಿಬಿಟ್ಟು ಅದರ ಕುರಿತು ಒಂದು ತೀರ ಸಂಕ್ಷಿಪ್ತವೂ ಸಂಗತವೂ ಆದ ನುಡಿಚಿತ್ರವನ್ನು ಕಟ್ಟಿಕೊಡುವ ಇವರ ನಲ್ನುಡಿಗಳು ಆಪ್ತವಾಗಿಯೇ ಓದಿಸಿಕೊಳ್ಳುತ್ತವೆ. ಕಾವ್ಯ, ಸೂರ್ಯೋದಯ, ಬಿಡುವು, ನೋವು-ನಲಿವು, ವೇಷ-ಭೂಷಣಗಳು, ಬೆಟ್ಟ-ಗುಡ್ಡ, ಪ್ರಾಣಿಪಕ್ಷಿ, ಮಳೆ, ಕೈತೋಟ –ಹೀಗೆ ವಿಧವಿಧವಾದ ವಿಷಯಗಳ ಕುರಿತ ಚಿಂತನೆಗಳಿಲ್ಲಿವೆ. 'ಕುಟುಂಬ', 'ಮಾನ್ಯತೆ' ಇಂಥ ಕೆಲ 'ನಲ್ನುಡಿ'ಗಳು ಪ್ರಬಂಧದ ಸ್ವರೂಪದತ್ತ ವಾಲಿದ್ದು ಪ್ರಬಂಧ (ಹರಟೆಯಲ್ಲ)ವೆಂಬ ಗದ್ಯಪ್ರಕಾರದಲ್ಲಿ ಕೃಷಿಗೈಯ್ಯಲು ಇವರು ಯತ್ನಿಸಬಹುದಾಗಿದೆ.

ನಾಟಕಗಳು ಎಂಬ ವಿಭಾಗದಲ್ಲಿರುವ ಇವರ ರಚನೆಗಳು ಸೀಮಿತ ಶೈಕ್ಷಣಿಕ ಉದ್ದೇಶಕ್ಕೆ ಮಾತ್ರ ಸೂಕ್ತವಾಗಿವೆ. ಚಂದ್ರ, ಭೂಮಿ ಮತ್ತು ಹ್ಯಾಲಿ ಇವು 'ಪಾತ್ರ'ಗಳಾಗಿರುವ 'ಹ್ಯಾಲಿ ಧೂಮಕೇತು', ಅಂತೆಯೇ 'ಸೂಪರ್ ನ್ಯೂಟ್ರಾನ್' ಇವು ವಿಜ್ಞಾನ ವಿಷಯದ ಪಾಠಗಳಾಗಿದ್ದು ಇವುಗಳನ್ನು ನಾಟಕದ ರೂಪದಲ್ಲಿಡಲಾಗಿದೆ ಅಷ್ಟೆ. 'ನಮ್ಮನ್ನು ರಕ್ಷಿಸಿ' ಎಂಬ ನಾಟಕದಲ್ಲಿ ಭೂದೇವಿ, ವನದೇವಿ, ಜಲದೇವಿ ಎಂಬ ಪಾತ್ರಗಳು ಕಟ್ಟೆಗೆ ಕೂತು ಹರಟುವ ಹೆಂಗಸರಂತಾಡುತ್ತಾರೆ. ಇಂಗ್ಲಿಶ್ ನಾಟಕವೊಂದರ ರೂಪಾಂತರವಾದ 'ರಾಪ್ ರೂಬಿ' ಎಂಬ ನಾಟಕ ಮಾತ್ರ ಭಿನ್ನವೂ ಆಸಕ್ತಿದಾಯಕವೂ ಆಗಿದೆ. ಭಾಷೆಯ ಬಳಕೆಯ ಮೇಲೆ ಇವರಿಗೆ ಸಾಕಷ್ಟು ಹಿಡಿತವಿದ್ದು ಬುದ್ಧಿ-ಭಾವಗಳ ಹದವಾದ ಬೆರಕೆಯನ್ನೂ ಇವರ ಬರಹಗಳಲ್ಲಿ ಕಾಣಬಹುದು.

೯. ಸೂರ್ಯ-ಪ್ರೀತಿ : ಬಂದಗದ್ದೆ ರಾಧಾಕೃಷ್ಣ

ಪುಸ್ತಕ ಹೊಂಬಾಳೆ, ಕೆಳದಿ-೫೭೭ ೪೦೧, ಸಾಗರ. ಪ್ರ.ಮು. ೨೦೦೨, ಪು. ೪೦, ರೂ. ೨೦/-

ಧಾರವಾಡದಲ್ಲಿ ಡಾ. ಸಂಜೀವ ಕುಲಕರ್ಣಿ ಮತ್ತು ರಜನಿ ಗರುಡ್ ಸೇರಿ ಮಕ್ಕಳಿಗಾಗಿ, ಪ್ರತ್ಯೇಕವಾಗಿ ಕಾರ್ಯಕ್ರಮ ಮಾಡುತ್ತಿರುತ್ತಾರೆ. ಇವರ ಬಾಲಬಳಗದಲ್ಲಿ ಮಕ್ಕಳೊಂದಿಗೆ ಆಡುತ್ತ ಅವರಿಗೆ ನಾಟಕ ಕಲಿಸುವಾಗ ಸೂರ್ಯನ ಕುರಿತು ತಮ್ಮ ಮನದಲ್ಲಿ ಮೂಡಿದ ಭಾವನೆಗಳಿಗೆ ಬಂದಗದ್ದೆ ರಾಧಾಕೃಷ್ಣ ಚಿಕ್ಕಪುಟ್ಟ ಪದ್ಯಗಳ ರೂಪ ಕೊಟ್ಟ ಪರಿಣಾಮ 'ಸೂರ್ಯ-ಪ್ರೀತಿ'. ಈ ಪದ್ಯಗಳಿಗೆ ಪೂರಕವಾಗಿ ರಾಧಾಕೃಷ್ಣ ತಾವೇ ಬಿಡಿಸಿದ ಮುದ್ದಾದ ರೇಖಾಚಿತ್ರಗಳನ್ನು ಸೇರಿಸಿದ್ದಾರೆ. ಒಂದು ಭಾಗದಲ್ಲಿ ಸೂರ್ಯನನ್ನುದ್ದೇಶಿಸಿದ ಅಮಾಯಕ ರಚನೆಗಳಿವೆ. ಉದಾ : ೧. "ಸೂರ್ಯ ನೀನು ಮೂಡಿದ ಮೇಲೆ ಹಕ್ಕಿ ಹಾಡುವುದೇನಯ್ಯಾ? ಅಥವಾ ಹಕ್ಕಿ ಹಾಡಿದ ಮೇಲೆ ನೀನು ಮೂಡುವೆಯೇನಯ್ಯಾ?" ೨. "ಬಾರೋ ಬಾರೋ ಸೂರ್ಯಾ ಬಾರೋ ನಮ್ಮ ಮನೆಗೆ ಆಟ ಆಡಿ ತಿಂಡಿ ತಿಂದು ಹೋಗಬಹುದು ಸಂಜೆಗೆ."

ಸಾಮಾನ್ಯವಾಗಿ ನಾಲ್ಕರಿಂದ ಎಂಟು ಸಾಲುಗಳ ಈ ರಚನೆಗಳು ತಮ್ಮ ಸರಳ ಗುಣದಿಂದಲೇ ಆಪ್ತವಾಗುತ್ತವೆ. "ಬೆಳಗಾಗಲು ನೀನೇ ಕಾರಣ ನೀನೇ/ಕತ್ತಲಾಗಲು ನೀನೇ ಕಾರಣ ನೀನೇ/ಹೊಳೆಯಾಗಿ ಕಡಲಾಗಿ ಆವಿ ಮೋಡಕ್ಕೆ ಈ ಚಕ್ರದಾಟಕ್ಕೆ ನೀನೇ ಕಾರಣ ನೀನೇ" ಎಂಬಂಥ ಸರಳ ರಚನೆಗಳ ನಡುವೆ ಥಟ್ಟನೆ "ರಾತ್ರಿ ಸೂರ್ಯ ಇರೋದಿಲ್ಲ/ಹೇಳುವೆ ಅಲ್ಲವೇ ಗೆಳೆಯಾ? ಇರುವನು ಹೆಚ್ಚು ಬಯಕೆಯಲ್ಲಿ/ಬೆಚ್ಚನೆ ಹಾಸಿದ ಅನುಭವದಲ್ಲಿ" ಎಂಬ ಪದ್ಯ ಬಂದು ಚಕಿತಗೊಳಿಸುತ್ತದೆ. ದೇವರೆಂದು, ಭಾಸ್ಕರ-ಆದಿತ್ಯ-ರವಿ ಎಂದು ಹತ್ತು ಹಲವು ರೀತಿ ಹಾಡಿ ಹೊಗಳಿಸಿಕೊಳ್ಳುವ ಸೂರ್ಯ 'ದೇವರೆಂದರೆ' ಎನ್ನುವ

ಇಲ್ಲಿಯ ಕೊನೆಯ ಪದ್ಯದಲ್ಲಿ ಹೇಳುತ್ತಾನೆ : "ದೇವರೆಂದರೆ ಬೇರೆ ಯಾರೂ ಅಲ್ಲ/ಕಿರೀಟ ತೊಟ್ಟ ಕಾವಿ ಉಟ್ಟ/ಬೂದಿ ಬಳಿದ ವಿಭೂತಿ ಪುರುಷ/ಯಾರೂ ಅಲ್ಲ ಯಾರೂ ಅಲ್ಲವೋ ಗೆಳೆಯಾ/ದೇವರೆಂದರೆ/ ಜನರಿಗೆ ನಾವು ಮಾಡುವ ಉಪಕಾರ/ದೇವರೆಂದರೆ/ಜನರಿಗೆ ನಾವು ನೀಡುವ ಸಹಕಾರ."

ಮಕ್ಕಳ ಎಳೆ ಮನಸಿಗೆ ಒಗ್ಗುವಂತೆ ಭಾವಗಳನ್ನು ರೂಪಿಸಬಲ್ಲ ಬಂದಗದ್ದೆ ರಾಧಾಕೃಷ್ಣರಿಂದ ಅರ್ಥಪೂರ್ಣವಾದ ಮಕ್ಕಳ ಸಾಹಿತ್ಯವನ್ನು ನಿರೀಕ್ಷಿಸಬಹುದು.

೧೦. ಬರಡು ಭೂಮಿಯ ಸತ್ಯಗಳು : ಡಾ. ಡಿ. ಸಿ. ರಾಜಪ್ಪ

ಸಿದ್ಧರಾಮಗಿರಿ ಪ್ರಕಾಶನ, ೮, ಸಿದ್ಧರಾಮಗಿರಿ, ಸಂಪಿಗೆನಗರ, ಕೆಲಗೇರಿ ರಸ್ತೆ, ಧಾರವಾಡ-೫೮೦ ೦೦೮, ಪ್ರ.ಮು. ೨೦೦೨, ಪು. ೭೩, ರೂ. ೭೫/-

ಬಾಯ್ಬಿಟ್ಟು ಕೇಳಿರುವೆ/ಬಿಗುಮಾನ ಬಿಟ್ಟಿರುವೆ/ಕಷ್ಟವನು ಪಟ್ಟಿರುವೆ/
ಕನ್ನಡದ ಕವಿ ನಾನು/ಸನ್ಮಾನಿಸಿ/......................../ಬಹುದಿನದ ನನ್ನಾಸೆ/
ಈಡೇರಿಸಿ/ನೀವೆಲ್ಲಾ ಕೂಡಿ/ನನಗೊಂದು/ಗತಿ ಕಾಣಿಸಿ (ಸನ್ಮಾನಿಸಿ)

ಹೀಗೆ fraudulent ಸಾಂಸ್ಕೃತಿಕ ಪ್ರವೃತ್ತಿಗಳನ್ನು ವಿಡಂಬಿಸುವ ಡಿ. ಸಿ. ರಾಜಪ್ಪನವರ ಸಮರ್ಥ ವ್ಯಂಗ್ಯ ಅವರ ಕಾವ್ಯದಲ್ಲಿ ತೀರ ವಿರಳವಾಗಿ ಕಾಣಿಸಿಕೊಳ್ಳುತ್ತದೆನ್ನುವದು ವಿಚಿತ್ರ. ('ಕಳ್ಳ ಮತ್ತು ಪೋಲಿಸ್ ನಾಯಿ' ಎಂಬ ಇನ್ನೊಂದು ಕವಿತೆಯನ್ನು ಹೊರತುಪಡಿಸಿದರೆ ಈ ವ್ಯಂಗ್ಯ ಬೇರೆ ಕವಿತೆಗಳಲ್ಲಿ ಕಾಣುವದೇ ಇಲ್ಲ) ಸಾಮಾನ್ಯವಾಗಿ ಅವರ ಕವಿತೆಗಳಲ್ಲಿ ಕಾಣುವದು ನೋವು-ವಿಷಾದ. ಒಮ್ಮೊಮ್ಮೆ ಅವರ ಕವಿತೆಯ ಸರಕು ಎಷ್ಟು ತೆಳುವಾಗಿರುತ್ತದೆಂದರೆ ವಿಷಾದ ಸಕಾರಣವೇ ವಿನಾಕಾರಣವೇ ಎಂಬುದೇ ಗೊಂದಲವಾಗುತ್ತದೆ.

ಆದರೆ ರಾಜಪ್ಪನವರ ಕವಿತೆಗಳಲ್ಲಿ ಅನ್ಯಾಯವನ್ನು, ಅಸಮತೆಯನ್ನು, ಅಸಹಾಯಕತೆಯನ್ನು ಅಳಲನ್ನು ನೋಡಿ ಕರಗುವ, ಮರುಗುವ ಒಂದು ಕೋಮಲ ಮನಸಿದೆ. ಅದೆಲ್ಲವನ್ನು ಕವಿತೆಯಾಗಿಸುವ ಪ್ರಯತ್ನದಲ್ಲಿ ಅವರ ಸಾಫಲ್ಯದ ಪ್ರಮಾಣ ಏಕಪ್ರಕಾರವಾಗಿಲ್ಲ. ಕೆಲ ಸಲ ಪ್ರಾಸಪ್ರಿಯತೆ, ಅತ್ಯಾದರ್ಶಗಳಿಗೆ ಅಂಟಿಕೊಳ್ಳುವುದರಿಂದ, ಇನ್ನು ಕೆಲ ಸಲ ಅಭಿವ್ಯಕ್ತಿಯ ಅತಿ ಸಾಮಾನ್ಯತೆಯಿಂದ ಇವರ ಕಾವ್ಯಸತ್ವ ಸೀಮಿತಗೊಳ್ಳುತ್ತ ಹೋಗುತ್ತದೆ. ತಮ್ಮ ಕಾವ್ಯಾಭಿವ್ಯಕ್ತಿಯ ಕುರಿತು ಇವರು ಸ್ವಲ್ಪ ಹಿಂಜರಿಕೆಯನ್ನೇ ಇಟ್ಟುಕೊಂಡವರು. ಬರಡು ಭೂಮಿಯ ಸತ್ಯಗಳು, ಹೋರಾಟ, ಪ್ರಪಂಚ, ದಿಗ್ಗಜರು, ಶತಮಾನದ ಮಳೆ ಮೊದಲಾದ ಈ ಸಂಕಲನದ ಕವಿತೆಗಳು ಭರವಸೆ ಮೂಡಿಸುವಂತಿವೆ. ಇಲ್ಲಿ ಕೆಲ ಪ್ರೇಮ ಕವಿತೆಗಳೂ ಇದ್ದು 'ಓ ಪ್ರಿಯತಮೆ', 'ನೊಂದು ನಗುವಳು ಗೆಳತಿ' ಗಮನ ಸೆಳೆಯುತ್ತವೆ.

"ನೂರಾರು ಜಾತಿಗಳ/ನೂಕಾಚೆ ದೂರ/ನಾವೆಲ್ಲಾ ಭಾರತೀಯರು/ಒಂದಾಗಿ ಬಾಳೋಣ ಬಾರ" (ಭಾರತೀಯರು) ಇಂಥ ಸಾಲುಗಳು ಕುವೆಂಪು ಅವರ 'ನೂರು ದೇವರನೆಲ್ಲ ನೂಕಾಚೆ ದೂರ'ವೆಂಬುದರ ನೇರ ಅನುಕರಣೆಯಾಗುತ್ತದೆ. ಕುವೆಂಪು ಅಥವಾ ಇನ್ನಾರೋ ಕವಿವಾಣಿಯ ಪ್ರೇರಣೆ ಕಾವ್ಯೋಕ್ತಿಗಳಿಗೆ ವಿಸ್ತರಿಸದೆ ಜೀವನಾದರ್ಶಕ್ಕೆ ಸೀಮಿತಗೊಂಡಾಗ ಅಭಿವ್ಯಕ್ತಿಯ ಸ್ವಂತಿಕೆ ಸಾಧ್ಯವಾಗುತ್ತದೆ. ಶುಭ ಹಾರೈಕೆಗಳೊಂದಿಗೆ ರಚನಾತ್ಮಕ ಸಲಹೆಯ ರೀತಿಯ ಕೆಲ ಮಾತುಗಳನ್ನು ಜಿ. ಎಸ್. ಶಿವರುದ್ರಪ್ಪನವರು ಈ ಸಂಕಲನಕ್ಕೆ ಬರೆದಿದ್ದಾರೆ. ವಿಷಯ, ನೋಟ, ಭಾವ ಮತ್ತು ಅವುಗಳ ತೀವ್ರತೆಯ ಪ್ರಮಾಣಕ್ಕೂ ಕವಿತೆಯ ಪರಿಣಾಮಕ್ಕೂ ಇರುವ ಸಂಬಂಧಗಳನ್ನು ಕಂಡುಕೊಂಡು ಭಾಷೆಯ ಸೂಕ್ಷ್ಮಗಳನ್ನು ಗೌರವಿಸುವತ್ತ ರಾಜಪ್ಪನವರು ಹೆಚ್ಚು ಪರಿಣಾಮಕಾರಿಯಾದ ಕವಿತೆಗಳನ್ನು ರಚಿಸುವಂತಾಗಲಿ. ಹಲವು ವರ್ಷಗಳಿಂದ ಉನ್ನತ ಪೊಲೀಸ್ ಹುದ್ದೆಗಳಲ್ಲಿ ಕಾರ್ಯನಿರತ ರಾಗಿದ್ದುಕೊಂಡು ಆ ವೃತ್ತಿ ಬಯಸುವ ಗುಣದೋಷ ವಿಶೇಷಗಳ ಜೊತೆ ಅರ್ಥಾತ್ ಸಂಬಂಧವಿಲ್ಲದ ಕಾವ್ಯವೆಂಬ ಪ್ರವೃತ್ತಿಯನ್ನು ಅಪ್ಪಿರುವ ರಾಜಪ್ಪನವರ ಕಾವ್ಯಾಸಕ್ತಿ ಮುಂದುವರಿಯಲಿ.

೧೧. ನಾಕು ಸಾಲುಗಳ ನಡುವೆ : ಮಲ್ಲಿಕಾರ್ಜುನ ಬನ್ನಿ

ತಾಯಿ ಪ್ರಕಾಶನ, ಗುಳೇದಗುಡ್ಡ, ಜಿ. ಬಾಗಲಕೋಟ. ಪ್ರ.ಮು. ೨೦೦೨. ಪು. ೫೬, ರೂ. ೪೫/-

ಇದು ಮಲ್ಲಿಕಾರ್ಜುನ ಬನ್ನಿಯವರ ೨೦೦ ಚೌಪದಿಗಳ ಸಂಗ್ರಹ. ಶೀರ್ಷಿಕೆಯೇ ಸೂಚಿಸುವಂತೆ ಮೇಲ್ನೋಟಕ್ಕೆ ಕಾಣುವ `ಸತ್ಯ`ಗಳ ನಡುವೆ ಇರುವ ಸಂದಿಗ್ಧಗಳನ್ನು, ವಾಸ್ತವಗಳನ್ನು ಧ್ವನಿಸಲು ಇಲ್ಲಿಯ ಚೌಪದಿಗಳು ಯತ್ನಿಸಿವೆ. ಬನ್ನಿಯವರು ಕರ್ನಾಟಕದ ಶಾಸನಸಭೆಯ ಸದಸ್ಯರಾಗಿದ್ದವರು. ಸ್ವಾಭಾವಿಕವಾಗಿಯೇ ರಾಜಕೀಯದ ಅವರ ಆಸಕ್ತಿ ಇಲ್ಲಿಯೂ ರೂಪು ಪಡೆದಿದೆ. ವಿಶೇಷವೆಂದರೆ ಬಹುಮಟ್ಟಿಗೆ ನಮ್ಮ ಇಂದಿನ ರಾಜಕೀಯ ಸಂಸ್ಕೃತಿಯ ವಿಡಂಬನಾಯೋಗ್ಯ ಮುಖಗಳನ್ನು (ಅವುಗಳಿಗೇನೂ ಕೊರತೆಯಿಲ್ಲ) ಅನಾವರಣಗೊಳಿಸಿದ್ದಾರೆ. ದಿನಕರ ದೇಸಾಯಿಯವರ ಮಾದರಿಯಲ್ಲೇ ರಚಿತವಾಗಿರುವ ಈ ಚೌಪದಿಗಳಲ್ಲಿ ಹೆಚ್ಚಿನವು ಪ್ರಬುದ್ಧವಾಗಿದ್ದು ಆಸ್ಥೆಯಿಂದ ಓದಿಸಿಕೊಳ್ಳುತ್ತವೆ. ಇನ್ನು ಕೆಲವು ತೀರ ಸರಳೀಕೃತ ಚಿಂತನೆಗಳ ಪರಿಣಾಮವಾಗಿವೆ. ಬಂಧದಲ್ಲಿಯೂ ಕೆಲವು ಸಾಂದ್ರವಾಗಿದ್ದರೆ ಇನ್ನು ಕೆಲವು ಜಾಳಾಗಿವೆ. ಭ್ರಷ್ಟಾಚಾರ, ಭಯೋತ್ಪಾದನೆ, ಆಷಾಢಭೂತಿತನ, ರಾಜಕೀಯ ನಾಯಕರ ವಿವೇಚನಾರಹಿತ ಯೋಜನೆಗಳು, ಚಟಗಳು, ಪ್ರೀತಿ, ಪ್ರಕೃತಿ –ಹೀಗೆ ವೈವಿಧ್ಯದಿಂದ ಕೂಡಿದ ವಿಷಯಗಳನ್ನು ಇವರ ಚೌಪದಿ ಒಳಗೊಂಡಿವೆ. ಒಮ್ಮೊಮ್ಮೆ ಪ್ರಾಸದ ಅನಿವಾರ್ಯಕ್ಕೆ ಅರ್ಥದ ಬಲಿಯಾಗುತ್ತದೆ. ಉದಾ : `ನೋಡಬೇಕವಳ ಆ ತೆರೆದ ಬಟ್ಟಲಗಣ್ಣು` ಎಂಬುದಕ್ಕೆ ಅಂತ್ಯಪ್ರಾಸ ಹೊಂದಿಸಲು ಜೋಡುನಳಿಕೆಯ ಗನ್ ಒಂದು ಚೌಪದಿಯಲ್ಲಿ `ಡಬಲ್ ಬಾರಗಣ್ಣು` ಆಗುತ್ತದೆ. ಇಂಥ ಪ್ರಯೋಗಗಳನ್ನು ಕವಿ ನಿವಾರಿಸಿಕೊಳ್ಳಬೇಕು. "ಬೀಗಿ ನಿಂತ ಯುವತಿ ಓರ್ವಳು/ಬಸ್ಸಿನಲಿ ಕಂಡಕ್ಟರನ ಕೈ ಮುಟ್ಟಿ ಕೇಳಿದಳು/ಇದು ವಿಧಾನಸೌಧವೆ?/ಅಲ್ಲಮ್ಮ ನನ್ನ ಕೈ ಎಂದಾಗ ನೀರಾದಳು." ಹೀಗೆ ಜೋಕುಗಳನ್ನು ಚೌಪದಿಗೆ ತರುವ ಪ್ರಯತ್ನ ಮಾಡಿದ್ದಾರೆ. ಗಾದೆಮಾತುಗಳನ್ನು ಸೂಕ್ತವಾಗಿ ಬಳಸಿಕೊಂಡಿದ್ದಾರೆ. ಹಮ್ಮುರಾಬಿ ಶಾಸನ ಒಂದು ಆದರ್ಶದ, ಭಾರತಕ್ಕೆ ಅಪೇಕ್ಷಿತವಾದ ಮಾದರಿ ಎಂಬ ಗ್ರಹಿಕೆ ಇವರಿಗಿರುವಂತಿದೆ. ಚೌಪದಿಗಳಿಗೆ ಹಿನ್ನೆಲೆಯಾದ ಇವರ ಚಿಂತನೆ ಇನ್ನೂ ಸೂಕ್ಷ್ಮಗೊಂಡರೆ ಮಲ್ಲಿಕಾರ್ಜುನ ಬನ್ನಿಯವರಿಗೆ ಈ ಪ್ರಕಾರದಲ್ಲಿ ಒಳ್ಳೆಯ ಸಾಧನೆಯ ಸಾಧ್ಯತೆಗಳಿವೆ.

—**ಪ್ರೊ. ಅಶೋಕ ಶೆಟ್ಟರ್**, ಇತಿಹಾಸ ಹಾಗೂ ಪ್ರಾಕ್ತನಶಾಸ್ತ್ರ ವಿಭಾಗ, ಕ.ವಿ.ವಿ., ಧಾರವಾಡ - ೩

೧೨. ಕುನಾಲ : ಶರಣಗೌಡ ಎರಡೆತ್ತಿನ

ಮಾ ಪ್ರಿಂಟ್-ಪಬ್ಲಿಶರ್ಸ್, ೫ನೇ ಮೇನ್, ಸಂಪಗಿ ಬಡಾವಣೆ, ಬೆಂಗಳೂರು-೫೬೦ ೦೭೯, ಪ್ರ.ಮು. ೨೦೦೩, ಪು. ೧೦೪, ರೂ. ೭೫/-

ಮಕ್ಕಳ ಸಾಹಿತ್ಯದಲ್ಲಿ ಕವನಗಳದೇ ದೊಡ್ಡ ಪಾಲು. ಪ್ರತಿವರ್ಷ ಮಕ್ಕಳ ಕವನ ಸಂಕಲನಗಳು ಸಾಕಷ್ಟು ಸಂಖ್ಯೆಯಲ್ಲಿ ಪ್ರಕಟವಾಗುತ್ತಿವೆ. ಹೋಳಿಗೆ, ಕರಿಗಡುಬುಗಳ ಹೊದಿಕೆ ಬೇರೆ ಬೇರೆ ಇದ್ದು ಒಳಗಿನ ಹೂರಣ ಒಂದೇಯಾಗಿರುವಂತೆ ಹೊಸ ಶೀರ್ಷಿಕೆಗಳು ಬೇರೆ ಬೇರೆಯಾಗಿರುತ್ತವೆ. ತೆರೆದು ಓದಿದರೆ ಒಂದೇ ವಸ್ತು ಒಂದೇ ವಿಷಯ. ಒಂದೇ ಗತ್ತು ಒಂದೇ ಲಯ ಅದೇ ಗೇಯ. ಆದರೆ ಗದ್ಯ ಸಾಹಿತ್ಯದಲ್ಲಿ ಈ ತರಹದ ಏಕತಾನತೆಗೆ ಅವಕಾಶವಿರುವದಿಲ್ಲ. ಮಕ್ಕಳ ಸಾಹಿತ್ಯದಲ್ಲಿಯೂ ವಿಷಯ ವೈವಿಧ್ಯತೆಗಳನ್ನು ಧಾರಾಳವಾಗಿ ಬಳಕೆಯಲ್ಲಿ ತರಬಹುದು. ಜನಪ್ರಿಯವಾದ ಗದ್ಯ ಪ್ರಕಾರ ಮಕ್ಕಳನ್ನೂ ಆಕರ್ಷಿಸಬಲ್ಲುದು. ಈ ನಿಟ್ಟಿನಲ್ಲಿ ಕಥೆ ಕಾದಂಬರಿಗಳು ಮಕ್ಕಳ ಸಾಹಿತ್ಯದಲ್ಲಿ ಇತ್ತೀಚೆಗೆ ಹೆಚ್ಚಾಗಿ ಪ್ರಕಟವಾಗುತ್ತಿರುವುದು ಆರೋಗ್ಯದಾಯಕವೆಂದೇ ಹೇಳಬಹುದು. ಅಂತಹ ಸಾರ್ಥಕ ಪ್ರಯತ್ನ ಮಾಡುತ್ತಿರುವವರಲ್ಲಿ ಶರಣಗೌಡ ಎರಡೆತ್ತಿನ ಅವರೂ ಒಬ್ಬರು.

ಈಗಾಗಲೇ ಶರಣಗೌಡರು ಮಕ್ಕಳ ಸಾಹಿತ್ಯದಲ್ಲಿ ಹೆಸರು ಪಡೆದಿದ್ದಾರೆ. ಸಾಹಿತ್ಯ ಅಕಾಡೆಮಿಯಿಂದ `ಮುತ್ತಿನ ಬೆಟ್ಟ` ಮಕ್ಕಳ ಕಾದಂಬರಿಗೆ ಪ್ರಶಸ್ತಿ ಪಡೆದು ಶೃಂಗರಿಸಿದ ಚಕ್ಕಡಿಯಲ್ಲಿ ಮೆರೆಸಿದ್ದಾರೆ. ಈಗ ವಿಭಿನ್ನ ಶೈಲಿಯಲ್ಲಿ ಪ್ರಸಕ್ತ ಸಮಸ್ಯೆಗಳನ್ನು ವಿಶ್ಲೇಷಿಸಿ `ಕುನಾಲ` ಮಕ್ಕಳ ಕಾದಂಬರಿ

ರಚಿಸಿದ್ದಾರೆ. ಮಕ್ಕಳ ವಯೋಗುಣದ ಚಾಂಚಲ್ಯಗಳನ್ನು, ಸಮಸ್ಯೆಗಳನ್ನು ತೆರೆದಿಟ್ಟಿದ್ದಾರೆ. ಪರೋಕ್ಷವಾಗಿ ಓದುಗರು ಮತ್ತು ಪಾಲಕರು ಯೋಚಿಸುವಂತೆ ಪರಿಹಾರೋಪಾಯಗಳನ್ನು ಸೂಚಿಸಿದ್ದಾರೆ.

`ಕುನಾಲ' ಒಬ್ಬ ಪ್ರತಿಭಾವಂತ ಮಗು. ಚುರುಕುಳ್ಳ ಚೇತನ. ಆದರೆ ಮಗುವಿನ ತಂದೆಗೆ ಬಡತನ. ಅಲ್ಲದೆ ಸಿಡುಕು, ಅಜ್ಞಾನ. ಕುನಾಲನ ತುಂಟತನ ತಂದೆ ಚೆನ್ನಪ್ಪನಿಗೆ ಅಪಥ್ಯವಾಗಿರುತ್ತದೆ. ಕುನಾಲನ ತಂದೆಯ ಅಣ್ಣ ಮಾರುತಿ ಕುನಾಲನ ಜಾಣ್ಮೆ, ನೆನಪಿನ ಶಕ್ತಿ ಕಂಡು ತಮ್ಮೂರಿಗೆ ಕರೆದುಕೊಂಡು ಹೋಗುತ್ತಾನೆ. ಬೌದ್ಧಿಕವಾಗಿ ಮಗು ಬೆಳೆಯುವಂತೆ ಪ್ರಯತ್ನಿಸುತ್ತಾನೆ. ಜೊತೆಗೆ ಮಗು ದೈಹಿಕವಾಗಿ ಸದೃಢನಾಗಿ ಬೆಳೆಯಲೆಂದು ತನ್ನ ಮಕ್ಕಳ ಜೊತೆಗೆ ಜಾಗಿಂಗ್ ಮಾಡಲು ಕಳಿಸುತ್ತಾನೆ. ಇಲ್ಲಿ ಕಾದಂಬರಿಕಾರರು ಕಥೆಗೆ ತಿರುವು ಕೊಡುತ್ತಾ ಓದುಗರನ್ನೂ ಮಕ್ಕಳನ್ನೂ ಆಕರ್ಷಿಸಿದ್ದು ವಿಶೇಷ.

ಕುನಾಲನು ಒಂದು ಮುಂಜಾನೆ ಜಾಗಿಂಗಿಗೆ ಹೋದಾಗ ಕಳ್ಳರಿಂದ ಅಪಹರಿಸಲ್ಪಡುತ್ತಾನೆ. ದೊಡ್ಡಪ್ಪ ಮಾರುತಿಗೂ ದೊಡ್ಡಮ್ಮ ರುದ್ರವ್ವನಿಗೂ ಆಕಾಶವೇ ಕಳಚಿ ಬಿದ್ದಂತಾಗುತ್ತದೆ. ಅಪಹರಣಕಾರರು ಫೋನ್ ಮಾಡಿ ಮಗುವಿನ ಬಿಡುಗಡೆಗೆ ೧೦ ಲಕ್ಷ ರೂಪಾಯಿ ಕೇಳುತ್ತಾರೆ. ಈ ಕೇಸಿನ ಪತ್ತೆಗಾಗಿ ಪೋಲೀಸರೂ ಪ್ರಯತ್ನಿಸಿ ವಿಫಲರಾಗುತ್ತಾರೆ. ಆದರೆ ಕಳೆದುಹೋದ ಕುನಾಲನನ್ನು ಮಾರುತಿಯ ಮಕ್ಕಳಾದ ವಿದ್ಯಾ, ರಂಗಣ್ಣ ಪತ್ತೆ ಹಚ್ಚಿ ಬಿಡಿಸಿಕೊಂಡು ಬರುತ್ತಾರೆ.

ಮಕ್ಕಳ ಸಾಹಸದ ಉಪಕಥೆಗಳನ್ನೂ ಲೇಖಕರು ಕಾದಂಬರಿಯಲ್ಲಿ ಬಳಸಿಕೊಂಡದ್ದು ಉಪಯುಕ್ತವೇ ಆಗಿದೆ. ಮುಂದೆ ಕುನಾಲ ತನ್ನೆಲ್ಲ ಸುಪ್ತ ಪ್ರತಿಭೆಗಳನ್ನು ಅರಳಿಸಿಕೊಂಡು ಬೆಳೆಯುವ ಮೊದಲೇ ದೊಡ್ಡಪ್ಪನಾದ ಮಾರುತಿ ಮಗುವಿಗೆ ಪ್ರೋತ್ಸಾಹ ನೀಡದೆ ಮರಳಿ ತಮ್ಮನ ಹತ್ತಿರ ಕಳಿಸಿಕೊಡುತ್ತಾನೆ. ನಮ್ಮ ಕಣ್ಮುಂದೆ ಇಂತಹ ಹಲವಾರು ಉದಾಹರಣೆಗಳು ನಡೆಯುತ್ತಲೇ ಇರುತ್ತವೆ. 'ಹಲ್ಲಿದ್ದರೆ ಕಡ್ಲಿ ಇಲ್ಲ ಕಡ್ಲಿ ಇದ್ದರೆ ಹಲ್ಲಿಲ್ಲ' ಎನ್ನುವ ಗಾದೆಯಂತೆ ನಾವಿಂದು ಹಲವಾರು ಮಕ್ಕಳನ್ನು ಕಾಣುತ್ತೇವೆ. ಪ್ರತಿಭೆ ಇರುತ್ತದೆ, ಮಗುವಿನ ಹಿಂದೆ ಹಣದ ಶಕ್ತಿ ಇರುವದಿಲ್ಲ. ಹಣವಂತರಿರುತ್ತಾರೆ, ಮಕ್ಕಳಲ್ಲಿ ಪ್ರತಿಭೆ ಇರುವದಿಲ್ಲ. ಪ್ರತಿಭಾವಂತ ಮಕ್ಕಳಿಗೆ ಸಮಾಜ ಮತ್ತು ಸರಕಾರ ಪ್ರೋತ್ಸಾಹ, ಉತ್ಸಾಹ ನೀಡಿ ಧನ ಸಹಾಯ ಮಾಡಿದರೆ ಎಷ್ಟೋ ಪ್ರತಿಭಾವಂತ ಮಕ್ಕಳು ದೇಶದ ಉಪಯುಕ್ತ ಆಸ್ತಿಯಾಗಿ ಬೆಳೆಯಬಲ್ಲರೆಂಬ ಎಂಬ ಸಂದೇಶವನ್ನು ಲೇಖಕರು ನೀಡಿದ್ದಾರೆ.

—ಎಂ. ಡಿ. ಗೋಗೇರಿ, ನವಅಯೋಧ್ಯಾನಗರ, ಹುಬ್ಬಳ್ಳಿ - ೫೮೦ ೦೨೪

೧೩: ಈ ಮಣ್ಣು ಅಪ್ಪಿಕೊಳ್ಳುವ ಮುನ್ನ : ಗವಿಸಿದ್ಧ ಎನ್. ಬಳ್ಳಾರಿ

ಲೋಹಿಯಾ ಪ್ರಕಾಶನ, ಗಾಂಧೀನಗರ, ಬಳ್ಳಾರಿ-೫೮೩ ೧೦೩, ಪ್ರ.ಮು. ೨೦೦೪, ಪು. ೧೮೮, ರೂ. ೭೫/-

ಗವಿಸಿದ್ಧ ಎನ್. ಬಳ್ಳಾರಿಯವರು `ಕತ್ತಲು ದೇಶದ ಪದ್ಯಗಳು' (೧೯೭೭), `ಕಪ್ಪುಸೂರ್ಯ' (೧೯೮೪) ಕವನ ಸಂಕಲನಗಳನ್ನು ತಂದ ನಂತರ, ಕಳೆದೆರಡು ವರ್ಷಗಳಿಂದ ಮೂರನೆಯ ಸಂಕಲನ ತರಲು ತವಕಪಡುತ್ತಿದ್ದರು. ೨೦೦೨ ರಲ್ಲಿ ಗವಿಸಿದ್ಧರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಾಗ, ಸಂದರ್ಶಕರೊಬ್ಬರಿಗೆ ಇಷ್ಟರಲ್ಲಿಯೇ ತಮ್ಮ ಕವನಸಂಕಲನ ಹೊರತರುವುದಾಗಿ ತಿಳಿಸಿದ್ದರು.

ಲೋಹಿಯಾ ಪ್ರಕಾಶನದ ಸಿ. ಚೆನ್ನಬಸವಣ್ಣ ಗವಿಸಿದ್ಧರ ಸಾವಿನ ಮುನ್ನಾದಿನ ಸರ್ವಾಂಗ ಸುಂದರವಾದ `ಈ ಮಣ್ಣು ಅಪ್ಪಿಕೊಳ್ಳುವ ಮುನ್ನ' ಅವರ ಕೈಗಿತ್ತರು. ಮುನ್ನುಡಿ, ಬೆನ್ನುಡಿ ಇವರಿಂದ ಓದಿಸಿ ಕೇಳಿ ಗವಿಸಿದ್ಧರು ಸಂತೃಪ್ತಿಯ ವಿಷಾದದ ನಗೆ ಬೀರಿದ್ದರು. ಆದರೆ ಮರುದಿನ ಕವಿಯ ಶ್ರದ್ಧಾಂಜಲಿ ಸಭೆಯಲ್ಲಿ ಸಂಕಲನ ಬಿಡುಗಡೆಗೊಂಡಿದ್ದೊಂದು ದೌರ್ಭಾಗ್ಯ!

ಗವಿಸಿದ್ಧ ಎನ್. ಬಳ್ಳಾರಿ ವರ್ತಮಾನದ ಕವಿ. ಸಮಕಾಲೀನ ಸಂದರ್ಭಗಳಿಗೆ ತಕ್ಷಣ ಪ್ರತಿಕ್ರಿಯಿಸುವ ಸೂಕ್ಷ್ಮತೆ ಇತ್ತು. ಇವರ ಕವನಗಳು ಕುತೂಹಲ ಕೆರಳಿಸುತ್ತವೆ; ಆಕರ್ಷಕವಾಗಿರುತ್ತವೆ. ಕವಿತೆಯ ಸಂದರ್ಭ ಹೊಳೆದು, ಕೆಲಿಡೊಸ್ಕೋಪಿನ ವರ್ಣವೈವಿಧ್ಯತೆ ನಿರ್ಮಾಣಗೊಂಡು ಬಿಡುತ್ತವೆ. ಸಭೆ, ಸಮಾರಂಭ, ಕವಿಗೋಷ್ಠಿಗಳಲ್ಲಿ ಓದಿದಾಗಂತಲೂ ಮೋಡಿಮಾಡಿ ಬಿಡುತ್ತವೆ.

ಜೆ. ಎಚ್. ಪಟೇಲರ ಸಾವಿನ ನಂತರ ದಳ ಪರಿವಾರದ ರಾಜಕಾರಣಗಳ ಕುರಿತ ಧ್ವನಿಪೂರ್ಣ ಪದಗುಚ್ಛಗಳನ್ನು ಗಮನಿಸಬಹುದು :

ನಿಮ್ಮವರು 'ಪರಿವಾರ'ವೆಂಬ ದೊಡ್ಡ ಹೆಸರನ್ನಿಟ್ಟುಕೊಂಡು
ಪರಿಹಾರ ಕಂಡುಕೊಳ್ಳದವರ ದಂಡು ಪಾಳ್ಯವಾಗಿದೆ
ಒಡೆದು ಹೋದವರು, ಸಿಡಿದು ಹೋದವರು
ಕೂಡುತ್ತೇವೆ ಕೂಡುತ್ತೇವೆ ಎಂದು ಕೂಡಲಸಂಗಮದಲ್ಲಿ
ಮುಳುಗುತ್ತಲೇ ಇದ್ದಾರೆ –ತೇಲದಂತೆ–
ನಿಮ್ಮ ಅಧಿಕಾರದ ಸಂತೆ । ಮುಗಿದರೂ ನೀವು ತತ್ವರಾಜಕಾರಣಕ್ಕೆ । ಸಂತರೇ ।
* * *
ನಿಮ್ಮ ಒಣಗಿದ ಜಾಲಿ ಬೇಲಿಗಳ । ತೋಟದಲಿ ಹದ್ದು ಕಾಗೆ ಕೋಗಿಲೆಗಳ ।
ಅಪಸ್ವರದ ಜುಗಲ್‌ಬಂದಿ । (ಜೆ. ಎಚ್. ಪಟೇಲರು : ಅವರೊಂದಿಗೆ)

ಹದ್ದು ಕಾಗೆಗಳೊಂದಿಗೆ ಕೋಗಿಲೆಗಳಿವೆ ಎಂಬುದರ ಅರಿವು ಮೂಡಿಸುವಲ್ಲಿ ಮತ್ತು ಪರಿವಾರ, ಕೂಡಲಸಂಗಮ, ಸಂತ, ಅಪಸ್ವರದ ಜುಗಲ್‌ಬಂದಿಯಂಥ ಪದಗುಚ್ಛಗಳ ಅರ್ಥಸ್ಫುರಣದಿಂದ ಕವನ ಯಶಸ್ವಿಯಾಗಿದೆ.

ಏಕೆ- ನನ್ನ ಬರಿ ಜಯಂತಿ ಮಾಡುತ್ತೀರಿ?
ನಿಜವಾದ ಸಮಾನತೆಯ ವೈಜಯಂತಿ ಎಂದು ಮೊಳಗಿಸುತ್ತೀರಿ?
* * *
ಆಚಾರವೇ ಸ್ವರ್ಗ । ಸತ್ಯವೇ ದೇವಲೋಕ । ನೆಲಸೊಂದೇ ಹೊಲಗೇರಿ ಶಿವಾಲಯಕ್ಕೆ ।
ಯಾಕೆ ಬೊಗಳುತ್ತೀರಿ ನನ್ನ ವಚನಗಳ । ಆಚರಣೆಗೆ ಎಂದು ತರುತ್ತೀರಿ? (ಬಸವಾಲಾಪ)

ಬಸವ ಜಯಂತಿ ಸಂದರ್ಭದಲ್ಲಿ ಪ್ರಕಟಗೊಂಡ ಈ ಕವಿತೆ ಬಸವಣ್ಣನ ಅನುಯಾಯಿಗಳಲ್ಲಿಯ ಕುಂದು ಕೊರತೆಗಳಿಗೆ ಕೆರಳಿಸಿ ಕನ್ನಡಿ ಹಿಡಿಯುತ್ತದೆ.

ದಿವ್ಯಾ ಭಾರತಿ ಸಾವಿರಲಿ, ಸಫ್ದರ್ ಹಷ್ಮಿ ಹತ್ಯೆ ಇರಲಿ, ಗುಜರಾತ ಭೂಕಂಪವಾಗಲಿ, ವಿಶ್ವಸುಂದರಿ ಸ್ಪರ್ಧೆ ನಡೆಯಲಿ, ಅಮೆರಿಕ ವಿಶ್ವವಾಣಿಜ್ಯ ಕೇಂದ್ರದ ಮೇಲೆ ಉಗ್ರರ ದಾಳಿ ನಡೆಯಲಿ, ಫೂಲನ್ ಮರಣ, ಸೋನಿಯಾ ಸಂಕಟ, ಸಂಜಯ ಗಾಂಧಿ ಉರವಣಿಗೆ ಇತ್ಯಾದಿಗಳಿಗೆ ಪ್ರತಿಕ್ರಿಯಿಸಿ ಪದ್ಯ ಬರೆಯುವುದು ಗವಿಸಿದ್ಧರ ವೈಶಿಷ್ಟ್ಯ.

ಗವಿಸಿದ್ಧರು ಶಬ್ದಗಾರುಡಿಗ. ಗಟ್ಟಿ ದನಿಯಲ್ಲಿ ಬಾಂಬು ಸ್ಫೋಟಿಸಿದಂತೆ ಗುಡುಗುವ ಶಬ್ದಗಳ ಕವನ ಕಟ್ಟುತ್ತಾರೆ. ಬಡಕಲು ಶರೀರದ, ಏರಿದ ದನಿಯಲ್ಲಿ ಎಂದೂ ಮಾತಾಡದ, ಮುದುಡಿ ಮುದ್ದೆಯಾಗುವ ಸ್ವಭಾವದ ಈ ಕವಿಯು ವೀರ್ಯವತ್ತಾದ ಕಾವ್ಯ ರಚಿಸಿರುವುದು ಅಚ್ಚರಿ ತರಿಸುತ್ತದೆ. ಮೆಲುದನಿಯಲ್ಲಿಯೇ ಭಾವ ಸ್ಫೋಟಿಸುತ್ತಿದ್ದ ಸು. ರಂ. ಎಕ್ಕುಂಡಿ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತಾರೆ. ಇಲ್ಲಿಯೇ ಇನ್ನೊಂದು ಮಾತು ಸೇರಿಸಬೇಕು. ಇವರ ಕವಿತೆಗಳಲ್ಲಿಯ ಪದಗಳ ಬಳಕೆ ಒಮ್ಮೊಮ್ಮೆ ಅತಿಯಾಗಿ ಕಾವ್ಯದ ಪರಿಣಾಮಕ್ಕೆ ಆತಂಕವುಂಟಾಗುವ ಅಪಾಯವಿದೆ ಎನ್ನಿಸುವುದು.

ವ್ಯಷ್ಟಿ ನೆಲೆಯಲ್ಲಿ ಬಳ್ಳಾರಿಯವರು ಬರೆದ ಪದ್ಯಗಳು ಸಮಷ್ಟಿ ಪ್ರಜ್ಞೆಯ ಪದ್ಯಗಳಾಗಿ ಬಿಡುತ್ತವೆ. ವೈಯಕ್ತಿಕ ಬದುಕಿನ ಅನಿಷ್ಟ, ಸೋಲು, ದುರಂತ ಕವಿತೆಯಾಗಿ ಸಾರ್ವತ್ರಿಕಗೊಳಿಸುವುದನ್ನು ನೋಡಬಹುದು :

ಅವ್ವನ ಹರಕೆಯ ಕುರಿಯಾದೆ । ಕೆಮ್ಮಾಗಿ ಕೆಮ್ಮು ದಮ್ಮು ಬಂದರೂ ।
ಕೆಮ್ಮದೇ ಸುಮ್ಮನಾಗಿ ಬಂದೆ । ಸ್ತಬ್ಧ ನಿದ್ದೆಯ ಭಂಗಮಾಡದೆ ।
ಶಾಂತಿಯನು ಕಾದೆ । (ದಿಗ್ಬಂದನ)

ಗವಿಸಿದ್ಧರು ಕ್ಯಾನ್ಸರ್ ನೋವನ್ನು ಬಹು ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ನೋವು, ಸಾವು, ಭೀತಿ, ಆತಂಕ, ಬದುಕಿನ ಅಭದ್ರತೆ ಕುರಿತು ಕವಿತೆಗಳು ಉಲ್ಲೇಖಾರ್ಹವಾಗಿವೆ :

ನನಗೆ ಚಿರಂಜೀವಿಯಾಗಬೇಕೆಂಬ ದುರಾಸೆ ಇಲ್ಲ | ಸಾವಿಗಂಜುವ
ಭಯವಿಲ್ಲ | ನಾನು ಕಟ್ಟಿದ ಕನಸುಗಳೆಲ್ಲ ಇನ್ನೂ ನನಸಾಗಿಲ್ಲ |
ನನ್ನ ಗೂಡಿನಲ್ಲಿರುವ ನನ್ನ ಎಳೆಯ ಮಕ್ಕಳಿಗಿನ್ನೂ | ಹಾರುವುದು ಕಲಿಸಿಲ್ಲ |

* * *

ಉರಿವ ನಿಗಿ ನಿಗಿ ಕೆಂಡದಿ ಕಾಸಿದರು ನನ್ನ | ದೈವ-ವಿಧಿಗಳಿಬ್ಬರೂ ಹೊಡೆದರು ಸರತಿಯಂತೆ

ಮತ್ತು,

ಸಾವೆಂಬ ದೆವ್ವ ಈಗಾಗಲೇ ನನ್ನ ದೈವದ | ಮನೆ ಮುಂದೆ ಬಂದು ನಿಂತಿದೆ
ಅದೀಗ ನನ್ನ ಸುತ್ತ ಪ್ರದಕ್ಷಿಣೆ ಹಾಕುತ್ತಿದೆ | ನಿಮಿಷ, ನಿಮಿಷಕ್ಕೆ, ಗಂಟೆ, ಗಂಟೆಗೆ
ದಿನ... ದಿನಕ್ಕೆ... ಮಾಸ, ಮಾಸಕ್ಕೆ... | ಹಿಂಗದ ತನ್ನ ಹಸಿವಿನಿಂದ
ಕರಾಳ ತನ್ನ ಯಮಬಾಹುಗಳಿಂದ!... | ನನ್ನ ಪ್ರಾಣಪಕ್ಷಿಯ ಹೊತ್ತೊಯ್ಯುವದೋ? (ನಾನು ಸಗಬೇಕು)

ಹೀಗೆ ಸಾವನ್ನು ಎದುರಿಗಿಟ್ಟುಕೊಂಡು ಕವಿತೆ ಬರೆಯುವುದು ಎಂಥ ದುರಂತ!? ಕವಿಯಾದವನು ಮಾತ್ರ ಅಭಿವ್ಯಕ್ತಿಗೊಳಿಸಬಲ್ಲ. ಸಾಮಾನ್ಯ ಅತ್ತು ಕರೆದು ಮಣ್ಣಾಗುತ್ತಾನೆ. ಆದರೆ ಗವಿಸಿದ್ಧ ಬಳ್ಳಾರಿ ತಮ್ಮ ಕವಿತೆಗಳ ಮೂಲಕ ಜೀವಂತವಾಗಿದ್ದಾರೆ.

ಈ ಸಂಕಲನದಲ್ಲಿಯ ಲಲ ಪದ್ಯಗಳು ಯಕ್ಷಗಾನದ ಚಂಡೆಮುದ್ದಳೆಯ ಆರ್ಭಟದಂತೆ ಓದುಗನನ್ನು ನಿದ್ದೆಗೆ ಜಾರದಂತೆ ಮಾಡಿ, ಓದಿಸಿಕೊಳ್ಳುತ್ತವೆ; ವಿಷಾದದ ಆವರಣ ಹೊದಿಸಿಬಿಡುತ್ತವೆ.

—ಎಚ್. ಎಸ್. ಪಾಟೀಲ, ಕೀರ್ತಿ ಕಾಲೋನಿ, ಭಾಗ್ಯನಗರ ಅಂಚೆ, ಕೊಪ್ಪಳ - ೫೮೩ ೨೩೧

೧೪. *ಕಥನ ಕುತೂಹಲ* : ಸಂ. ಮೋಹನ ನಾಗಮ್ಮನವರ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ-೫೮೦ ೦೦೧, ಪುಟ ೧೨೬, ರೂ. ೬೦/-

ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಮುಖ ಸಂಸ್ಥಾಪಕ ಸದಸ್ಯರಾದ ರಾ. ಹ. ದೇಶಪಾಂಡೆ ಮತ್ತು ಅವರ ಆಗಿನ ಕಾರ್ಯಕಾರಿ ಸಮಿತಿಗೆ ಅರ್ಪಿತವಾದ 'ಕಥನ ಕುತೂಹಲ' ಸಂಘ ಹಮ್ಮಿಕೊಂಡ ಕಥಾಕಮ್ಮಟವೊಂದರ ಕಾರ್ಯಕಲಾಪಗಳ ಉಪಯುಕ್ತ ಸಂಗ್ರಹ. ಆಯ್ದ ಆಸಕ್ತ ಐವತ್ತು ಉದಯೋನ್ಮುಖ ಕತೆಗಾರರು ನಾಡಿನ ಕೆಲ ಹಿರಿಯ ಬರಹಗಾರರೊಂದಿಗೆ ಶ್ರದ್ಧೆ ವೈಚಾರಿಕತೆಗಳನ್ನು ಮೇಳವಿಸಿಕೊಂಡು ನಡೆಸಿದ ಸಂವಾದದ ದಾಖಲೆ 'ಕಥನ ಕುತೂಹಲ'. ಕಮ್ಮಟದ ಎರಡು ದಿನದ ಮಾತುಕತೆಯನ್ನೇ ಕಥೆಯಂತೆ ಸಂಪಾದಕರು ಜಾಣ್ಮೆಯಿಂದ ಇಲ್ಲಿ ಸಂಕಲಿಸಿದ್ದಾರೆ, ಸಂಗ್ರಹಿಸಿದ್ದಾರೆ. ಪುಸ್ತಕವನ್ನು ತೆರೆದ ಮನಸ್ಸಿನಿಂದ ಓದುವಾಗ ಕತೆಗಾರರ ಕಮ್ಮಟವಲ್ಲಿ ಓದುಗನೇ ಭಾಗವಹಿಸಿದಂತಹ ಭಾವನೆ ಮೂಡಿಸುವ ರಚನಾ ಶೈಲಿ ಇಲ್ಲಿಯದು. ಡಾ. ಗಿರಡ್ಡಿ ಗೋವಿಂದರಾಜ, ರವಿ ಬೆಳಗೆರೆ, ಮೋಹನ ನಾಗಮ್ಮನವರ, ಸುದರ್ಶನ ದೇಸಾಯಿ ಮತ್ತು ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ಸಮಯೋಚಿತ ಲೇಖನಗಳು ಹೆಚ್ಚಿನ ಚಿಂತನೆಗೆ ಆಹಾರವನ್ನು ಒದಗಿಸುತ್ತವೆ. ಜರುಗಿದ ೪ ಗೋಷ್ಠಿಗಳ ಸಾರಸಂಗ್ರಹವಲ್ಲಿ ಸಂವಾದ ವಿವಾದವಾಗದಂತೆ, ಉಪನ್ಯಾಸಗಳು ವರದಿಯಾಗದಂತೆ, ಚರ್ಚೆಯ ವಿಷಯ ಚಾರು ಕಥೆಯಾಗುವಂತೆ ಸಂಪಾದಕರು ಕೌಶಲ್ಯದಿಂದ ನಿರೂಪಣೆಗೆ ರೂಪ ನೀಡಿದ್ದಾರೆ. ಕಮ್ಮಟದ ಬಸವರಾಜ ಕಟ್ಟೀಮನಿ ವೇದಿಕೆ ೨೦೦೨ ಡಿಸೆಂಬರ್ ೨೪-೨೫ ರಂದು ಕಟ್ಟೀಮನಿಯವರ ಬರಹಗಳಂತೆ ರಂಜನೆಯೊಂದಿಗೆ ಚರ್ಚೆಯಲ್ಲಿ ವೈಚಾರಿಕ ಕಿಡಿ ಹುಟ್ಟಿಸುವ ಕಾರ್ಯ ಮಾಡಿದ್ದು ಇಲ್ಲಿ ಪ್ರಕಟವಾದ ೬ ಜನರ ಅನಿಸಿಕೆಗಳು, ೨೩ ಜನರ ಚಿಂತನಶೀಲ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಅನ್ನಿಸುತ್ತದೆ. ಲೇಖನ ಭಾಷಣಗಳ ಯಥಾವತ್ತಾದ ಮುದ್ರಣ ಓದಿನ ಮುದಕ್ಕಿಂತ, ಮಾತುಗಳ ತಿರುಳನ್ನು

ಚರ್ಚಿಸಿರುವವರ ಸುಡಿಗಟ್ಟಿನಲ್ಲಿಯೇ ಕಲಾಪಂತಿಕೆಯಿಂದ ಕೂಡಿಸಿ ಓದುಗರ ತಿಳಿವಳಿಕೆಯನ್ನು ಹೆಚ್ಚಿಸಿರುವದು ಕಥನಕುತೂಹಲದ ವೈಶಿಷ್ಟ್ಯ. ಸಾಹಿತ್ಯ ಕಲಾಪ ಕಮ್ಮಟಗಳಿಗೆ ಗ್ರಾಂಥಿಕ ಸ್ವರೂಪವನ್ನು ನೀಡುವಾಗ ಸಹಜತೆಯ ಮೆರುಗನ್ನು ಉಳಿಸಿಕೊಳ್ಳಲು ಧ್ವನಿಮುದ್ರಿತ ಕ್ಯಾಸೆಟ್ ಮತ್ತು ಚರ್ಚಾಟಿಪ್ಪಣಿಗಳ ಪ್ರಯೋಜನವನ್ನು ಪಡೆಯುವದು ಯೋಗ್ಯ. ಅಂತಹ ತಂತ್ರವನ್ನೇ ಮೋಹನ ನಾಗಮ್ಮನವರ ಇಲ್ಲಿ ಬಳಸಿಕೊಂಡಿದ್ದಾರೆ. ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ನಾಡು-ನುಡಿಗಳ ಏಳ್ಗೆಗಾಗಿ ದುಡಿಯುತ್ತ ಬಂದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಸಾಹಿತ್ಯಿಕ ಕಾರ್ಯವನ್ನು ಯಶಸ್ವಿಯಾಗಿ ಸಂಘಟಿಸುತ್ತಲೇ ಕಲಾಪದ ಕ್ರಿಯಾಶೀಲ ಕಥೆಗೆ ಮಾದರಿ ಎನಿಸುವಂತೆ ದಾಖಲೆಯ ಕವಚವನ್ನು ತೊಡಿಸಿರುವದು ಸ್ತುತ್ಯ ಉಪಕ್ರಮವಾಗಿದೆ. ಈ ಪರಿಶ್ರಮದ ಪರಾಕ್ರಮಕ್ಕೆ ಭಾಜನರಾದ ಸಂಪಾದಕರ ಶ್ರಮದಾಯಕ ಪ್ರಯತ್ನ ಅಭಿನಂದನಾರ್ಹ.

೧೫. ಮಾರಿ : ಡಾ. ಡಿ. ಸಿ. ರಾಜಪ್ಪ

ಸಿದ್ಧರಾಮಗಿರಿ ಪ್ರಕಾಶನ, ಸಂಪಿಗೆನಗರ, ಧಾರವಾಡ-೫೮೦ ೦೦೮. ಪ್ರ.ಮು. ೨೦೦೩. ಪು. ೬೧. ರೂ. ೫೦/-

ಬರವಣಿಗೆ ಸಮಾಜದ ವಿವಿಧ ವರ್ಗಗಳ, ಸ್ತರಗಳ ಜನರ ಅಭಿವ್ಯಕ್ತಿಯಾಗಿ ಹೊರಬಂದರೆ ಭಾಷೆಯ ಮೂಲ ಸಂಪತ್ತಿಗೆ ಹೆಗ್ಗಳಿಕೆಯಾಗುತ್ತದೆ ಎಂದು ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರು 'ಮಾರಿ'ಯ ಮುನ್ನುಡಿಯಲ್ಲಿ ಹೇಳಿದಂತೆ ಇಲ್ಲಿ ಜೀವನದ ಹಲವಾರು ಮುಖಗಳನ್ನು, ಸಮಸ್ಯೆಗಳನ್ನು ಎದುರಿಸುವ ಪೊಲೀಸು ಅಧಿಕಾರಿಯೊಬ್ಬ ತನ್ನ ಅನಿಸಿಕೆಗಳಿಗೆ ಕಾವ್ಯದ ರೂಪು ಕೊಡಲು ಪ್ರಯತ್ನಿಸಿದ್ದಾರೆ. ಸಹೃದಯರ ಉತ್ತೇಜನ, ಅಧಿಕಾರಿ ಮಿತ್ರವೃಂದದ ಸಹಾಯ ಕವಿಗೆ ನಿರಾಯಾಸವಾಗಿ ಲಭಿಸಿದ ಕಾರಣ ಅಲ್ಪ ಸಮಯದಲ್ಲಿಯೇ ಹೊರತಂದ ಎರಡನೆಯ ಸಂಗ್ರಹದ ೨೮ ಕವನಗಳ ಚೌಕಟ್ಟಿನಲ್ಲಿ ಸಾಮಾಜಿಕ ಕಳಕಳಿಯ ಚಿಂತನೆಗಳನ್ನು ಕಟ್ಟಲು ಬಿಟ್ಟಲು ಮಾರಾ'ಮಾರಿ'ಯ ಮೋಡಿಯನ್ನೇ ಕವಿ ಮಾಡಿದ್ದಾರೆ.

ನಿರಪರಾಧಿಗಳ, ದುರ್ಬಲರ ಪಾಡಿಗೆ ಹಾಡಿನ ಹಂದರ ಹಾಕುವಾಗ, ಶಬ್ದಗಳ ಸರಮಾಲೆಯನ್ನು ಪವಣಿಸುವಾಗ ಕವಿಗೆ ಆಗುವ ಆನಂದ, ಕನಸುಗಳ ಕಲ್ಪನೆಯ ಸುಖ ಓದುಗರಿಗೂ ಲಭ್ಯವಾಗುವಂತಾಗಬೇಕು. ರಚನೆ ಗದ್ಯವೆನಿಸದೆ ಹೃದ್ಯವೆನಿಸಬೇಕು. ಕಾವ್ಯಶ್ರಮ ಕವಿಯ ಜೀವನಕ್ರಮವಾಗಿದೆಯಾದುದರಿಂದ ಬೆಳವಣಿಗೆಯ ಭರವಸೆಯನ್ನು ಕವಿ ಮೂಡಿಸಬಲ್ಲರು. ಜೀವನಮುಖಿ ಭಾವನೆ, ಆಲೋಚನೆ, ಚಿಂತನೆಗಳಿಗೆ ಸಂಕೇತ ಪ್ರತಿಮೆಗಳ ಮೂಲಕ ಧ್ವನಿಪೂರ್ಣ ಅಭಿವ್ಯಕ್ತಿ ನೀಡಿದರೆ ಓದುಗರ ಮನಸ್ಸು ಆಹ್ಲಾದಗೊಳ್ಳುತ್ತದೆ. 'ಮಾರಿ'ಯ ಕೊನೆಯ ದತ್ತಪೀಠ ಮತ್ತು ಅಮೃತಮತಿ ಕಥನ(?) ಕವನಗಳಲ್ಲಿ ಇಂತಹ ಪ್ರಯೋಗವಿದೆ. ಅಧ್ಯಯನ, ಕಾವ್ಯ ಪರಾಮರ್ಶನಗಳ ಸಿಹಿ ಕವಿಯ ಜೀವನಾನುಭವ ರಾಶಿಗೆ ಅಂಟಿಕೊಂಡರೆ ಸೃಷ್ಟಿ ಇನ್ನೂ ಸುಂದರಗೊಳ್ಳುತ್ತದೆ, ಸೃಜನಶೀಲ ವೆನ್ನಿಸಿಕೊಳ್ಳುತ್ತದೆ.

೧೬. ವೀರಶೈವ ವಿಚಾರಧಾರೆ : ಸಿ. ಸೋಮಶೇಖರಯ್ಯ

ಅರಿವು ಪ್ರಕಾಶನ, ಚೋಳಗುಡ್ಡ, ಚಿತ್ರದುರ್ಗ-೫೭೭ ೫೦೧, ಪ್ರ.ಮು ೨೦೦೩, ಪು. ೬೦, ರೂ. ೩೦/-

ವೀರಶೈವ ಧರ್ಮದ ಉಗಮ ಮತ್ತು ವಿಕಾಸ, ಆಗಮಪೂರ್ವ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ, ವೀರಶೈವ ಸಂಪ್ರದಾಯ, ವೀರಶೈವ ಧರ್ಮ ಎತ್ತಿ ಹಿಡಿದ ನಿಲುವುಗಳು, ಯೋಗದಲ್ಲಿ ಶಿವಯೋಗ, ಶರಣರ ಅನುಭಾವ ಎಂಬ ೬ ಲೇಖನಗಳ ಸಂಗ್ರಹವೇ 'ವೀರಶೈವ ವಿಚಾರಧಾರೆ'. ವೀರಶೈವವನ್ನು ಸಾಮಾನ್ಯ ಓದುಗನಿಗೆ ಸೈದ್ಧಾಂತಿಕವಾಗಿ ತಿಳಿಸಿ ಹೇಳುವುದೇ ಗ್ರಂಥದ ಉದ್ದೇಶ. ಇಲ್ಲಿ ಆಳ ಅಧ್ಯಯನ ಮತ್ತು ಪಾಂಡಿತ್ಯಗಳ ಸಮಾವೇಶವಿದೆ. ತತ್ವಜಿಜ್ಞಾಸೆಯ ಸಮತೂಕದ, ಸಮರ್ಪಕ ಹಾಗೂ ಸರಳವಾದ ನಿವೇದನೆಯನ್ನು ಸೋಮಶೇಖರಯ್ಯನವರ ಬರೆಹಗಳಲ್ಲಿ ನಾವು ಕಾಣುತ್ತೇವೆ. ಜಾಗತಿಕ ಇತಿಹಾಸವನ್ನು ಪರಿಕಿಸಿದಾಗ ಧರ್ಮಗಳ ಉಗಮ ಅದರ ವಿಕಾಸದ ವಿವರಗಳಂತೆ ಸುಸ್ಪಷ್ಟವಾಗಿರುವದಿಲ್ಲ. ಲಿಂಗಾಯತ

ತತ್ವದ ವಿಕಾಸದ ಪರಿಕಲ್ಪನೆ ಇಲ್ಲಿಯ ಲೇಖನದಲ್ಲಿ ಅಚ್ಚುಕಟ್ಟಾಗಿ ಮೂಡಿ ಬಂದಿದೆ. ದೇಶ ಕಾಲ ಮತ್ತು ಪರಿಸರಗಳು ಸಿದ್ಧಾಂತಗಳನ್ನು ಸೃಷ್ಟಿಸುತ್ತವೆ. ಮನುಕುಲದ ಸೃಜನಶೀಲ ಚಿಂತನಾಶಕ್ತಿ ಸಿದ್ಧಾಂತಗಳನ್ನು ಉಳಿಸುವ ಅಳಿಸುವ ಬೆಳೆಸುವ ಪ್ರಕ್ರಿಯೆಯಲ್ಲಿ ಸದಾ ನಿರತವಾಗಿರುತ್ತದೆ. ಧರ್ಮಗಳ ಒಳಹರಿವು ಮಾನವ ಕಲ್ಯಾಣವೇ ಆಗಿರುತ್ತದೆ ಎಂಬ ಆದಿಮ ಅಂಶದೊಂದಿಗೆ ವೀರಶೈವ ವಿಚಾರಧಾರೆಯ ಪ್ರಸ್ತುತ ಬರೆಹಗಳು ವಿವಿಧ ವಾದಗಳ ಜಂಜಾಟದಲ್ಲಿ ಹೊಯ್ದಾಡುತ್ತಿರುವ ಇಂದಿನ ಲಿಂಗಾಯತ ಸಮಾಜದ ಸಾಮಾನ್ಯ ಓದುಗನಿಗೆ ಸಮಂಜಸವೆನಿಸುವ, ತರ್ಕಬದ್ಧವೆನಿಸುವ ದಿಕ್ಕನ್ನು ತೋರಿಸುತ್ತವೆ. ತಮ್ಮ ಪ್ರಥಮ ಕೃತಿಯಲ್ಲಿಯೇ ಭರವಸೆಯ ಪರಾಮರ್ಶನ ಶಕ್ತಿಯನ್ನು ತೆರೆದಿಟ್ಟಿರುವ ವರ್ತಕ ಕಾಯಕದ ಸೋಮಶೇಖರಯ್ಯ ವರ್ತಮಾನ ಕಾಲಕ್ಕೆ ಸೂಕ್ತವೆನಿಸುವ ವೀರಶೈವ ವಿಚಾರಧಾರೆಯ ಪಂಡಿತ ಪ್ರವಕ್ತಾರರಾಗಿ ಹೊರಹೊಮ್ಮಿರುವದು ಒಂದು ಸಾಧನೆಯೇ ಸರಿ. ಸಂದರ್ಭಕ್ಕೆ ತಕ್ಕಂತೆ ಅನುರೂಪವಾದ ಶರಣರ ವಚನಗಳು ಮತ್ತು ಸಂಸ್ಕೃತ ಮೂಲ(?)ಗಳ ಅಳವಡಿಕೆ ವಿಚಾರಧಾರೆಯನ್ನು ಹರಿತಗೊಳಿಸಿದೆ. ಧಾರಾಪ್ರವಾಹ ಭಾಷೆ ಯಾವ ತಡೆ-ತೊಡಕುಗಳಿಲ್ಲದೆ ಓದುಗರನ್ನು ತೀರಕ್ಕೆ ತಂದಿಕ್ಕುತ್ತದೆ. ಶರಣದರ್ಶನ ಸಾರವನ್ನು ಸಾಮಾನ್ಯನ ಸಮೀಪ ಸುಳಿಯುವಂತೆ ಮಾಡುವ ಧರ್ಮ ಶಾಸ್ತ್ರ ಜಾತಿಗಳು ಶುಷ್ಕ ಬಾಹ್ಯ ಆಚರಣೆ ಮಾತ್ರವಾಗದೆ ಮನಸ್ಸು ಹೃದಯಗಳಿಗೆ ಮುದ ನೀಡಿ ಅರಳಿಸುವ ಮಾತ್ರೆಗಳಂತಾಗುವ ಇಂತಹ ಬರೆಹಗಳು ಹೆಚ್ಚು ಪ್ರಯೋಜನಕಾರಿ.

—ಶಿವಶಂಕರ ಹಿರೇಮಠ, ವಿಮುಕ್ತ, ಶಿವಗಿರಿ, ಧಾರವಾಡ - ೫೮೦ ೦೦೭

೧೭. *ವನ್ ಡೇ ಮಾತರಂ* : ಎಚ್. ವಿ. ವೆಂಕಟಸುಬ್ಬಯ್ಯ

ಮಾನಸ ಪ್ರಕಾಶನ, ೬೭, ಈಸ್ಟ್ ಪಾರ್ಕ್ ರಸ್ತೆ, ೧೪ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩, ಪ್ರ.ಮು. ೨೦೦೨, ಪು. ೧೦೪, ರೂ. ೬೦/-

ನಾಟಕ ಕ್ಷೇತ್ರದಲ್ಲಿ ಹೆಸರು ಗಳಿಸಿದ ವೆಂಕಟಸುಬ್ಬಯ್ಯನವರ ಬಗೆಗೆ ಈ ಕವನ ಸಂಕಲನದ ರಕ್ಷಾಕವಚದ ಹೊದಿಕೆಯ ಬರಹದಲ್ಲಿ ಗೋಪಾಲಕೃಷ್ಣ ನಾಯರಿ, ರಂಗಭೂಮಿಯ ಆಟವನ್ನು ಕಟ್ಟುವಲ್ಲಿ ಹಾಸ್ಯಪ್ರಜ್ಞೆ ಹಾಗೂ ಬೌದ್ಧಿಕತೆಯ ಪಾತ್ರದ ಸೂಕ್ಷ್ಮ ಪ್ರಸ್ತಾಪ ಮಾಡುತ್ತ "ಹೀಗೆ ಹಾಸ್ಯಪ್ರಜ್ಞೆಗೂ ರಂಗಭೂಮಿಯಲ್ಲಿನ ಬೌದ್ಧಿಕತೆಗೂ ವೈಚಾರಿಕತೆಯ ನಂಟಿದ್ದೇಯಿದೆ" ಎಂದಿದ್ದಾರೆ. "ಹಾಸ್ಯ ಕವನಗಳು" ಎಂಬ 'ವನ್ ಡೇ ಮಾತರಂ'ನಲ್ಲೂ ಇದು ಹಾಗೆ ವ್ಯಕ್ತವಾಗಬೇಕಿತ್ತು ಎಂದು ನಾಯರಿ ಅವರು ಅಪೇಕ್ಷಿಸಿದ್ದರೇನೋ! ನಾಟಕ ಸರಿಯಾಗಿ ಇದೇ ಅನ್ನದೆ, ಸಹಜವೇ ಅನ್ನಿಸುವ ಕೆಲವು ಅಪೇಕ್ಷೆಗಳನ್ನು ಕೂಡಾ ಇಲ್ಲಿಯ ಕೆಲವು ಕವನಗಳು ಮಾತ್ರ ಪೂರೈಸುತ್ತವೆ. ಸೂಕ್ಷ್ಮ ಹಾಸ್ಯ ಹಾಗೂ ವಿಷಾದದಿಂದ ಕೂಡಿದ ವೈಚಾರಿಕತೆಯ ಸಾಲುಗಳು 'ವಂದೇ ಮಾತರಂ/ಒನ್ ಡೇ ಮಾತರಂ/ಒನ್ ಡೇ ಮಾತ್ರಂ' ಅಂಥಲ್ಲಿ ಮಾತ್ರ ಕಾಣಸಿಗುತ್ತವೆ. ಬಹುಶಃ 'ಮನಸ್ಸಿಗೆ ಬಂದದನ್ನ/ಅಲ್ಲೇ ದಿಢೀರ್ ಅಂತ/ ಬರೆದು ಬಿಡ್ಬೇಕು ಗೊತ್ತಾ/' ಅನ್ನುವ ಹಾಗೆ ಬಹಳಷ್ಟು ಬರವಣಿಗೆ ರಚಿತವಾಗಿವೆ. ಹಾಸ್ಯಕವನಗಳು ವ್ಯಂಗ್ಯಚಿತ್ರದಂತಿರಬೇಕು. ಆದರೆ ಇಲ್ಲಿ ಗುಜ್ಜಾರಿ ಇವರ ವ್ಯಂಗ್ಯಚಿತ್ರಗಳನ್ನು ಬಳಸಿಯೂ ಬಹಳ ಕಡಿಮೆ ಕವನಗಳು/ಸಾಲುಗಳು ಪರಿಣಾಮ ಬೀರುತ್ತವೆ.

೧೮. *ರತ್ನಕಂಕಣ* : ಡಾ. ಮ. ಸು. ಕೃಷ್ಣಮೂರ್ತಿ

ಮಂಜುಶ್ರೀ ಪ್ರಕಾಶನ, ೧೬ನೇ ಮೇನ್, ಸರಸ್ವತಿಪುರಂ, ಮೈಸೂರು-೯, ಪ್ರ.ಮು.೨೦೦೩, ಪು.೮೮, ರೂ.೨೫/-

ಬೆಳೆಯುತ್ತಿರುವ ಕವಿಗಳಿಗೆ ಅವರು ಬರೆದ ಕಾವ್ಯ ಎಷ್ಟರ ಮಟ್ಟಿಗೆ ಕಾವ್ಯ ಎಂದು ತಿಳಿಯಲು, ಅವರು ಕಾವ್ಯವಾಗಿ ಹೇಳಲು ಪ್ರಯತ್ನಿಸಿದ್ದನ್ನೇ ಗದ್ಯವಾಗಿ ಬರೆದು, ಎರಡನ್ನೂ ಓದಿ ನೋಡಲು ನಾನು ಅನೇಕ ಸಲ ಹೇಳಿದ್ದೇನೆ. ಇದು ನಾಟಕ ಬರೆಯುತ್ತಿರುವವರಿಗೂ ಹೇಳಬಹುದೇನೊ?

ಡಾ. ಮ. ಸು. ಕೃಷ್ಣಮೂರ್ತಿ ಅವರು ಬರೆದ `ರತ್ನಕಂಕಣ` ಮಧ್ಯಯುಗದ ಚಮ್ಮಾರ ಕುಲದಲ್ಲಿ ಕಾಶಿಯಲ್ಲಿ ಹುಟ್ಟಿದ ಸಂತಶ್ರೇಷ್ಠ ರವಿದಾಸ (ರೈದಾಸ) ಅವರ ಜೀವನದಲ್ಲಿ ನಡೆದ ಕೆಲವು ಮಹತ್ವದ ಘಟನೆಗಳ ಸುತ್ತ ಕಟ್ಟಿದ ನಾಟಕ. ರವಿದಾಸ ಅವರ ಕೆಲವು ಅತ್ಯುತ್ತಮವಾದ, ಪ್ರಖರ, ಕಣ್ಣು ತೆರೆಸುವ ವಿಚಾರಗಳು ನಾಟಕದ ತುಂಬೆಲ್ಲ ಹರಡಿವೆ. ``ಸಮೂಹಧರ್ಮ ಕೆಲವು ವೇಳೆ ಸಮೂಹ ಸನ್ನಿಯಾಗುವುದುಂಟು. ಸಂತ ಕಬೀರರಂತೆ ನಾನೂ ಮಠ, ಗದ್ದುಗೆ ಮೊದಲಾದವುಗಳನ್ನೇ ವಿರೋಧಿಸುತ್ತೇನೆ. ಒಂದು ಶೋಷಣೆಯನ್ನು ವಿರೋಧಿಸಹೋಗಿ ಮತ್ತೊಂದು ಶೋಷಣೆಗೆ ದಾರಿ ಮಾಡಿ ಕೊಡಬಾರದು``, ``ಧರ್ಮವನ್ನು ವೈಯಕ್ತಿಕ ನೆಲೆಯಲ್ಲಿ ಬಿಟ್ಟುಬಿಡುವುದೇ ಮೇಲು.`` ಇಂತಹ ಸಂತರ ಜೀವನದ ಕೆಲ ಘಟನೆಗಳು ಪವಾಡಗಳ ರೀತಿಯಲ್ಲಿ ಜನಜನಿತವಾದದ್ದು ಹಾಗೂ ಅವು ಇವತ್ತಿನ ವರೆಗೆ ಹಾಗೇ ನಮಗೆ ಸಿಗುವದು ಇವು ಸಹಜ ವಿಷಯಗಳೇ. ಆದರೆ ಇವೆಲ್ಲ ನಾಟಕವಾಗಿಯೇ ರೂಪುಗೊಳ್ಳುವುದು ಸಾಧ್ಯವೆ? ನಾಟಕವಾಗಿಯೇ ಆಗಬೇಕೆ? ಹಾಗಾದಾಗ, ಇದು ಎಷ್ಟರ ಮಟ್ಟಿಗೆ ನಾಟಕವಾಗಿದೆ ಎಂಬ ವಿಷಯದ ಬಗೆಗೆ ಚರ್ಚೆಗೆ ಅವಕಾಶವಾಗುತ್ತದೆ. `ಇದು ನಾನು ಹೇಳಲೇಬೇಕಾದುದು` ಎನ್ನುವದು ``ಇದನ್ನು ನಾನು ಹೀಗೆಯೇ, ಈ ಮಾಧ್ಯಮದಲ್ಲಿಯೇ ಹೇಳಬಯಸುತ್ತೇನೆ'' ಎನ್ನುವುದಕ್ಕಿಂತ ಮುಖ್ಯ.

—ದುಷ್ಯಂತ ನಾಡಗೌಡ, ವೆಂಕಟಾದ್ರಿ, ೧೨೪, ೨ನೇ ಮೇನ್, ಗಾಂಧೀನಗರ, ಧಾರವಾಡ-೫೮೦ ೦೦೪

೧೯. ಚುಟುಕು ಚಿಲುಮೆ : ಸಂ. : ಅಲ್ಲಮಪ್ರಭು ಬೆಟ್ಟದೂರು, ಎಚ್. ಎಸ್. ಪಾಟೀಲ, ಗವಿಸಿದ್ಧ ಬಳ್ಳಾರಿ, ಎಂ. ಎಂ. ಮದರಿ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು, ಅಂಚೆ ಪೆಟ್ಟಿಗೆ ಸಂಖ್ಯೆ ೩೦, ಕೊಪ್ಪಳ-೫೮೩ ೨೩೧, ಪ್ರ.ಮು ೨೦೦೪, ಪು. ೧೦೪, ರೂ. ೫೦/-

ಚುಟುಕು ಈ ಕಾಲದ ಜನಪ್ರಿಯ ಕಾವ್ಯಪ್ರಕಾರ. ತುಂಬ ಫಾಸ್ಟ್ ಆಗಿರುವ ಇಂದಿನ ಕಾಲದ ಮನೋಧರ್ಮಕ್ಕೆ ತಕ್ಕಂತೆ, ಹಿರಿಕಿರಿಯರೆಂಬ ಭೇದ-ಭಾವವಿಲ್ಲದೆ ಕವಿಗಳು ಚುಟುಕು ಬರೆಯುತ್ತಿದ್ದಾರೆ.

ಈರಪ್ಪ ಎಂ. ಕಂಬಳಿಯವರು ಹೇಳುವಂತೆ `ಅನುಭವದ ತತ್ತಿಗಳಿಗೆ / ಕಾವು ಕೂತಾಗಲೆಲ್ಲ/ ನೆನಪ ಚಿಪ್ಪನ್ನು ಒಡೆದು/ಹಣಿಕಿಕ್ಕುವ ವಿಾಸಾಮರಿಗಳು` ಚುಟುಕಿನ ಒಂದು ಲಕ್ಷಣ ಎಂದು ಪರಿಭಾವಿಸ ಬಹುದು. `ಇರಬೇಕು ಹೇಗೆ/ಚುಟುಕು/ತಾಯಿ ಹಕ್ಕಿ/ತನ್ನ ಮರಿಗೆ/ಕೊಡುವಂತೆ/ಗುಟುಕು` ಎಂದು ಹೇಳುವ ಜಿ. ಹೊ. ನಾರಾಯಣಸ್ವಾಮಿಯವರಂತೆ ಇಲ್ಲಿ ಕೆಲವಾದರೂ ಚುಟುಕುಗಳಿವೆ.

ವೈದೇಹಿಯವರ ಒಂದು ಚುಟುಕು `ನಕ್ಷತ್ರವಾದರೂ ಅಮ್ಮ/ಬಗ್ಗಿ/ನೋಡುತ್ತಿರುತ್ತಾಳೆ ಮಕ್ಕಳನ್ನೇ/ಅಲ್ಲವೇನಕ್ಕಾ/ಅಮ್ಮ ನಿತ್ಯ` ಹಿರಿಯರು ನಕ್ಷತ್ರವಾಗಿ ಮಕ್ಕಳ ಕಡೆಗೆ ಲಕ್ಷ್ಯ ವಹಿಸುತ್ತಾರೆಂಬ ಕಲ್ಪನೆ ಪರಿಣಾಮಕಾರಿ. ಚಿಂತನಪರ ಕವಿ ಜಂಬಣ್ಣ ಅಮರಚಿಂತರ ಗಾಂಧಿ ಹಾಗೂ ರೊಟ್ಟಿ ಕುರಿತ ಚುಟುಕು ನೋಡಿ `ಗಾಂಧಿ:/ಹುಟ್ಟು ಕುರುಡ/ಓಣಿಯಲ್ಲಿ/ಚಾಳೀಸು ಮಾರಿದವ/, ರೊಟ್ಟಿ/ವಿಸ್ತಾರದಲ್ಲಿ ಭೂಮಿಗಿಂತ ಮಿಗಿಲು/ಇದರ ಎತ್ತರ/ಎವರೆಸ್ಟಿಗೂ ದಿಗಲು.` ಇವುಗಳ ಆಳ ವಿಸ್ತಾರ ಧ್ವನಿಸಿದಷ್ಟು ಹಿಗ್ಗುತ್ತ ಹೋಗುತ್ತದೆ.

ದಿನಕರ ದೇಸಾಯಿ, ಪರಮೇಶ್ವರ ಭಟ್ಟರ ಚೌಪದಿಗಳು, ವಿ. ಜಿ. ಭಟ್ಟ, ಬಿಳಿಗಿರಿ ಹಾಗೂ ವೈ. ಎನ್. ಕೆ. ಯವರ ಹಾಸ್ಯ ಚುಟುಕು, ಶಾಂತರಸರ ಗಜಲ್, ಇಟಗಿ ಈರಣ್ಣನವರ ಶಾಯಿರಿ, ಜವರಕುಂದಿಯವರ ಹಾಯಿಕು, ಬ್ಯಾಳಿಯವರ ರುಬಾಯಿ, ಚದುರಂಗ, ಎಲ್. ಬಸವರಾಜು, ಅಕಬರ ಅಲಿಯಂಥ ಹಿರಿಯರ ಅರ್ಥಪೂರ್ಣ ಚುಟುಕುಗಳು ಇಲ್ಲಿವೆ. ಸಿಪಿಕೆ, ಜರಗನಹಳ್ಳಿ, ಲಕ್ಷ್ಮಣರಾವ್, ಡುಂಡಿರಾಜ್‌ರಂಥ ಪ್ರಸಿದ್ಧರ ಚುಟುಕುಗಳು ಕಚಗುಳಿ ಇಡುತ್ತವೆ.

ಕುವೆಂಪು, ಜಿ. ಎಸ್. ಎಸ್., ಕಾವ್ಯಾನಂದ, ಪಾವೆಂ, ಚೆನ್ನವೀರ ಕಣವಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಚಂಪಾ, ಪಂಚಾಕ್ಷರಿ ಹಿರೇಮಠ, ಇಮ್ರಾಪುರ, ಭಿಕ್ಷಾವರ್ತಿಮಠ, ಹಿ. ಎಸ್. ರಾಮಾನುಜಂ, ಅಲ್ಲಮಪ್ರಭು ಬೆಟ್ಟದೂರು, ಪ್ರಭು ಖಾನಾಪುರೆ, ಕಾಶೀನಾಥ ಅಂಬಲಗೆ, ಸರಜೂ ಕಾಟ್ಕರ್,

ಶಿವತೀರ್ಥನ್, ಐ. ಎ. ಬಡಿಗೇರ. ಅಮೃತೇಶ್ವರ ತಂಡರ ಚುಟುಕುಗಳು ಚುಟುಕು ಪರಂಪರೆಗೆ ಮಾದರಿಯಾಗಿವೆ.

ವೈದೇಹಿ, ಶೈಲಜಾ ಉಡಚಣ, ವಿಜಯಾ ದಬ್ಬೆ, ಬಿ. ಟಿ. ಲಲಿತಾ ನಾಯಕ, ಮುಕ್ತಾಯಕ್ಕ, ವಿಶಾಲಾಕ್ಷಿ ಕರಡ್ಡಿ, ಶಶಿಕಲಾ ವೀರಯ್ಯಸ್ವಾಮಿ, ಕಮಲಾ ಹೆಮ್ಮಿಗೆ, ಲತಾ ರಾಜಶೇಖರ, ಕುಲಶೇಖರಿ, ರಮಾಕುಮಾರಿ, ನೂರಜಹಾನ್, ಡಿ. ಬಿ. ರಜಿಯಾ, ಎಸ್. ಮಾಲತಿ, ಗೀತಾ ಶಾಸ್ತ್ರಿ, ಮೀನಾ ಸದಾಶಿವ, ಮಲ್ಲಿಕಾ ಘಂಟಿ, ಸುನೀತಾ ಎಂ. ಶೆಟ್ಟಿ ಮೊದಲಾದ ಪ್ರಮುಖ ಕವಯಿತ್ರಿಯರ ಚುಟುಕುಗಳನ್ನು ಸಂಗ್ರಹಿಸುವಲ್ಲಿ ಸಂಪಾದಕರು ಸಫಲರಾಗಿದ್ದಾರೆ.

೧೬೦ ಪ್ರಮುಖರ, ೨೬೦ ಉದಯೋನ್ಮುಖರ ಒಟ್ಟು ನಾಲ್ಕುನೂರಕ್ಕೂ ಮಿಕ್ಕಿ ಚುಟುಕು ಕವಿಗಳ ಏಳುನೂರಕ್ಕೂ ಮಿಕ್ಕಿ ಚುಟುಕುಗಳನ್ನು ಇಲ್ಲಿ ಕಲೆಹಾಕಿರುವುದು ಸಾಹಸದ ಕೆಲಸವೇ ಸರಿ. ಚುಟುಕಿನ ಹಲವು ಹತ್ತು ವ್ಯಾಖ್ಯೆಗಳಿಗೆ ಕಾವ್ಯ ಲಕ್ಷಣದಂತಿರುವ ಅರ್ಥಪೂರ್ಣ ಚುಟುಕುಗಳು ಇಲ್ಲಿವೆ.
—ಡಾ. ಪಾರ್ವತಿ ಪೂಜಾರ, ಕನ್ನಡ ಉಪನ್ಯಾಸಕಿ, ಶ್ರೀ ಗವಿಸಿದ್ಧೇಶ್ವರ ಕಾಲೇಜು, ಕೊಪ್ಪಳ

ಸಂಕಲನ : ಅನಿಸಿಕೆ

೧. ಕಳೆದ ವರ್ಷದಿಂದ ನೀವು ಆರಂಭಿಸಿದ 'ನನ್ನ ಅವ್ವ ನನ್ನ ಅಪ್ಪ ಮಾಲಿಕೆ'ಯ ಲೇಖನಗಳು ಅಪರೂಪದ ಬರವಣಿಗೆಗಳು. ಸಂಕಲನ ಬಂದೊಡನೆ ನಾನು ಮೊದಲು ಓದುವದು ಆ ಲೇಖನಗಳನ್ನು. ನಂತರ ಕಡೀಪುಟ, ಆಮೇಲೆ ಉಳಿದವು. 'ಅವ್ವ ಅಪ್ಪ' ಲೇಖನಗಳು ಕನ್ನಡ ಸಾಹಿತ್ಯ ಚರಿತ್ರೆ, ಸಂಸ್ಕೃತಿ, ಭಾಷಾವೈವಿಧ್ಯ, ಅನುಭವಗಳ ವ್ಯಾಪಕ ಚಿತ್ರಶಾಲೆಗಳನ್ನೇ ನಮ್ಮ ಮುಂದೆ ಕನ್ನಡಿ ಹಿಡಿದಂತೆ ಮಾಡುತ್ತವೆ. ಅವನ್ನು ಓದುತ್ತ ನಮ್ಮ ಬಾಲ್ಯದ ದಿನಗಳು, ಮಸುಕಾಗುತ್ತ ಕಳೆದುಹೋದ ಹಲವಾರು ನೆನಪುಗಳು, ದಾಖಲಾಗಬೇಕಾಗಿದ್ದರೂ ವಿಸ್ಮೃತಿಯಲ್ಲಿ ಹುದುಗಿ ಹೋಗುತ್ತಿರುವ ಸಂಗತಿಗಳು ಮುಂತಾದವು ನೆನಪಾಗಿ ಕಣ್ಣು ಹನಿಗೂಡುತ್ತವೆ. ಈ ಲೇಖನಗಳ ಲೇಖಕರ ಅನುಭವಗಳ ಸಾಲುಸಾಲುಗಳಲ್ಲಿ ನಾವೂ ಅಕ್ಷರಗಳಾಗಿ ಸೇರಿ ಹೋದಂತೆ ಭಾಸವಾಗತೊಡಗುತ್ತದೆ.

– ಡಾ. ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳು, ಗದಗ

೨. 'ಸಂಕಲನ' ಅಂಥಿಂಥ ಪತ್ರಿಕೆಯಂತಿಲ್ಲ. ಸಾಮಾನ್ಯವಾಗಿ ನಮ್ಮಲ್ಲಿ ಅನೇಕ 'ಪ್ರತಿಷ್ಠಿತ' ಹಾಗೂ 'ಮೌಲ್ಯಾತ್ಮಕ' ಸಾಹಿತ್ಯಿಕ ಎಂಬುದಾಗಿ ಘೋಷಿಸಿಕೊಂಡಿರುವ ಪತ್ರಿಕೆಗಳನ್ನು– ಅವುಗಳ ಅಬ್ಬರಕ್ಕೆ ಮಾಡುವ ಆಷಾಢಭೂತಿತನಕ್ಕೆ, ತೋರಿಕೆಯ ಹಾಗೂ ಅಧಿಕಪ್ರಸಂಗಿತನದ 'ಪಾಂಡಿತ್ಯ'ಕ್ಕೆ, ತಿರುಚಿ ಹೇಳುವ ದುರಭ್ಯಾಸಕ್ಕೆ, ಕೆಲವೇ ಪಂಗಡಗಳ ಮೆರವಣಿಗೆಗೆ ಮುಗ್ಧ ಓದುಗರನ್ನು ದಾರಿ ತಪ್ಪಿಸುವುದಕ್ಕೆ ಹಾಗೂ ಈ ಮೂಲಕ ದುಡ್ಡು ದೋಚುತ್ತಿರುವುದಕ್ಕೆ– ಹೀಗೆ ಅನೇಕ ಇಂಥ ಕಾರಣಗಳಿಗಾಗಿ ಪತ್ರಿಕೆ ಓದನ್ನು ಅತ್ಯಂತ ಸೀಮಿತಗೊಳಿಸಿಕೊಂಡವನು ನಾನು.

'ಸಂಕಲನ' ಓದುವಾಗ ಇಲ್ಲೊಂದು ಓಯಸಿಸ್ ದೊರಕೀತೆಂಬ ಭರವಸೆಯನ್ನು ಸ್ಪಷ್ಟವಾಗಿ ಕಾಣುತ್ತಿದ್ದೇನೆ. ಇಲ್ಲೂ ಕೊರತೆಗಳು ಇಲ್ಲವೆಂದಲ್ಲ. ಇದ್ದರೂ ಸಹನೀಯವೆನಿಸಿವೆ. ಈ ನಿಟ್ಟಿನಿಂದ ನಿಮ್ಮ ಶ್ರಮ, ಶ್ರದ್ಧೆಗಳು ಶ್ಲಾಘ್ಯ. 'ಸಂಕಲನ'ವನ್ನು ತುಂಬ ಮೆಚ್ಚಿಕೊಂಡಿದ್ದೇನೆ.

– ಡಾ. ಹರಿಕೃಷ್ಣ ಭರಣ್ಯ, ಮದುರೈ

೩. 'ಸಂಕಲನ'ನವನ್ನು ಹೊರತರುವ ನೋಂಪಿಯನ್ನು ಹೊತ್ತು ಯಶಸ್ವೀ ಮೂರನೆಯ ಸೋಪಾನವನ್ನೇರಿದ್ದೀರಿ. ನಿಮ್ಮ ನುಡಿಯಂತೆ ನಿಮ್ಮ ನಡೆ. ಎಷ್ಟು ಜನ ಇದನ್ನು ಪಾಲಿಸಿದವರು– ಇಂದಿನ ಉಲಾಢೋಲಿನ ರಾಜಕೀಯ ಯುಗದಲ್ಲಿ! ಹೊಸದೊಂದು ಹಾದಿಯನ್ನೇ ತುಳಿದ ನಿಮ್ಮ

'ಸಂಕಲನ'ದ ಲೇಖಕರೂ ನಿಮ್ಮಂತೆ 'ಚಹಾ-ಚೂಡಾ'ದ ಹೊಸ ಹಾದಿಯನ್ನೇ ಹಿಡಿಯುತ್ತಿದ್ದಾರೆ. ದೈನಂದಿನ ಭಾಷೆ, ದೈನಂದಿನ ಬದುಕಿನ ಚಿತ್ರಣ! — ಎಸ್ಕೆ ಕುಲಕರ್ಣಿ, ಧಾರವಾಡ

೪. 'ಸಂಕಲನ'-೧೩ ರಲ್ಲಿ ಬಂದ ಬಿ. ವಿ. ಸತ್ಯ [illegible] ತೆಗಳು ಪ್ರಫುಲ್ಲವಾಗಿವೆ. 'ಶೇಗೋ ಕುಲಕರ್ಣಿಯವರ ನೆನಪು' - [illegible] ಮಹತ್ವದ್ದಾಗಿದೆ. ಅಷ್ಟಾಗಿ ನೆನಪಿಗೆ ಬಾರದ ಶೇ. ಗೋ. ಅವರಿಗೆ ಶ್ರದ್ಧಾಂಜಲಿ. ಗೀತಾ [illegible]ಯಂತಹ ಭಾವುಕ ಲೇಖಕಿಯ ಆತ್ಮೀಯ ಅನಾವರಣ, ಜೊತೆ ಜೊತೆಗೆ ಧಾರವಾಡದ ಗೆಳೆಯರ ಬಳಗ, ಜಯಕರ್ನಾಟಕ, ಆಲೂರರು, ರಂಜಾ... ಹೀಗೆ ಈ ಲೇಖನ [illegible] ಕೌತುಕದ್ದು ಹಾಗಿದೆ! ಹದಕ್ಕೆ ಮಾಗಿದ ಮನಸ್ಸು ಮೆಲುಕು ಹಾಕಿದ ಹಳೆಯ ತಿಂಡಿ ಇದ್ದಂತೆ!

ದಗ್ಧ ಅಕ್ಷರ ಕುರಿತಾದ ಕಡೇಪುಟ ಚೆಂದದೆ.

'ಸಂಕಲನ'-೧೪ ರಲ್ಲಿ ಬಂದ 'ಅಪ್ಪ ಅಪ್ಪ' ಮಾಲಿಕೆಯ ರೇಖಾ ವಿಷ್ಣುಮೂರ್ತಿ ಮತ್ತು ಎಂ. ಡಿ. ಗೋಗೇರಿಯವರ ಎರಡು ಲೇಖನಗಳು ಅನೇಕ ದೃಷ್ಟಿಯಿಂದ ವಿಶಿಷ್ಟವಾಗಿವೆ. ಇಬ್ಬರೂ ಬರೆದಿರುವುದು ಅವರ ಅವ್ವ ಅಪ್ಪನ ಕುರಿತಾಗಿಯೇ. ಆದರೆ ಭೌಗೋಳಿಕ, ಆರ್ಥಿಕ, ಸಾಮಾಜಿಕ ದೃಷ್ಟಿಯಿಂದ ಎರಡು ಭಿನ್ನವಾದ ವಲಯಗಳಲ್ಲಿ ನಿಂತ ಲೇಖಕರ ಗ್ರಹಿಕೆ ಮತ್ತು ಅಭಿವ್ಯಕ್ತಿ ಎಷ್ಟೊಂದು ಸ್ಪಷ್ಟವಾಗಿ ಬೇರೆಯಾಗಿದೆಯೆಂದರೆ ತೌಲನಿಕ ಅಧ್ಯಯನಕ್ಕೆ ಇದು ಯೋಗ್ಯವಾಗಿದೆ. ಮಲೆನಾಡಿನ, ಮೇಲ್ಮಧ್ಯಮ ವರ್ಗದಿಂದ ಬಂದ ರೇಖಾ ವಿಷ್ಣುಮೂರ್ತಿಯವರ ಬಾಲ್ಯ ಜಂಜಾಟವಿಲ್ಲದ್ದು. ಅವರಿಗೆ ಅವರ ತಾಯಿಯ ಸ್ವಭಾವ ವಿಶೇಷಗಳು ಸ್ಮರಣೀಯವಾದಷ್ಟೇ ವಿನೋದಮಯವೂ ಆಗಿವೆ. ಸಮೃದ್ಧವೂ ಕ್ಲೇಶರಹಿತವೂ ಆದ ಅಪ್ಪ ಅಮ್ಮನ ನೆನಪುಗಳು ತುಂಟ ಹುಡುಗಿಯ ಕನವರಿಕೆಯಂತಿವೆ.

ಎಂ. ಡಿ. ಗೋಗೇರಿಯವರದ್ದು ಬಟಾಬಯಲು ಸೀಮೆಯಲ್ಲಿ, ಕಡುಬಡತನದಲ್ಲಿ ಸಂಪೂರ್ಣ ಭಿನ್ನ ಗೃಹವಾತಾವರಣದಲ್ಲಿ ಬೆಳೆದ ಬದುಕು. ಅವರು ನಿರೂಪಿಸಿರುವ ಸಂಯಮದ ರೀತಿ, ವಾಸ್ತವದ ಸ್ಪಷ್ಟ ಚಿತ್ರಣ, ಇಡೀ ಪಿಂಜಾರ ಕುಲದ ನೋವು, ಬಡತನ ಕಷ್ಟದ ಕಥೆಯಂತೆ ದಾಖಲಾಗಿದೆ. ಗೋಗೇರಿಯವರು ಅಪ್ಪ ಅವ್ವನ ಫೋಟೋ ತೆಗೆಸಿಟ್ಟಿರುವ ಬಗೆಯಂತೂ (ಅಪ್ರಯತ್ನಿತವಾಗಿ ಒಂದು ಹನಿ ಉರುಳುವಂತೆ ಮಾಡಿತು) ಅನುಕರಣೀಯವಾದದ್ದು.

ಇಬ್ಬರ ಬರವಣಿಗೆಯಲ್ಲಿಯೂ ಎದ್ದುಕಾಣುವ ಸಾಮ್ಯವೆಂದರೆ ಸುಸಂಸ್ಕೃತತೆ ಮತ್ತು ಸಂಪನ್ನತೆ. ಇಂಥ ಭಿನ್ನ ಹಿನ್ನೆಲೆಯ ಲೇಖಕರ ಬರಹಗಳು ತುಂಬಾ ಸ್ವಾರಸ್ಯಕರವೂ ಕುತೂಹಲಕರವೂ ಅಧ್ಯಯನಯೋಗ್ಯವೂ ಆಗಿರುತ್ತವೆ.

ಎಸ್. ಎಸ್. ಹಿರೇಮಠರ 'ಅಪರೂಪದ ನಾಟಕಕಾರ ಭಾಸ' ಬಹು ಒಳ್ಳೆಯ ಲೇಖನ. ಕಾಳಿದಾಸನಿಗಿಂತ ಸಮೂಹಕ್ಕೆ ಹತ್ತಿರ ನಿಂತು ನಾಟಕ ಬರೆದ ಭಾಸನಿಗೆ ಇದು ಕನ್ನಡಿ ಹಿಡಿದಂತಿದೆ. 'ಸಂಕಲನ' ಹೀಗೇ ಬರುತ್ತಿರಲಿ. — ಲಲಿತಾ ಸಿದ್ದಬಸವಯ್ಯ, ತುಮಕೂರು

೫. 'ಸಂಕಲನ' ತುಂಬ ಚೆನ್ನಾಗಿದೆ. ಇದೊಂದು ಮೌಲಿಕ ಪತ್ರಿಕೆ. ತಪ್ಪಿಲ್ಲದ, ಅಂದವಾದ ಮುದ್ರಣ. ಒಳ್ಳೆಯ ಕಾಲಂಗಳು. 'ಸಂಕಲನ' ಲಲಿತ ಪ್ರಬಂಧಗಳನ್ನೂ ಬರೆಸಿದೆ, ಪ್ರಕಟಿಸಿದೆ. ಸಂತೋಷ. ಈಗ ಆ ಪ್ರಕಾರ ಇಲ್ಲವಾಗುತ್ತಿದೆ. ಅದನ್ನು ಉಳಿಸಬೇಕಾಗಿದೆ. ರಾ. ಕು., ಮೂರ್ತಿರಾವ್, ರಾವ್‌ಬಹದ್ದೂರ್, ವೀಸಿ, ತೀನಂಶ್ರೀ, ಕುವೆಂಪು, ಶಿವರಾಮ ಕಾರಂತ ಎಲ್ಲರೂ ಒಂದು ವ್ರತದ ಹಾಗೆ ಲಲಿತಪ್ರಬಂಧವನ್ನು ಉಳಿಸಿದರು, ಬೆಳೆಸಿದರು. ನಂತರ ಅದು ಎಲ್ಲಿ ಹೋಯಿತೋ...? 'ಅಪ್ಪ ಅವ್ವ'ರ ಬಗ್ಗೆ ಬರೆದ ಕೃತಜ್ಞತಾ ಬರಹಗಳು ಬಹಳ ಇಷ್ಟವಾದವು. ಆ ನೆನಪುಗಳು ಆ

ಊರಿನ, ತಲೆಮಾರಿನ, ಪರಿಸರದ, ಹಾಡುಹಬ್ಬಗಳ ಒಟ್ಟು ಚಿತ್ರಣವನ್ನು ಕೊಡುತ್ತಲೇ ಹೆತ್ತವರ ಬಗೆಗಿನ ಪ್ರೀತಿ ಕಾಳಜಿಗಳನ್ನು ತೋರುತ್ತವೆ. – ಎಸ್. ಶೇಷಾದ್ರಿ ಕಿನಾರ, ಶಿವಮೊಗ್ಗ

೬. 'ಸಂಕಲನ' ತುಂಬ ಮಹತ್ವದ ಪತ್ರಿಕೆ. ಇಲ್ಲಿ ಪ್ರಕಟವಾಗುತ್ತಿರುವ ವಿವಿಧ ಲೇಖನಗಳು ಓದುಗರ ಜ್ಞಾನವನ್ನು ವಿಸ್ತರಿಸುವಲ್ಲಿ ತುಂಬಾ ಉಪಯುಕ್ತವಾಗಿವೆ. ತಾವು ಬರೆಯುತ್ತಿರುವ 'ಕಡೇಪುಟ' ವಂತೂ ನನಗೆ ತುಂಬಾ ಇಷ್ಟ. ಅಲ್ಲಿನ ಭಾಷೆಯೂ ತುಂಬಾ ಚೆಂದ. – ಜಿ. ಇ. ಅಜ್ಜಪ್ಪ, ಮೈಸೂರು

೭. 'ಸಂಕಲನ'ವನ್ನು ನಿಯಮಿತವಾಗಿ ಓದುತ್ತಿದ್ದೇನೆ. ಆಶ್ಚರ್ಯ ಮತ್ತು ಆನಂದಗಳೆರಡನ್ನೂ ಏಕಕಾಲದಲ್ಲಿ ಅನುಭವಿಸುತ್ತಿದ್ದೇನೆ. ಪಿ. ಎಂ. ಹೆಗಡೆಯವರ 'ನನ್ನ ಅಪ್ಪಯ್ಯ' ಉತ್ತಮ ಬರವಣಿಗೆ. ಮನೆತನದ ಹಿರಿಯರ ಸಾಹಸಗಾಥೆಯನ್ನು ಓದುತ್ತ ಹೋದಂತೆಲ್ಲ ಸನ್ನಿವೇಶಗಳು ಕಷ್ಟನಷ್ಟಗಳೊಂದಿಗೆ, ಮೋಸ, ದಗಲ್‌ಭಾಜಿಗಳ ಮಧ್ಯೆಯೂ ನೀರ ಮೇಲೆ ಬಿದ್ದ ಎಣ್ಣೆಯ ಹನಿಯಂತೆ ಕುಟುಂಬ ಸಮಾಜದಲ್ಲಿ ಹೇಗೆ ಬದುಕಿದರು? ಹೇಗೆ ಆದರ್ಶಪ್ರಾಯವಾಗಿದ್ದರೂ ಜೀವನದ ಅಂತಿಮ ಘಟ್ಟದಲ್ಲಿ ಕುರುಡು ಕಾಂಚಾಣ ಎಲ್ಲ ಸಂಬಂಧಗಳನ್ನು ಮೀರಿ ನಿಂತು 'ಯಾರಿಗೆ ಯಾರುಂಟು?' ಎಂಬುದನ್ನು ನೆನಪಿಸುತ್ತದೆ.

ಸದ್ಯದ ಸಂಸ್ಕೃತಿ ವಿವೇಚನೆಯ ಹಿನ್ನೆಲೆಯಲ್ಲಿ ಕುವೆಂಪು ವೈಚಾರಿಕತೆ ಕುರಿತ ಸಿ. ಎನ್. ರಾಮಚಂದ್ರನ್ ಅವರ ಲೇಖನ ಅತ್ಯಂತ ಪ್ರಭಾವಿಯಾದದ್ದು. ಬಸವರಾಜ ಸಬರದ ಅವರ ವಿಮರ್ಶಾ ವಿಧಾನ ಹಿಡಿಸಿತು. ಹೊಗಳಿ ಹೊಗಳಿ ಹೊನ್ನಶೂಲಕ್ಕೇರಿಸಿ ವಿಮರ್ಶೆಯ ತಾರ್ಕಿಕ ಏಣಿಯ ಒಂದೊಂದೇ ಮೆಟ್ಟಿಲನ್ನು ಕೆಳಗಿಳಿಸಿರುವುದು ಅತ್ಯಂತ ಪರಿಣಾಮಕಾರಿ ಕ್ರಮವಾಗಿದೆ. ಹಾಗೆಯೇ ಬಸವರಾಜ ಸಾದರ ಅವರು ಉತ್ತರ ಕರ್ನಾಟಕದ ದೇಶೀ ಭಾಷೆಯಲ್ಲಿ ಕವಿಗಳ ಜೀವ ಜಾಲಾಡಿದ್ದು ತುಂಬಾ ಹಿಡಿಸಿತು.

'ಪುಸ್ತಕ ಪರಿಶೀಲನೆ'ಯ ಮೂಲಕ ಕೊಂಡು ಓದದವರಿಗೆ ಆ ಪುಸ್ತಕವನ್ನು ಓದಿದಷ್ಟೇ ವಿಷಯವನ್ನು ಸಂಕ್ಷಿಪ್ತವಾಗಿ ನೀಡುವುದೂ ಸಂಕಲನದ ಓದುಗರಿಗೆ, ಊಟವಾದ ಮೇಲೆ ವೀಳ್ಯದೆಲೆ ಜಗಿದಂತೆ ಭಾಸವಾಗುತ್ತದೆ. ಮೊದಲ ಪುಟದಿಂದ 'ಕಡೇಪುಟ'ದ ವರೆಗೆ ಕುತೂಹಲ ಪ್ರೀತಿ ಆಕರ್ಷಣೆ ತುಂಬಿರುತ್ತವೆ.

– ಶರಣಗೌಡ ಎರಡೆತ್ತಿನ, ದಾವಣಗೆರೆ

೮. 'ಸಂಕಲನ' ಒಂದು ಅದ್ಭುತ ಪ್ರಯೋಗ. ಅಪಾರ ವೈವಿಧ್ಯತೆ. ೩ ವರ್ಷದ 'ಸಂಕಲನ'ಕ್ಕಾಗಿ ರೂ. ೪೦೦/- ಕೊಟ್ಟಿದ್ದು ಸಾರ್ಥಕವೆನಿಸಿದೆ. ವ್ಯಕ್ತಿ ನೆಲೆಯಲ್ಲಿ ನಿಂತು ಒಂದು ವಿಶ್ವವಿದ್ಯಾಲಯ ಮಾಡಬಹುದಾದಂತಹ ಪ್ರಯೋಗಗಳನ್ನು 'ಸಂಕಲನ'ದ ಮೂಲಕ ಮಾಡುತ್ತಿದ್ದೀರಿ. ಆಯ್ದ ಕವಿತೆಗಳು, 'ಕಡೇಪುಟ' ತುಂಬ ತೃಪ್ತಿ ನೀಡುತ್ತವೆ. 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ ಕನ್ನಡಕ್ಕೆ ಹೊಚ್ಚ ಹೊಸದು. **– ಡಾ. ಅಶೋಕ ನರೋಡೆ, ಮಹಾಲಿಂಗಪುರ**

೯. 'ಸಂಕಲನ' ತುಂಬ ಸುಂದರವಾಗಿ ಶಿಸ್ತಿನಿಂದ ಬರುತ್ತಿರುವ ವಿಶಿಷ್ಟ ಪತ್ರಿಕೆ. ಪ್ರತಿಯೊಂದು ಸಂಚಿಕೆಯಲ್ಲಿ ಒಂದು ಸಣ್ಣಕತೆಯೂ ಸೇರ್ಪಡೆಯಾದರೆ ಇನ್ನೂ ಖುಶಿ.

– ಡಾ. ಚಂದ್ರಶೇಖರ ರೊಟ್ಟಿಗವಾಡ, ಧಾರವಾಡ

೧೦. ನಾನು ಬರೆಯಬೇಕು, ಬರೆಯುವ ಮುನ್ನ ಅಷ್ಟೋ ಇಷ್ಟೋ ಓದಬೇಕು ಎನ್ನುವ ಸದಭಿರುಚಿ ಬೆಳೆಸಿದ ಪತ್ರಿಕೆಗಳಲ್ಲಿ 'ಸಂಕಲನ'ಕ್ಕೆ ಮೊದಲ ಸ್ಥಾನ. ಇದು ಮಹತ್ವದ ಆಕರವಾಗುವ ಪತ್ರಿಕೆ.

– ಎ. ಡಿ. ನಂಜುಂಡಸ್ವಾಮಿ, ಮೈಸೂರು

೧೧. 'ಸಂಕಲನ'ವು ಸಶಕ್ತ ಸಾಹಿತ್ಯ ಪತ್ರಿಕೆ. ಸಾಹಿತ್ಯಾಸಕ್ತರಿಗೆ ಸಂತೋಷ ನೀಡುವ ಪತ್ರಿಕೆ. ಈಗ ದ್ವೈಮಾಸಿಕವಾಗಿ ತರುತ್ತಿದ್ದೀರಿ ಎರಡು ತಿಂಗಳ ತನಕ ಸಾಹಿತಿಗಳೂ ಕವಿಗಳೂ ಸಾಹಿತ್ಯಪ್ರೇಮಿಗಳೂ

ಕುತೂಹಲವನ್ನು ಬಿಗಿಹಿಡಿದುಕೊಂಡು ಪತ್ರಿಕೆಗಾಗಿ ಕಾಯಬೇಕಾಗುತ್ತದೆ. ಮತ್ತು ಲೇಖನಗಳ ಪಾಳೆ ಬಹಳ ದಿನಕ್ಕೆ ಬರುತ್ತದೆ. ಆದುದರಿಂದ ಪ್ರತಿ ತಿಂಗಳೂ ಸಂಕಲನ ತರುವ ಬಗ್ಗೆ ಯೋಚಿಸಬೇಕಾಗಿ ವಿನಂತಿ. ಮತ್ತು ವಾರ್ಷಿಕ ಚಂದಾ ಕನಿಷ್ಠ ರೂ. ೨೦೦ ಮಾಡಿರಿ. ಎರಡು ತಿಂಗಳಿಗೊಮ್ಮೆ ಪತ್ರಿಕೆ ಓದುವದೆಂದರೆ ಎರಡು ತಿಂಗಳಿಗೊಮ್ಮೆ ಸಿಹಿ ಊಟ ಮಾಡಿದಂತೆ ಆಗುತ್ತಿದೆ. ಡಾ. ಬಸವರಾಜ ಸಾದರ ಅವರ 'ಕವನಾ ಬರೀತಾರಂತ ಕವನ...' ಎಂಬ ವಾಸ್ತವ ಲೇಖನ ಬೊಗಳುವುದೊಂದು ಬಾಳುವುದೊಂದು ರೂಢಿಸಿಕೊಂಡ ಹಲವಾರು ಕವಿಗಳ ಒಳಹುಳುಕನ್ನು ನಿಚ್ಚಳವಾಗಿ ಎತ್ತಿ ತೋರಿಸುತ್ತದೆ. ಪ್ರಶಸ್ತಿ ಪಡೀಲಿಕ್ಕೆ ಮಾಡೊ ಹಲಕಟ್ಟ ದಂಧೆ, ಸಮ್ಮೇಳನಕ್ಕೆ ಭಾಗಿಯಾಗಲು ಹಚ್ಚುವ ವಸೂಲಿಭಾಜಿ, ನಿನಗೆ ನಾನು ನನಗೆ ನೀನು ಎನ್ನುವ ಹಂಚಿ ತಿನ್ನುವ ಹಲಕಾ ಚಾಳಿಗಳನ್ನು ಗುಲಬರ್ಗದ ಕವಿ ಬಿಡಿಸಿಹೇಳಿದ್ದನ್ನು ಸಾದರ ಅವರು ಸಾದ್ಯಂತವಾಗಿ ಎರಡೇ ಪುಟಗಳಲ್ಲಿ ಏಟು ಕೊಟ್ಟಿದ್ದಾರೆ. ಸಮಾಜಕ್ಕೂ ದೇಶಕ್ಕೂ ಆದರ್ಶರಾಗಬೇಕಾದ ಕವಿಸಾಹಿತಿಗಳು ಹೀಗಾದರೆ ಇವರನ್ನು ಇಂತಹ ಕವನಗಳೇ ತಿದ್ದ(ಗುದ್ದ)ಬೇಕು. — ಎಂ. ಡಿ. ಗೋಗೇರಿ, ಹುಬ್ಬಳ್ಳಿ

೧೨. 'ಸಂಕಲನ' ತುಂಬ ಚೆನ್ನಾಗಿ ಬರುತ್ತಿದೆ. ತಮ್ಮ 'ಕಡೀಪುಟ'ವಂತೂ ಬಹಳ ಬಹಳ ಹಿಡಿಸಿತು.

— ಶ್ಯಾಮ ಹುದ್ದಾರ, ಅಂಕೋಲಾ

೧೩. 'ಸಂಕಲನ-೧೫'ರ 'ಕಡೀಪುಟ' ಇಷ್ಟವಾಯಿತು. ಹಲವು ನೆಲೆಗಳಿಗೆ ಚಾಚಿಕೊಳ್ಳುವಂತಿರುವ ನಿಮ್ಮ ಲೇಖನದಿಂದ ಒಂದು ಒಳ್ಳೆಯ ಕಾವ್ಯವನ್ನೋದಿದ ಅನುಭವವುಂಟಾಯಿತು. ಹಾಗೆಯೇ ವಿಭಾ ಅವರ ಕವನಗಳಿಂದಾಗಿ, ಸಿ. ಎನ್. ರಾಮಚಂದ್ರನ್, ಬಸವರಾಜ ಸಾದರ ಅವರ ಲೇಖನಗಳಿಂದಾಗಿ 'ಸಂಕಲನ' ಗಮನ ಸೆಳೆಯುವಂತಿದೆ. ಒಟ್ಟಿನಲ್ಲಿ ಈ ಸಲದ ಸಂಚಿಕೆ ವಿಶಿಷ್ಟವಾಗಿದೆ.

— ಡಾ. ಸಂತೋಷ ಚೊಕ್ಕಾಡಿ, ಮೈಸೂರು

೧೪. 'ಸಂಕಲನ' ಮೈ ತುಂಬಿಕೊಂಡು ಬರುತ್ತಿದೆ. ಶುದ್ಧ ಸಾಹಿತ್ಯಾಸಕ್ತರಿಗೆ ರಸಾನುಭೂತಿ ಉಂಟುಮಾಡುತ್ತಿದೆ. — ಎಲ್. ವಿ. ಶಾಂತಕುಮಾರಿ, ಬೆಂಗಳೂರು

೧೫. ಎಂತೆಂತಹ ದೊಡ್ಡ ಪ್ರಕಾಶಕರೂ ಸಹ ಇಂದು ಗೌರವಧನವನ್ನು ಕೊಡುವ ಪದ್ಧತಿಯನ್ನಿಟ್ಟುಕೊಳ್ಳದೇ ಇರುವಾಗ ನೀವು ಗೌರವಧನವನ್ನು ಕಳಿಸಿದ್ದು ಬಹಳ ಸಂತೋಷದ ವಿಷಯ. 'ಸಂಕಲನ-೧೫' ತುಂಬ ಚೆನ್ನಾಗಿದೆ. ಕುವೆಂಪು ಅವರ ವೈಚಾರಿಕತೆಯ ಬಗ್ಗೆ ಸಿ. ಎನ್. ರಾಮಚಂದ್ರನ್ ಅವರ ಲೇಖನ, ಬಸವರಾಜ ಸಬರದ ಅವರ ಲೇಖನ ಬಹಳ ಹಿಡಿಸಿದವು. ಒಟ್ಟಿನ ಮೇಲೆ 'ಸಂಕಲನ'ದಲ್ಲಿ ಓದಲು ಸಾಕಷ್ಟು ಒಳ್ಳೆಯ ಸಾಮಗ್ರಿ ಸಿಗುತ್ತದೆ. — ದಮಯಂತಿ ನರೇಗಲ್ಲ, ಧಾರವಾಡ

೧೬. ಪ್ರಕಟಿತ ಲೇಖನಗಳಿಗೆ ಸಂಭಾವನೆ ಕಳುಹಿಸುವುದಾಗಿ 'ಸಂಕಲನ'ದಲ್ಲಿ ಪ್ರಕಟಿಸುತ್ತಿದ್ದೀರಿ. ಇಂತಹ ಸದಭಿರುಚಿಯ ಪತ್ರಿಕೆ ಸಾಹಿತ್ಯಕ್ಷೇತ್ರಕ್ಕೆ, ಸಾಂಸ್ಕೃತಿಕ ಲೋಕಕ್ಕೆ ತುಂಬ ಉಪಯುಕ್ತವೆಂಬುದು ನನ್ನ ನಂಬಿಕೆ. 'ಸಂಕಲನ'ದಲ್ಲಿ ನನ್ನ ಲೇಖನ ಪ್ರಕಟವಾಗುವುದಾದರೆ ಆಗ ದಯವಿಟ್ಟು ನನಗೆ ಸಂಭಾವನೆ ಕಳಿಸಬೇಡಿ. — ಸಿ. ಸೋಮಶೇಖರಯ್ಯ, ಚಿತ್ರದುರ್ಗ

೧೭. 'ಸಂಕಲನ' ಪತ್ರಿಕೆಯ ಎಲ್ಲ ಬರಹಗಳು ನೂತನವಾದ ಅನುಭವಗಳನ್ನು ನೀಡಿ ಆಪ್ತತೆ, ಕಾವ್ಯಪ್ರೀತಿ ಹುಟ್ಟಿಸುತ್ತವೆ. ವೈಚಾರಿಕ ಸಾಹಿತ್ಯ, ಪುಸ್ತಕ ಪರಿಶೀಲನೆಯ ಮೂಲಕ ಬಂದಿರುವ ಹೊಸ ಕೃತಿಗಳ ಪರಿಚಯ, ಕಡೀಪುಟದ ತಾಜಾತನ ವಿನೂತನವಾಗಿವೆ. ಓದುಗರಲ್ಲಿ ಹೊಸ ಬರಹ ಜಗತ್ತನ್ನು ಪ್ರವೇಶಿಸಿದ ಭಾವನೆ ಮೂಡುತ್ತದೆ. ಹಳಬರು ಹೊಸಬರು, ಹಿರಿಯರು ಕಿರಿಯರಿಗೆ ಸಮಾನ ಆದ್ಯತೆ ನೀಡಿ ಆಧುನಿಕ ಪ್ರಜ್ಞೆ ಮೆರೆದ ತಮಗೆ ಅಭಿನಂದನೆಗಳು. 'ಸಂಕಲನ' ಸಾಹಿತ್ಯಪ್ರೀತಿ ಉಳ್ಳವರಿಗೆ, ಬೆಳೆವವರಿಗೆ ಅರ್ಥಪೂರ್ಣ ಕೊಡುಗೆ. — ಡಾ. ಕೆ. ಎಸ್. ರತ್ನಮ್ಮ, ಮೈಸೂರು

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಸಾಮಾನ್ಯವಾಗಿ ಪಶು-ಪ್ರಾಣಿಗಳಿಗೆ ನಾಲ್ಕು ಕಾಲು ಇರತಾವು. ಅಡ್ಡ್ಯಾಡಾಕ ಓಡಾಕ ಕೆದರಾಕ ಕೆದಕಾಕ ಕೆಣಕಾಕ ಹಿಡ್ಯಾಕ ಕಡ್ಯಾಕ ಜಡ್ಯಾಕ ಅಂತ. ಈ ನಾಲ್ಕರಾಗ ಮುಂದಿನ ಎರಡು ಕಾಲುಗಳನ್ನ ಹೆಚ್ಚು ಬಳಸಿಕೊಳ್ಳತಾವು. ಆದರೂ ಪ್ರಾಣಿಗಳು ತಮ್ಮ ಅಸ್ತಿತ್ವವನ್ನ ಪಶುತ್ವದ ಜೊತೆಗನ್ಅ ತೋರಿಸಿಕೊಳ್ಳತಾವು. ಆ ಪಶುತ್ವವನ್ನ ಅಭಿಮಾನದಿಂದ ಉಳಿಸಿಕೊಳ್ಳತಾವು.

ಪ್ರಾಣ ಇರೂದರಿಂದ ಮನಶ್ಯಾನೂ ಪ್ರಾಣಿ ಮತ್ತು ಪಶು. ಆದರೇನು, ಉಳಕೀ ಪಶು-ಪ್ರಾಣಿಗಳಿಗಿಂತ ಸ್ವಲ್ಪ ಬ್ಯಾರೆ, ಅಂದರ ತೆಳುವಾದ ಪ್ರಜ್ಞಾಪರದೆಯ ಹಿನ್ನೆಲೆಯೊಳಗ ವಿಚಾರ ವಿವೇಕ ಹೊಂದಿದ ಪಶು, ಅಷ್ಟ್ಅ. ಪಶುಗಳಿಗೆ ಇದ್ದ್ಹಂಗ ಈ ಮನುಷ್ಯ ಪ್ರಾಣಿಗೂ ನಾಲ್ಕು ಕಾಲು ಇರ್ತಾವು. ಆದರ ತನ್ನ ಪ್ರಜ್ಞಾಶಕ್ತಿಯ ಬಲದಿಂದ ಅವ್ನ ಮುಂದಿನ ಎರಡು ಕಾಲುಗಳನ್ನ ಬ್ಯಾರೆ ರೀತೀಲೆ ಬಳಸಿಗೊಂತ ಬಂದಾನ, ಮತ್ತು ಅವುಕ್ಕ ಕೈ ಅಂತ ಹೆಸರ ಇಟಗೊಂಡಾನ. ಹಿಂಗಾಗಿ ಇವ್ನ ಅಡ್ಡ್ಯಾಡಾಕ ಓಡಿಹೋಗಾಕ ಹಿಂಗಾಲುಗಳನ್ನ, ಮತ್ತು ಕೆದರು ಕೆದಕು ಕೆಣಕು ಹಿಡಿ ಬಡಿ ಕಡಿ ಜಡಿಗಳಿಗೆ ಮುಂಗಾಲು ಅಥವಾ ಕೈಗಳನ್ನು ಬಳಸತಾನ. ಹಿಂಗಾಲು 'ಕೈ' ಕೊಟ್ಟರೂ ಇರದೇ ಹೋದರೂ ಮುಂಗಾಲು-ಕೈಗಳನ್ನ್ಅ ನಾಲ್ಕೂ ಕಾಲು-ಕೆಲಸಕ್ಕ ತೊಡಗಿಸಿ, ಬಿದ್ದಲ್ಲೆ ಬಿದ್ದುಕೊಂಡು, ಇದ್ದಲ್ಲೆ ಎದ್ದುಕೊಂಡು ತನ್ನ ಸಂಪೂರ್ಣ ಅರಣ್ಯಕಾಂಡವನ್ನ ಆಳುವ ಗತ್ತು ಮತ್ತು ಶ್ಯಾಣೇತನವನ್ನ ಈ ಪ್ರಾಣಿ-ಪಶು ಸಾಧಿಸಿಕೊಂಡಾನ.

ಇಂಥಾ ಸಾಧನೆಯ ಮುಂದುವರಿಕೆಯಾಗಿ ಹಳೆಯ ಪ್ರಕಾರದ ಪ್ರಾಣಿಗಳಿಗೆ ಬದಲಾಗಿ ಇವ್ನನಿಗೆ ದಕ್ಕಿದ್ದು ಹೊಸ ರೀತಿಯಲ್ಲಿ ಪ್ರಯೋಗ ಮಾಡಬಹುದಾದಂಥ ನಾಲ್ಕು ಬೇಲಿಕೈ ಅಥವಾ ಕೀಲಿಕೈಗಳು. ಈ ಕೈಗಳನ್ನ ಬಳಸಿಕೊಂಡು ಅವ್ನ ನಾಗರಿಕ ಪ್ರಪಂಚದ ಯಾವ ಮೂಲೆಯೊಳಗೂ ಸುಳಿಯಬಲ್ಲ, ಹೊಳೆಯಬಲ್ಲ. ಸುಳಿಯುವ ಮೂಲಕ ಒಳಗ ಸೇರಿಕೋತಾನ, ಸೇರಿಕೊಂಡ ಮ್ಯಾಲ ಹೊಳೆದು ತನ್ನ ಅಧಿಕಾರ ಜಮಾಯಿಸಲಿಕ್ಕೆ ಏನು ಬೇಕೋ ಅದನ್ನೆಲ್ಲಾ ಮಾಡತಾನ. ಅಚ್ಚ ಸಂಸ್ಕೃತದೊಳಗ ಈ ಕೀಲಿಕೈಗಳಿಗೆ ಭಾಷಾ ಭೂಷಾ ಭೋಜನ ಭವನ ಅಂತ ಕರೀತಾರ.

ಭಾಷೆ-ಭಾಷಣ-ಮಾತು-ಶಬ್ದ-ನುಡಿ-ವಾಕ್-ಅಭಿವ್ಯಕ್ತಿಯ ಮೂಲಕ ಮನುಷ್ಯ ಧ್ವನಿಗಳನ್ನ ಬಳಸತಾನ, ದನಿ ಎತ್ತರಿಸಿ ಮಾತಾಡತಾನ, ಧನಿ-ಧಣಿ ಆಗಿ ಮೆರೀತಾನ. ಭಾಷೆಯನ್ನ ಬಲ್ಲವನಾದರೂ ಸರಿ, ಕೊಲ್ಲವನಾದರೂ ಸರಿ, ಒಟ್ಟಿನ ಮ್ಯಾಲ ಅದರ ಪೂರಾ ಲಾಭ ಮಾಡಿಕೊಂಡು, ಅದರಿಂದ ಸಲ್ಲಬೇಕಾದ್ದನ್ನೆಲ್ಲ ಪಡಕೊಂಡು, ಉಳಿದವರ ಬಾಯಿ ಬಡಕೊಂತ ಅಡ್ಡ್ಯಾಡತಾನ. ಇದಕ್ಕ ಜ್ಞಾನ ಅನ್ನಬಹುದು, ವಕೀಲಿ ವಸೀಲಿ ಅನ್ನಬಹುದು, ಬುದ್ಧಿವಂತಿಕೆ ಜಾಣತನ ಅನ್ನಬಹುದು. ಆದರ ಅರ್ಥವಂತಿಕೆ ಅಥವಾ ತಿಳಿವಳಿಕೆ ಅನ್ನಾಕ ಆಗೂದುಲ್ಲ. ಯಾಕಂದರ ತಿಳಿವಳಿಕೆಯ ತಳಹದಿಯ ಮ್ಯಾಲ ನಿಂತಾವ್ನ ದನಿ ಎತ್ತರಸೂದುಲ್ಲ, ಪದಗಳ ದುರುಪಯೋಗದ ಧಂಧೇಕ ಇಳಿಯೂದುಲ್ಲ, ಅರ್ಥಸಂಗ್ರಹಗಳನ್ನ ಅರ್ಥಸಂಚಯನಕ್ಕಾಗಿ ದುಡಿಸೂದುಲ್ಲ. ಬಳಸಿದರ

ಭಾಷೆ ಬರೇ ಮಾತು, ಉಳಸಿದರ ಮಾತೆ. ವಾಕ್‌ದಾನ ಅನ್ನೂದು ದಾನಭಾವದಿಂದ ಪದಾರ್ಥ ಆಗಬೇಕು, ಚೇತನ ಆಗಬೇಕು. ದಾನವಭಾವದಿಂದ ಹೀನತ್ವಕ್ಕ ಇಳಿಯಬಾರದು.

ಭೂಷಾ-ವೇಷ-ಭೂಷಣ-ವಸನ-ಉಡುಗೆ-ತೊಡುಗೆ-ಆಭರಣ-ಅಲಂಕಾರ ಮುಂತಾದ ಎಲ್ಲಾ ರೀತಿಯ ಪ್ರದರ್ಶನಗಳು ಮಿತಿಯೊಳಗಿದ್ದರ ಛಂದ. ಇಲ್ಲದಿದ್ದರ ಸ್ವಚ್ಛಂದ. ಇವುಗಳಿಂದ ದೇಹದ ಮರ್ಯಾದೆ ಮುಚ್ಚಬೇಕು, ಮನಸ್ಸಿನ ಮರ್ಯಾದೆ ಹೆಚ್ಚಬೇಕು. ಅದನ್ನ ಬಿಟ್ಟು ಖಾಲೀ ದಿಮಾಕ ತೋರಸಾಕ ಬಳಸಬಾರದು. ಕಾಲಕ್ಕ, ಹವಾಮಾನಕ್ಕ, ದೇಹಧರ್ಮಕ್ಕ, ಪರಿಸ್ಥಿತಿಗೆ, ಅನುಕೂಲಕ್ಕ ತಕ್ಕಂಗ ವೇಷಭೂಷಣಗಳನ್ನ ಮಿತಿಯೊಳಗ ಬಳಸಿದರ ಅದು ಅಲಂಕಾರ. ಅತಿಯಾದರ ಅಹಂಕಾರ. ಮನುಷ್ಯ ಪ್ರಾಣಿಗೆ ಕೈ-ಕಾಲುಗಳ ಭಿನ್ನ ಆಕೃತಿ ದಕ್ಕಿದಾಗಿನಿಂದ ವೇಷಭೂಷಣದ ಗೊಂದಲ ಅವ್ನನನ್ನ ಕಾಡತಾನ್‌ಅ ಬಂದಯ್ತಿ. ಇವತ್ತಿಗೂನೂ ಅದನ್ನ ಸಂಯಮದೊಳಗ, ಹಿಡಿತದೊಳಗ ಇಟಗೊಳ್ಳುವ ಕಲಾ ಅವ್ನಗ ಸಾಧಿಸಲಾರದಾಗೇತಿ.

ಇನ್ನ ಭೋಜನದ ಬಗ್ಗೆಯಂತೂ ಹೇಳೂದ್‌ಅ ಬ್ಯಾಡ. ಭೋಜನ-ಆಹಾರ-ಅಶನ-ಅನ್ನ-ಊಟ-ತಿಂಡಿ ತಿನಿಸು ಉಣಿಸುಗಳು ದೇಹಕ್ಕ ಮಾಡುವ ಉಪಕಾರಕ್ಕಿಂತ ಅಪಕಾರನ್‌ಅ ಜಾಸ್ತಿ. ಅರಿತು ತಿಂದರ ಆಹಾರ ಉಸಿರಿನ ರಸ, ಉಪಾಯ. ಮರೆತು ತಿಂದರ ಆರೋಗ್ಯಕ್ಕ ವಿಷ, ಅಪಾಯ. ನಾಲಿಗಿಯ ಮೂಲಕ ದೇಹದ ಕೋಟೆಯನ್ನ ಪ್ರವೇಶಿಸುವ ಸಿಹಿ ಕಹಿ ಹುಳಿ ಖಾರ ಒಗರುಗಳ ಪಂಚಾಸ್ತ್ರ ಆಹಾರ ರಕ್ಷಕನೂ ಹೌದು ಭಕ್ಷಕನೂ ಹೌದು. ಬರೇ ಗಡ್ಡೆ ಗೆಣಸು ಸಸ್ಯಗಳನ್ನ ತಿಂದವರು ಅದಾರ. ನೀರು ಗಾಳಿಯ ಮ್ಯಾಲ್‌ಅ ಬದುಕಿದವರು ಅದಾರ. ಮಾಂಸಭಕ್ಷಕರು ಮನುಷ್ಯಭಕ್ಷಕರೂ ಅದಾರ. ನಿರಗ್ನಿ ಆಹಾರದವರು ಅದಾರ. ಅಗ್ನಿಆಹಾರ ಯಾಕ, ಅಗ್ನಿಯನ್ನ್‌ಅ ತಿಂದವರು ಅದಾರ. ದೇಹಕ್ಕ ಅದು ಬೇಕು ಇದು ಬೇಕು ಅಂತಿಲ್ಲ. ಕೊಟ್ಟರೂ ಸೈ. ಕೊಡದಿದ್ದರೂ ಸೈ. ಖರೇ ಅಂದರ ದೇಹ ತಿನ್ನಾಕ ಭಾಳ ಬಯಸೂದುಲ್ಲ ಅಥವಾ ಭಾಳ ತಿನ್ನಾಕೂ ಬಯಸೂದುಲ್ಲ. ನಾವ್ನ್‌ಅ ಅದಕ್ಕ ಮಿತಿ ತಿಳಿಸಿಲ್ಲ ಅಷ್ಟ್‌ಅ. ತಿಂದ ತಿಂದ ಗತಿ ತೋರಿಸಿಬಿಡತೇವು. ಅದು ರೂಢಿಯಾಗಿ ಮುಂದ ಅದ್‌ಅ ಪ್ರಕಾರ ಬೇಡಾಕ ಸುರು ಮಾಡತಯ್ತಿ. ಅದನ್ನ ಅಗತ್ಯ ಅಂತ ನಾವು ತಿಳಕೋತೇವಿ. ಖರೇ ಅಂದರ ಮಿತಾಹಾರ ಸ್ವಸ್ಥ ಆರೋಗ್ಯ, ಶಿಷ್ಟ ಚಿಂತನ, ದೀರ್ಘಾಯುಷ್ಯಕ್ಕ ದಾರಿ.

ಭವನ-ವಸತಿ-ಮನಿ-ನಿವಾಸ ಅನ್ನೂದು ಅಲ್ಪ ಪ್ರಮಾಣದೊಳಗ ಎಲ್ಲಾ ಥರದ ಪ್ರಾಣಿಗಳಿಗೂ ಬೇಕು. ಆದರ ೨ ಕೈ + ೨ ಕಾಲಿನವ್ನ ದಿನಾ ರಾತ್ರಿಹೊತ್ತು ಮಲಕೊಳ್ಳಾಕ ಬೇಕಾಗುವ, ಭಾಳಂದರ ೨' x ೬' ಜಗಾದ ಸಲುವಾಗಿ, ಅಥವಾ ಒಮ್ಮೊಮ್ಮೆ ಬಿಸಿಲು ಮಳಿ ಗಾಳಿ ಇದ್ದಾಗ ಒಂದೀಟ ಹೆಚ್ಚಿನ ಅರಾಮದ ಜಗಾದ ಸಲುವಾಗಿ ಎಷ್ಟ ಖರ್ಚು ಮಾಡತಾನ, ಎಂಥೆಂಥಾ ಕಲ್ಲು ಕಟಗಿ ಇಟ್ಟಂಗಿ ಸಿಮೀಟಿನ ಅಂತಸ್ತುಗಳ ಕಟೂಡಿ ಕಟಗೊಂದು ಸ್ವನಿರ್ಮಿತ ಕಾರಾಗೃಹಗಳಲ್ಲಿ ಬಂದೀ ಆಗತಾನ. ಅಷ್ಟ ಜಾಗಾದ ಸಲುವಾಗಿ ಸುತ್ತಮುತ್ತ ಎಷ್ಟೆಷ್ಟ ಜಾಗಾ ಖರೀದಿ ಮಾಡತಾನ ಏನತಾನ.

ಇರಲಿ, ಇವೆಲ್ಲ ಬ್ಯಾಡ ಅಂತಲ್ಲ. ಆದರ ಪ್ರತಿಯೊಂದಕ್ಕೂ ಮಿತಿ ಅಯ್ತಿ ಅನ್ನುವ ಅರಿವು ಮೂಡಿದ ಕ್ಷಣ ಇಕ್ಕಾಲು ಇಕ್ಕೈಗಳನ್ನು ಹೊಂದಿರುವ ನಾಗಾಲು ಪ್ರಾಣಿಯ ಅಸ್ತಿತ್ವದ ತೆಳು ಪ್ರಜ್ಞಾಪರದೆಗೆ ಅರ್ಥ ಬರತಯ್ತಿ. ಇಲ್ಲದಿದ್ದರ ಅವ್ನ ತನ್ನ ಮೂಲ ಪಶುತ್ವದ ಕಡೆಗೆನ್‌ಅ ವಾಪಸ್ ಹೊಂಟಾನಂತ ತಿಳೀಬೇಕಾಕ್ಕತಿ.

SANKALANA: RNI No. KARKAN 14160/10/1/2002-TC

ಸಂಕಲನ : ೧೪ ಜುಲಾಯಿ ೨೦೦೪ ಸಂಪುಟ ೩, ಸಂಚಿಕೆ ೪

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

• ಗೀತಾ ನಾಗಭೂಷಣ • ಕಾರ್ಯಾನಂದ • ಗುಂಡಣ್ಣ ಕಲಬುರ್ಗಿ
• ಶಂಕರಗೌಡ ಸಾತ್ಮಾರ • ಎಚ್. ಡಿ. ಚಂದ್ರಪ್ಪಗೌಡ
• ಬಸವರಾಜ ವಕ್ಕುಂದ • ಚಿದಾನಂದ ಸಾಲಿ • ಸುಮತೀಂದ್ರ ನಾಡಿಗ
• ಜಿ. ಭಾಸ್ಕರ ಮಯ್ಯ • ಸಂತೋಷ ಚೊಕ್ಕಾಡಿ • ಸಿ. ಸೋಮಶೇಖರಯ್ಯ
• ಚಂದ್ರಗೌಡ ಕುಲಕರ್ಣಿ • ಪ್ರಸನ್ನ • ಶೈಲಾ ಛಬ್ಬಿ
• ನಾರಾಯಣ ಕಂಗಿಲ

•

ಶ್ರೀಪತಿ ಮಂಜನಬೈಲು ದೇಶಪಾಂಡೆ ಸುಬ್ಬರಾಯ ಬ. ಸೋ. ಗೊರವರ
ಚಂದ್ರಗೌಡ ಕುಲಕರ್ಣಿ ಅಶೋಕ ಶೆಟ್ಟರ್ ಎಂ. ಡಿ. ಗೋಗೇರಿ
ಎಚ್. ಎಸ್. ಪಾಟೀಲ ಶಿವಶಂಕರ ಹಿರೇಮಠ ದುಷ್ಯಂತ ನಾಡಗೌಡ
ಪಾರ್ವತಿ ಪೂಜಾರ

•

ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳು
ಹರಿಕೃಷ್ಣ ಭರಣ್ಯ ಎನ್ಕೆ ಕುಲಕರ್ಣಿ ಲಲಿತಾ ಸಿದ್ದಬಸವಯ್ಯ
ಎಸ್. ಶೇಷಾದ್ರಿ ಕಿನಾರ ಜಿ. ಇ. ಅಜ್ಜಪ್ಪ ಶರಣಗೌಡ ಎರಡೆತ್ತಿನ
ಅಶೋಕ ನರೋಡೆ ಚಂದ್ರಶೇಖರ ರೊಟ್ಟಿಗವಾಡ ಎ. ಡಿ. ನಂಜುಂಡಸ್ವಾಮಿ
ಎಂ. ಡಿ. ಗೋಗೇರಿ ಶ್ಯಾಮ ಹುದ್ದಾರ ಸಂತೋಷ ಚೊಕ್ಕಾಡಿ
ಎಲ್. ವಿ. ಶಾಂತಕುಮಾರಿ ದಮಯಂತಿ ನರೇಗಲ್ಲ ಸಿ. ಸೋಮಶೇಖರಯ್ಯ
ಕೆ. ಎಸ್. ರತ್ನಮ್ಮ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮[illegible]೦೪